ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 18 ಶನಿವಾರ 2025

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

45

ಸಂಪುಟ: 45 | ಸಂಚಿಕೆ: 271 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮೈಸೂರು ಮಿತ್ರ

ಕೆನಡಾ ಪ್ರಧಾನಿ ಹುದ್ದೆಗೆ ಕನ್ನಡಿಗನ ನಾಮಪತ್ರ

ಭಾಷಣದ ಕೊನೆಯಲ್ಲಿ 'ಕನ್ನಡವೇ ಸತ್ಯ ಕನ್ನಡವೇ ನಿತ್ಯ' ಎಂದ ಚಂದ್ರ ಆರ್ಯ

ಒಟ್ಟಾವಾ, ಜ.17– ಕೆನಡಾದ ಪ್ರಧಾನಿ ಹುದ್ದೆಗೆ ಕರ್ನಾಟಕ ಮೂಲದ ಚಂದ್ರ ಆರ್ಯ ಅಧಿಕೃತವಾಗಿ ನಾಮಪತ್ರ ಸಲಿಸಿದ್ದಾರೆ. ಲಿಬರಲ್ ಪಕ್ಷದಿಂದ ಪ್ರಧಾನಿ ಹುದ್ದೆಗೆ ಉಮೇದುವಾರಿಕೆ ಸಲ್ಲಿಸಿದ ಚಂದ್ರ ಆರ್ಯ ಬಳಿಕ ಕನ್ನಡದಲ್ಲಿ ಮಾತನಾಡಿ ಗಮನ ಸೆಳೆದಿದ್ದಾರೆ.

ಸದನವನ್ನು ಉದ್ದೇಶಿಸಿ ಆರ್ಯ, ತಮ್ಮ ಪರಂಪರೆಯ ಬಗ್ಗೆ ಅಪಾರ ಹೆಮ್ಮೆಯಿಂದ ಮಾತನಾಡಿದರು. ಕರ್ನಾಟಕದ ತುಮಕೂರು ಜಿಲ್ಲೆಯ ಶಿರಾ ತಾಲೂಕಿನ ದ್ವಾರಲು ಗ್ರಾಮದ ವ್ಯಕ್ತಿಯೊಬ್ಬರು ಕೆನಡಾದಲ್ಲಿ ಸಂಸದರಾಗಿ ಆಯ್ಕೆಯಾಗಿದ್ದು, ಈಗ ಈ ಗೌರವಾನ್ವಿತ ಸಂಸ್ಥೆಯಲ್ಲಿ ಕನ್ನಡದಲ್ಲಿ ಮಾತನಾಡುತ್ತಿರುವುದು ಸುಮಾರು 5 ಕೋಟಿ ಕನ್ನಡಿಗರಿಗೆ ಹೆಮ್ಮೆಯ ಕ್ಷಣವಾಗಿದೆ ಎಂದು ತಿಳಿಸಿದರು.

ಭಾಷಣದ ಕೊನೆಯಲ್ಲಿ ರಾಷ್ಟ್ರಕವಿ ಕುವೆಂಪು ಹಾಗೂ ನಟ ಡಾ.ರಾಜ್‌ಕುಮಾರ್ ಅವರು ಹಾಡಿದ್ದ ಪ್ರಸಿದ್ಧ ಹಾಡಿನ ಸಾಲನ್ನು ಹೇಳಿದರು. 'ಎಲ್ಲಾದರೂ ಇರು ಎಂಥಾದರು ಇರು ಎಂದೆಂದಿಗೂ ನೀ ಕನ್ನಡವಾಗಿರು', 'ಕನ್ನಡವೇ ಸತ್ಯ ಕನ್ನಡವೇ ನಿತ್ಯ' ಎಂದು ಹೇಳಿ ತಮ್ಮ ಮಾತಿಗೆ ಪೂರ್ಣ ವಿರಾಮ ಹಾಕಿದರು. ಈ ಹಿಂದೆ ಸಂಸದರಾಗಿ ಆಯ್ಕೆಯಾದ ವೇಳೆಯೂ ಸಂಸತ್‌ನಲ್ಲಿ ಕನ್ನಡದಲ್ಲಿ ಮಾತನಾಡಿ ಗಮನ ಸೆಳೆದಿದ್ದರು.

ರಾಷ್ಟ್ರವನ್ನು ಪುನರ್ನಿರ್ಮಿಸಲು ಮತ್ತು ಭವಿಷ್ಯದ ಪೀಳಿಗೆಗೆ ಉತ್ತಮ ವಾತಾವರಣ ನಿರ್ಮಿಸಲು ಹೆಚ್ಚು ಪರಿಣಾಮಕಾರಿ ಸರ್ಕಾರವನ್ನು ಮುನ್ನಡೆಸಲು ಕೆನಡಾದ ಮುಂದಿನ ಪ್ರಧಾನಿಯಾಗಲು ನಾನು ಸ್ಪರ್ಧಿಸುತ್ತಿದ್ದೇನೆ ಎಂದು ಅವರು ಎಕ್ಸ್‌ನಲ್ಲಿ ಹೇಳಿಕೊಂಡಿದ್ದಾರೆ.

ನಮ್ಮ ಮಕ್ಕಳು ಮತ್ತು ಮೊಮ್ಮಕ್ಕಳ ಹಿತ ದೃಷ್ಟಿಯಿಂದ ನಾವು ಸಂಪೂರ್ಣವಾಗಿ ಅಗತ್ಯವಾದ ದಿಟ್ಟ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು. ಲಿಬರಲ್ ಪಕ್ಷದ ಮುಂದಿನ ನಾಯಕರಾಗಿ ಆಯ್ಕೆಯಾದರೆ, ನನ್ನ ಜ್ಞಾನ


ಕನ್ನಡದಲ್ಲೇ ಭಾಷಣ ಮಾಡಿದ ಚಂದ್ರ ಆರ್ಯ

ಮತ್ತು ಪರಿಣಿತಿಯ ಮೇಲೆ ಉತ್ತಮ ಆಡಳಿತ ನೀಡುತ್ತೇನೆ ಎಂದು ಅವರು ಪೋಸ್ಟ್‌ನಲ್ಲಿ ಉಲ್ಲೇಖಿಸಿದ್ದಾರೆ.

ಆರ್ಯ ಅವರು 2015 ರಲ್ಲಿ ಮೊದಲ ಬಾರಿಗೆ ಹೌಸ್ ಆಫ್ ಕಾಮನ್ಸ್‌ಗೆ ಆಯ್ಕೆಯಾದರು ಮತ್ತು 2019 ರಲ್ಲಿ ಮರು ಆಯ್ಕೆಯಾದರು. 2022 ರಲ್ಲಿ ಹೌಸ್ ಆಫ್ ಕಾಮನ್ಸ್‌ನಲ್ಲಿ ಮಾತೃ ಭಾಷೆ ಕನ್ನಡದಲ್ಲಿ ಮಾತನಾಡುವ ಮೂಲಕ ಗಮನ ಸೆಳೆದರು. ಹಿಂದೂ ಕೆನಡಿಯನ್ನರ ಪರವಾಗಿ ವಾದಿಸುವ ವಕೀಲರಾಗಿ, ಆರ್ಯ ಆಗಾಗ ದೃಢವಾದ ನಿಲುವುಗಳನ್ನು ತೆಗೆದುಕೊಂಡಿದ್ದಾರೆ.

2024 ರಲ್ಲಿ ಸಂಸತ್ತಿನ ಹೊರಗೆ 'ಓಂ' ಚಿಹ್ನೆಯನ್ನು ಹೊಂದಿರುವ ಕೇಸರಿ ಧ್ವಜವನ್ನು ಹಾರಿಸಿದ್ದರು. ಇದು ಚರ್ಚೆಗೆ ಗ್ರಾಸವಾಗಿತ್ತು. ಹಿಂದೂ ಸಮುದಾಯ ರಾಜಕೀಯದಲ್ಲಿ ಪಾಲ್ಗೊಳ್ಳುವಂತೆ ಪ್ರೋತ್ಸಾಹಿಸಲು ಅವರು ಈ ಸಂದರ್ಭವನ್ನು ಬಳಸಿಕೊಂಡಿದ್ದರು. ಅವರು, ಧಾರವಾಡದಲ್ಲಿರುವ ಕೌಸಾಲಿ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್‌ನಿಂದ ಎಂಬಿಎ ಪದವಿ ಪಡೆದಿದ್ದಾರೆ. 20 ವರ್ಷಗಳ ಹಿಂದೆ ಒಟ್ಟಾವಾಕ್ಕೆ ತೆರಳಿದ್ದರು. ರಾಜಕೀಯ ಪ್ರವೇಶಿಸುವ ಮೊದಲು ಎಂಜಿನಿಯರ್, ಹೂಡಿಕೆ ಸಲಹೆಗಾರ ಮತ್ತು ಉದ್ಯಮಿಯಾಗಿ ಕೆಲಸ ಮಾಡಿದ್ದರು.

ಶ್ರೀರಾಮ ಮಂದಿರ ನಿರ್ಮಾಣದಿಂದ ಸ್ವಾತಂತ್ರ್ಯ ಸಿಕ್ಕಿದೆ ಹೇಳಿಕೆ

ಆರ್‌ಎಸ್‌ಎಸ್ ಮುಖಸ್ಥ ಮೋಹನ್ ಭಾಗವತ್ ವಿರುದ್ಧ ಕ್ರಮಕ್ಕೆ ಕೆಪಿಸಿಸಿ ಉಪಾಧ್ಯಕ್ಷ ಉಗ್ರಪ್ಪ ಆಗ್ರಹ

ಮೈಸೂರು, ಜ.17(ಜಿಎ)– ಶ್ರೀರಾಮ ಮಂದಿರ ನಿರ್ಮಾಣ ಬಳಿಕ ಸ್ವಾತಂತ್ರ್ಯ ಬಂದಿದೆ ಎಂದು ಹೇಳಿಕೆ ನೀಡಿದ್ದ ಮೋಹನ್ ಭಾಗವತ್ ಅವರ ಮೇಲೆ ಕ್ರಮ ಜರುಗಿಸುವಂತೆ ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರಿಗೆ ಕೆಪಿಸಿಸಿ ಉಪಾಧ್ಯಕ್ಷ ವಿ.ಎಸ್.ಉಗ್ರಪ್ಪ ಆಗ್ರಹಿಸಿದರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಹುಲ್ ಗಾಂಧಿ ಹೇಳಿಕೆ ಕೊಟ್ಟಾಗ ಅದಕ್ಕೆ ಅಪಾರ್ಥ ಕಲ್ಪಿಸಿ ಅವರ ಮೇಲೆ ದೂರು ಕೊಟ್ಟು ಕೇಸ್ ಹಾಕುವ ಕೆಲಸ ಬಿಜೆಪಿಯಿಂದ ನಡೆಯುತ್ತದೆ. ಆದರೆ ನಿಮ್ಮ ಮೂಲಕ ಕೇಳುತ್ತೇನೆ. ಮಿಸ್ಟರ್ ಮೋದಿ, ಮಿಸ್ಟರ್ ಅಮಿತ್ ಶಾ ನೀವು ಸಂವಿಧಾನದ ಅಡಿ ಪ್ರಧಾನಿ ಆಗಿರೋದು ಸಚಿವರಾಗಿರೋದು. ಮೋಹನ್ ಭಾಗವತ್ ಹೇಳಿಕೆಯಿಂದ ಸಂವಿಧಾನ ಮೇಲೆ ನಿಮಗೆ ಎಷ್ಟು ಗೌರವವಿದೆ ಎಂದು ಗೊತ್ತಾಗುತ್ತದೆ. ನೀವು ನಿಜವಾಗಿಯೂ ಸಂವಿಧಾನ ಪಾಲಕರಾಗಿದ್ದರೆ ಮೋಹನ್ ಭಾಗವತ್ ಮೇಲೆ ಕ್ರಮ ಜರುಗಿಸಿ ಎಂದು ಕಿಡಿಕಾರಿದರು.


ವಿ.ಎಸ್.ಉಗ್ರಪ

ಆರ್‌ಎಸ್‌ಎಸ್‌ನ ಮುಖ್ಯಸ್ಥ ಮೋಹನ್ ಭಾಗವತ್ ಅವರು ಭಾರತಕ್ಕೆ ಸ್ವಾತಂತ್ರ್ಯ ಬಂದಿದ್ದು 1947 ರಲ್ಲಿ ಅಲ್ಲ. ಅಯೋಧ್ಯೆಯಲ್ಲಿ ರಾಮಮಂದಿರ ಕಟ್ಟಿದ ಬಳಿಕ ಬಂದಿದೆ ಎನ್ನುತ್ತಾರೆ. ಇವರ ಮನಸ್ಥಿತಿ ಹೇಗಿದೆ ನೋಡಿ. ಈ ದೇಶದ ಸಂವಿಧಾನವನ್ನು ಗೌರವಿಸಬೇಕು. ದೇಶದ ಇತಿಹಾಸ ಪರಂಪರೆಯನ್ನ ಗೌರವಿಸಬೇಕು ಎಂದು ಸಂವಿಧಾನ ಹೇಳುತ್ತದೆ. ಸ್ವಾತಂತ್ರ್ಯಕ್ಕೆ ಹೋರಾಟ ಮಾಡಿದ ಪಕ್ಷ ಕಾಂಗ್ರೆಸ್. ಹಲವು ಜೀವಗಳ ತ್ಯಾಗ ಬಲಿದಾನದಿಂದ ದೇಶಕ್ಕೆ ಸ್ವಾತಂತ್ರ್ಯ ಬಂದಿದೆ. ಆದರೆ, ಅದನ್ನ ಅಲ್ಲಗಳೆಯುವಂತಹ ಕೆಲಸವನ್ನು ಆರ್‌ಎಸ್‌ಎಸ್ ಮಾಡುತ್ತಿದೆ. ಇದನ್ನ ಏನಂತ ಕರೆಯಬೇಕು ಎಂದು ಗುಡುಗಿದರು.

ಸುದ್ದಿ ಗೋಷ್ಠಿಯಲ್ಲಿ ಕಾಂಗ್ರೆಸ್ ಸಮಿತಿ ಜಿಲ್ಲಾಧ್ಯಕ್ಷ ಬಿ.ಜೆ. ವಿಜಯ್ ಕುಮಾರ್, ಆರ್.ಮೂರ್ತಿ, ಕಾಂಗ್ರೆಸ್ ಮುಖಂಡರಾದ ಶಿವಣ್ಣ, ಈಶ್ವರ್ ಚಕ್ಕಡಿ, ಎನ್.ಆರ್. ನಾಗೇಶ್, ದ್ಯಾವಪ್ಪನಾಯಕ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಇ–ಖಾತಾ ವಿತರಿಸಲು ನಿಯಮಾವಳಿ ಸರಳೀಕರಣಗೊಳಿಸಿ

ಪತ್ರ ಮುಖೇನ ಪಾಲಿಕೆ ಆಯುಕ್ತರಲ್ಲಿ ಮಾಜಿ ಮೇಯರ್ ಸಂದೇಶ್ ಸ್ವಾಮಿ ಆಗ್ರಹ

ಮೈಸೂರು,ಜ.16(ಪಿಎಂ)– ಮೈಸೂರು ಮಹಾನಗರ ಪಾಲಿಕೆಯಿಂದ ವಿತರಿಸುವ ಅರ್ಜಿ ನಮೂನೆ–2ರ ಇ ಖಾತಾ ಪ್ರಮಾಣ ಪತ್ರವನ್ನು ಪಡೆಯಲು ಸಾರ್ವಜನಿಕರು ಒದಗಿಸಬೇಕಾದ ದಾಖಲಾತಿಗಳನ್ನು ಸರಳೀಕರಣಗೊಳಿಸಿ ಆಸ್ತಿ ಮಾಲೀಕರಿಗೆ ಅನುಕೂಲ ಕಲ್ಪಿಸಲು ಸೂಕ್ತ ಕ್ರಮ ವಹಿಸಬೇಕೆಂದು ಮೈಸೂರು ಮಹಾನಗರ ಪಾಲಿಕೆ ಆಯುಕ್ತರಿಗೆ ಪತ್ರ ಮುಖೇನ ಮಾಜಿ ಮೇಯರ್ ಸಂದೇಶ್ ಸ್ವಾಮಿ ಆಗ್ರಹಿಸಿದ್ದಾರೆ.


ಸಂದೇಶ್ ಸ್ವಾಮಿ

ಇ–ಖಾತಾ ಪಡೆಯಲು ಆಸ್ತಿಯ ಛಾಯಾಚಿತ್ರ, ಮಾಲೀಕರ ಭಾವಚಿತ್ರ, ಆಧಾರ್ ಕಾರ್ಡ್, ಆಸ್ತಿ ತೆರಿಗೆ ರಶೀದಿ, ವಿದ್ಯುತ್, ನೀರಿನ ರಶೀದಿ, ಮುಡಾ, ಕೆಎಚ್ ಬಿ, ಖಾಸಗಿ ಬಡಾವಣೆಗಳ ಅನುಮೋದನೆ ಪತ್ರ, ಕಟ್ಟಡ ನಕ್ಷೆ ಅನುಮೋದನೆ ಪತ್ರ, ಆಸ್ತಿ ಕ್ರಯ ಪತ್ರ, ಸಿಆರ್‌ಗಳನ್ನು ಸಲ್ಲಿಸಬೇಕಿದೆ. ಇದನ್ನೆಲ್ಲಾ ಒದಗಿಸುವಲ್ಲಿ ಸಾರ್ವಜನಿಕರು ಪರಿತಪಿಸುವಂತಾಗಿದೆ.

ಇ–ಖಾತೆಯು ಆಸ್ತಿ ವರ್ಗಾಯಿಸಲು ತುಂಬಾ ಸುಲಭವಾಗಿದೆ. ಡಿಜಿಟಲ್ ಆಡಳಿತದ ಈ ವ್ಯವಸ್ಥೆಯು ಹೊಸದಾಗಿ ಆಸ್ತಿ ಖರೀದಿಸುವ ಮತ್ತು ಮಾರಾಟ ಮಾಡುವಲ್ಲಿ ಅನುಕೂಲವಾಗಿದ್ದು, ಕಾನೂನು ಬದ್ಧ ದಾಖಲಾತಿಗಳನ್ನು ಖಾತ್ರಿ ಪಡಿಸುವ ಜತೆಗೆ ಮೋಸದ ಆಸ್ತಿ ವಹಿವಾಟುಗಳನ್ನು ತೊಡೆದು ಹಾಕಲು ಸಹಾಯಕಾರಿ. ಆದರೆ ಇದರ ಪ್ರಯೋಜನ ಪಡೆಯಲು ಸಾರ್ವಜನಿಕರು ಹೆಣಗಾಡಬೇಕಾಗಿರುವುದು ದುರಂತ.

ಪುರಸಭೆ ಇದ್ದ ಕಾಲದಲ್ಲಿ ಆಸ್ತಿ ತೆರಿಗೆ ಪಾವತಿಗಾಗಿ ಆ ಭಾಗದ ಯಜಮಾನರಿಂದ ಉತ್ತರ ಪತ್ರ ಪಡೆಯಲಾಗುತ್ತಿತ್ತು. ನಗರ ಪಾಲಿಕೆಯಾದ ನಂತರ ಖಾತೆ ಹೊಣೆಗಾರಿಕೆ, ಕರ ಪಾವತಿ ಹೊಣೆಗಾರಿಕೆ ಎಂದು ಪರಿವರ್ತನೆಯಾಗಿ, ಈಗ ಅರ್ಜಿ ನಮೂನೆ–2 ಎಂದಾಗಿದೆ.

ಸುಮಾರು 60–70 ವರ್ಷದ ಕಟ್ಟಡಗಳಿಗೆ ಸಿಆರ್ ಇರುವುದಿಲ್ಲ. 50–60 ವರ್ಷದಿಂದ ವಾಸಿಸುತ್ತಿರುವ ಮಾಲೀಕರ ಬಳಿ ಖಾತೆ, ಕಂದಾಯ ರಶೀದಿ ಇದ್ದೇ ಇರುತ್ತೆ. ಅವುಗಳನ್ನೆ ಪರಿಗಣಿಸಬೇಕು. ಹೊಸದಾಗಿ ಎಲ್ಲಾ ದಾಖಲೆಗಳನ್ನು ಕೇಳುವ ಬದಲು ಮಾಲೀಕರ ಭಾವಚಿತ್ರ, ಆಧಾರ್ ಕಾರ್ಡ್, ಕ್ರಯಪತ್ರ ಸೇರಿದಂತೆ ಕಡಿಮೆ ದಾಖಲಾತಿಗಳನ್ನು ಪರಿಗಣಿಸಬೇಕು. ಹೊಸ ಕಂದಾಯದಾರರಿಗೆ ಹೊಸ ನಿಯಮ ಅನ್ವಯಿಸಲಿ. ಆದರೆ ಹಳೇ ಕಂದಾಯ ಪಾವತಿದಾರರಿಗೆ ಅಗತ್ಯ ದಾಖಲಾತಿ ನೆಪದಲ್ಲಿ ಅಧಿಕಾರಿಗಳು ತೊಂದರೆ ನೀಡುತ್ತಿರುವ ಬಗ್ಗೆ ದೂರುಗಳು ಕೇಳಿ ಬಂದಿವೆ.

ಅರ್ಜಿ ನಮೂನೆ 2 ಅನ್ನು 15 ದಿನದೊಳಗೆ ವಿತರಿಸಬೇಕೆಂದು 2024ರ ಡಿ.18ರಂದು ಸರ್ಕಾರ ಆದೇಶ ಹೊರಡಿಸಿದೆ. ಆದ್ದರಿಂದ ತಾವು ಅರ್ಜಿ ನಮೂನೆ 2 ಅನ್ನು ಪಡೆಯಲು ಇರುವ ದಾಖಲಾತಿಗಳನ್ನು ಸರಳೀಕರಣಗೊಳಿಸಬೇಕು ಮತ್ತು ತ್ವರಿತಗತಿಯಲ್ಲಿ ದೊರಕುವಂತೆ ಅಗತ್ಯ ಕ್ರಮ ವಹಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಆಯುಕ್ತರಲ್ಲಿ ಸಂದೇಶ್ ಸ್ವಾಮಿ ಕೋರಿದ್ದಾರೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಜನವರಿ 18 ಶನಿವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 271 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮುಡಾ ಹಗರಣ: ಇಡಿಯಿಂದ ಸದ್ಯಕ್ಕೆ 300 ಕೋಟಿಗೂ ಅಧಿಕ ಮೌಲ್ಯದ

142 ಸ್ಥಿರಾಸ್ತಿಗಳ ಮುಟ್ಟುಗೋಲು

ಅಧಿಕೃತ ಪ್ರಕಟಣೆ; ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ದಾಖಲಾಗಿದ್ದ ಪ್ರಕರಣ ಆಧರಿಸಿ ತನಿಖೆ ನಡೆಸಿದ್ದ ಇಡಿ

● ಸಿಎಂ ಸಿದ್ದರಾಮಯ್ಯರ ಪತ್ನಿಗೆ ಮಂಜೂರಾದ ನಿವೇಶನಗಳ ಹೊರತುಪಡಿಸಿ ರಿಯಲ್ ಎಸ್ಟೇಟ್ ಉದ್ಯಮಿಗಳು ಸೇರಿ ಹಲವರಿಗೆ ಅಕ್ರಮವಾಗಿ ನಿವೇಶನ ಹಂಚಿಕೆ ● ಆಗಿನ ಮುಡಾ ಅಧ್ಯಕ್ಷರು, ಆಯುಕ್ತರಿಗೆ ಮುಡಾ ನಿವೇಶನಗಳು ನಗದು ಇತ್ಯಾದಿಗಳ ರೂಪದಲ್ಲಿ ಅಕ್ರಮವಾಗಿ ಪಾವತಿಸಿದ ಬಗ್ಗೆ ಪುರಾವೆಗಳು ಲಭ್ಯ ● ಜಿ.ಟಿ.ದಿನೇಶ್‌ಕುಮಾರ್ ಸಂಬಂಧಿಕರ ಹೆಸರಿನಲ್ಲಿ ಆಸ್ತಿ, ಐಷಾರಾಮಿ ವಾಹನ ಖರೀದಿಸಲು ಸಹಕಾರಿ ಸಂಘದ ಮೂಲಕ ಹಣ ವರ್ಗಾವಣೆ



ಬೆಂಗಳೂರು, ಜ.17–ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಹಗರಣದ ತನಿಖೆಯಲ್ಲಿ ಮಹತ್ತರ ಬೆಳವಣಿಗೆಯಾಗಿದೆ.

ಪ್ರಕರಣದ ತನಿಖೆ ನಡೆಸುತ್ತಿದ್ದ ಜಾರಿ ನಿರ್ದೇಶನಾಲಯ(ಇಡಿ), ಪ್ರಕರಣಕ್ಕೆ ಸಂಬಂಧಪಟ್ಟಂತೆ ಅಂದಾಜು 300 ಕೋಟಿ ಮಾರುಕಟ್ಟೆ ಮೌಲ್ಯದ 142 ಸ್ಥಿರಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು 'ಎಕ್ಸ್' ನಲ್ಲಿ ಮಾಹಿತಿ ನೀಡಿದೆ. ರಿಯಲ್ ಎಸ್ಟೇಟ್ ಉದ್ಯಮಿಗಳು ಹಾಗೂ ಏಜೆಂಟ್‌ಗಳಾಗಿ ಕೆಲಸ ಮಾಡುವವರ ಹೆಸರಿನಲ್ಲಿ ಸೈಟ್‌ಗಳು ನೋಂದಣಿಯಾಗಿವೆ ಎಂದು ಇಡಿ ಮಾಹಿತಿ ನೀಡಿದೆ. ಕರ್ನಾಟಕದ ಹಾಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಅವರ ಪತ್ನಿ ಶ್ರೀಮತಿ ಬಿ.ಎಂ.ಪಾರ್ವತಿ ಹಾಗೂ ಇತರರ ವಿರುದ್ಧ ಮೈಸೂರು ಲೋಕಾಯುಕ್ತ ಪೊಲೀಸರು, 1860ರ ಐಪಿಸಿಯ ವಿವಿಧ ಸೆಕ್ಷನ್ ಮತ್ತು ಭ್ರಷ್ಟಾಚಾರ ತಡೆ ಕಾಯ್ದೆ, 1988ರ ಅಡಿಯಲ್ಲಿ ದಾಖಲಿಸಿದ ಎಫ್‌ಐಆರ್ ಆಧಾರದ ಮೇಲೆ ಅಕ್ರಮ



■ 9ನೇ ಪುಟಕ್ಕೆ

▶ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪತ್ನಿ ಶ್ರೀಮತಿ ಬಿ.ಎಂ. ಪಾರ್ವತಿಯವರಿಗೆ ಮುಡಾದಿಂದ ಮಂಜೂರಾಗಿರುವ 14 ನಿವೇಶನಗಳಿಗೆ ಸಂಬಂಧಿಸಿದಂತೆ ಮೈಸೂರು ಲೋಕಾಯುಕ್ತ ಕಚೇರಿಯಲ್ಲಿ ದಾಖಲಾಗಿರುವ ಪ್ರಕರಣದ ಬಗ್ಗೆ ಮಾತ್ರ ನಾವು ತನಿಖೆ ನಡೆಸುತ್ತಿದ್ದು, ತನಿಖಾ ವರದಿಯನ್ನು ಜ. 25ಕ್ಕೆ ನ್ಯಾಯಾಲಯಕ್ಕೆ ಸಲ್ಲಿಸಲಿದ್ದೇವೆ. ಇಡಿ ಅವರು ಮುಡಾದಲ್ಲಿ ನಡೆದಿರುವ ಎಲ್ಲಾ ಪ್ರಕರಣಗಳ ಬಗ್ಗೆಯೂ ತನಿಖೆ ನಡೆಸುತ್ತಿದ್ದಾರೆ. ಅವರ ತನಿಖೆಗೂ, ನಮ್ಮ ತನಿಖೆಗೂ ಯಾವುದೇ ಸಂಬಂಧವಿಲ್ಲ.



– ಸುಬ್ರಮಣ್ಯೇಶ್ವರರಾವ್, ಎಡಿಜಿಪಿ, ಲೋಕಾಯುಕ್ತ

ನಕ್ಕರೆ ಅದೇ ಸ್ವರ್ಗ

ಸಂಗ್ಯಾ : ನೀನು ಎಟಿಎಂನಿಂದ ಹಣ ಡ್ರಾ ಮಾಡುವಾಗ ಸ್ಕ್ರೀನ್ ಮೇಲೆ ನಿನ್ನ ಪಿನ್ ನಂಬರ್ ನೋಡಿಕೊಂಡೆ.
ಡುಂಗ್ಯಾ : ಏನು ಹೇಳು ನೋಡೋಣ ಮತ್ತೆ...?
ಸಂಗ್ಯಾ : **** ಹೀಗೆ ನಾಲ್ಕು ಸ್ಟಾರ್‌ಗಳು!

ಮೈಸೂರು ಮಿತ್ರ

ಶನಿವಾರ, 18 ಜನವರಿ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಪ್ರತಿಯೊಬ್ಬ ಮಾನವನಲ್ಲೂ ಸುಪ್ತವಾಗಿರುವ ದೈವೀ ಶಕ್ತಿಯನ್ನು ಪ್ರಕಟಗೊಳಿಸಿ ಪ್ರಕಾಶಿಸುವಂತೆ ಮಾಡುವುದೇ ನಿಜವಾದ ಧರ್ಮ –ಸ್ವಾಮಿ ವಿವೇಕಾನಂದ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬೇಸರವಿರಬಾರದು, ಅವಸರ ಮಾಡಬಾರದು.

ನಿಮ್ಮ ಪತ್ರಗಳು

ಹಸುಗಳ ಕೆಚ್ಚಲು ಕೊಯ್ದವರ ವಿರುದ್ಧ ಕಾನೂನು ಕ್ರಮ ಏಕಿಲ್ಲ?

ಮಾನ್ಯರೆ,

ಬೆಂಗಳೂರಿನಲ್ಲಿ ಹಸುಗಳ ಕೆಚ್ಚಲು ಕೊಯ್ದು ಅಮಾನುಷವಾಗಿ ವರ್ತಿಸಿದವರ ಮೇಲೆ ಕಠಿಣ ಕ್ರಮವೇಕಿಲ್ಲ. ಇಂತಹ ಪೈಶಾಚಿಕ ಕೃತ್ಯ ಬೆಳಕಿಗೆ ಬಂದರೂ, ಗೃಹ ಸಚಿವರಾಗಲೀ, ಮುಖ್ಯಮಂತ್ರಿಗಳಾಗಲೀ ಕಠಿಣ ಕಾನೂನು ಕ್ರಮ ತೆಗೆದುಕೊಳ್ಳದೇ ಇರುವುದನ್ನು ನೋಡಿದರೆ ಅವರು ಒಂದು ಕೋಮಿನ ಪರವಾಗಿ ಇದ್ದಾರೆಂಬುದೂ ಸಾಬೀತಾಗುತ್ತದೆ.

ಸರ್ಕಾರದ ಈ ನಿಷ್ಕ್ರೀಯತೆಯ ಬಗ್ಗೆ ಬೆಂಗಳೂರು, ಮೈಸೂರು ಸೇರಿದಂತೆ ನಾನಾ ಕಡೆ ಪ್ರತಿಭಟನೆಗಳು ನಡೆದಿವೆ. ಪಶು ಸಂಗೋಪನಾ ಸಚಿವರ ಮನೆಯೆದುರು ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದಾರೆ ಎಂಬ ಸುದ್ದಿಯೂ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಆದರೆ ಕಾಂಗ್ರೆಸ್ ಸರ್ಕಾರ ಏನೂ ನಡದೇ ಇಲ್ಲವೆಂಬಂತೆ ತನ್ನ ಪಾಡಿಗೆ ತಾನೂ ಬೇರೆ ಕೆಲಸಗಳಲ್ಲಿ ತೊಡಗಿದೆ. ಅವರದೇ ಪಕ್ಷದವರಾದ ಜಾರಕಿಹೊಳಿ ಅವರು ಕೆಪಿಸಿಸಿ ಅಧ್ಯಕ್ಷರು ಬದಲಾಗಬೇಕೆಂದು ಹೇಳುತ್ತಿದ್ದಾರೆ. ಇದರ ಬಗ್ಗೆ ಅವರು ಬಹಿರಂಗ ಹೇಳಿಕೆ ನೀಡುತ್ತಿದ್ದಾರೆ. ಆದರೆ, ಕೆಚ್ಚಲು ಕೊಯ್ದ ಪ್ರಕರಣದ ಬಗ್ಗೆ ಚಕಾರವೆತ್ತುತ್ತಿಲ್ಲ. ರಾಜ್ಯದಲ್ಲಿ ಅನೇಕ ಸಮಸ್ಯೆಗಳು ಕಾಡುತ್ತಿದ್ದರೂ, ಅವುಗಳ ಬಗ್ಗೆ ಗಮನಕೊಡದೆ, ಶ್ರೀಸಾಮಾನ್ಯರ ಗಮನವನ್ನು ಬೇರೆಡೆ ಸೆಳೆಯಲು ತಂತ್ರಗಳನ್ನು ಮಾಡುತ್ತಿದ್ದಾರೆ. ಇನ್ನು ಸಚಿವರಾದ ಜಮೀರ್ ಅಹಮದ್ ಖಾನ್ ಅವರು ಹಸುಗಳ ಮಾಲೀಕರಿಗೆ, ಬೇರೆ ಹಸುಗಳನ್ನು ಕೊಡುವುದಾಗಿ ಹೇಳಿ ಅದನ್ನು ಕೊಟ್ಟಾಗಿದೆ. ಎಲ್ಲರೂ ಹಿಂದೂಗಳ ಭಾವನೆಗಳ ಜೊತೆ ಚೆಲ್ಲಾಟವಾಡುತ್ತಿದ್ದಾರೆ.

ಹಿಂದೂಗಳು ಗೋವುಗಳನ್ನು ಪೂಜನೀಯ ಸ್ಥಾನದಲ್ಲಿ ನೋಡುತ್ತಾರೆ. ಇತ್ತೀಚೆಗಷ್ಟೇ ಸಂಕ್ರಾಂತಿ ಅಂಗವಾಗಿ ಪ್ರತಿ ಹಳ್ಳಿಗಳಲ್ಲಿಯೂ ಗೋವುಗಳ ಮೈಗೆ ಅರಿಶಿನ ಬಳಿದು, ಅವುಗಳ ಸಿಂಗರಿಸಿ ಮೆರವಣಿಗೆ ಮಾಡಿ ತಮ್ಮ ಸಂತೋಷಪಟ್ಟಿದ್ದಾರೆ. ಕೇವಲ ಹಿಂದೂಗಳು ಮಾತ್ರ ಗೋವುಗಳನ್ನು ಪೂಜ್ಯ ಭಾವನೆಯಿಂದ ನೋಡುತ್ತಾರೆ ಎಂದು ತಿಳಿದರೆ ತಪ್ಪಾದೀತು. ಜೈನರು, ಮಾರವಾಡಿಗಳು, ಸಿಖ್ಖರೂ ಗೋವುಗಳನ್ನು ಮಾತೆಯ ಸ್ಥಾನದಲ್ಲಿಟ್ಟು ಪೂಜಿಸುತ್ತಾರೆ. ಹೀಗಿರಬೇಕಾ ದರೆ ಕಾಂಗ್ರೆಸ್ ಪಕ್ಷದವರು ಮಾತ್ರ ಮುಸ್ಲಿಂ ಜನಾಂಗದವರ ಓಟುಗಳ ಮೇಲೆ ಕಣ್ಣಿಟ್ಟು ಮುಸ್ಲಿಮರ ಓಲೈಕೆಯಲ್ಲಿ ತೊಡಗಿರುವುದು ಯೋಚಿಸತಕ್ಕ ವಿಷಯವಾಗಿದೆ.

–ಬೇಲೂರು ದ. ಶಂ. ಪ್ರಕಾಶ್, ಮೈಸೂರು.

ಮಿನಿ ವಿಧಾನಸೌಧದ ಬಳಿ ವಿದ್ಯುತ್ ದೀಪಗಳನ್ನು ಅಳವಡಿಸಿ

ಮಾನ್ಯರೆ,

ಮೈಸೂರಿನ ಮುಖ್ಯ ಆಡಳಿತ ಕಚೇರಿಗಳಲ್ಲಿ ಒಂದಾದ ಮಿನಿ ವಿಧಾನಸೌಧಕ್ಕೆ ತಮ್ಮ ಹಲವಾರು ಕೆಲಸ ಕಾರ್ಯಗಳ ನಿಮಿತ್ತ ನಗರ ಮತ್ತು ಗ್ರಾಮೀಣ ಭಾಗದ ಜನರು ಬರುವುದು ಸಾಮಾನ್ಯವಾಗಿದೆ. ಮಿನಿ ವಿಧಾನಸೌಧದ ಪಕ್ಕದ ಕೃಷಿ, ನಗರ ಭೂಮಾಪನ ಕಚೇರಿ, ಅಬಕಾರಿ ಕಚೇರಿಗಳು ಇರುವ ರಸ್ತೆಯಲ್ಲಿ ಒಂದೂ ವಿದ್ಯುತ್ ದೀಪ ಇಲ್ಲ. ಕತ್ತಲು ಆದ ಮೇಲೆ ಈ ರಸ್ತೆಯಲ್ಲಿ ಓಡಾಡಲು ಭಯವಾಗುತ್ತದೆ. ಈ ರಸ್ತೆಯಲ್ಲಿ ಹಲವಾರು ಸರ್ಕಾರಿ ಕಚೇರಿಗಳು ಇದ್ದರೂ ಒಂದು ವಿದ್ಯುತ್ ಬೀದಿ ದೀಪ ಇಲ್ಲದೇ ಇರುವುದು ಸೋಜಿಗದ ಸಂಗತಿಯೇ ಸರಿ. ಈಗ ಚಳಿಗಾಲ ಇರುವುದರಿಂದ ಸಂಜೆ 6 ಗಂಟೆಗೆ ಬೇಗ ಕತ್ತಲು ಆಗುವುದರಿಂದ ತಮ್ಮ ಕೆಲಸ ಕಾರ್ಯಗಳನ್ನು ಮುಗಿಸಿಕೊಂಡು ಕಚೇರಿಯಿಂದ ಕತ್ತಲೆಯಲ್ಲೇ ನಡೆದುಕೊಂಡು ಹೋಗಬೇಕಾದ ಪರಿಸ್ಥಿತಿ ಇದೆ. ಜೊತೆಗೆ ಈ ರಸ್ತೆಯಲ್ಲಿ ಇತ್ತೀಚಿನ ದಿನಗಳಲ್ಲಿ ಸಿಸಿ ಕ್ಯಾಮರಾ ಸಹ ಅಳವಡಿಸಿದ್ದು, ಈ ರಸ್ತೆಯಲ್ಲಿ ಏನೇ ಅವಘಡ ನಡೆದರೆ ಅದು ಕತ್ತಲೆಯಲ್ಲಿ ಏನೂ ಸೆರೆಯಾಗುತ್ತದೆ ಎಂಬುದು ಯಕ್ಷ ಪ್ರಶ್ನೆಯಾಗಿದೆ.

ಮಿನಿ ವಿಧಾನಸೌಧದ ಹಿಂಭಾಗದ ರಸ್ತೆಯಿಂದ ಸರ್ಕಾರಿ ಅತಿಥಿಗೃಹ ಮತ್ತು ನಾಗಮ್ಮ ಆಸ್ಪತ್ರೆಗೆ ಹೋಗುವ ರಸ್ತೆಯು ಡಾಂಬರು ಇಲ್ಲದೆ ಗುಂಡಿ ಬಿದ್ದ ಮಣ್ಣು ರಸ್ತೆಯಲ್ಲಿ ಹೋಗಬೇಕಾದ ಪರಿಸ್ಥಿತಿ ಇದೆ. ಮಳೆಗಾಲದಲ್ಲಿ ಈ ಮಣ್ಣು ರಸ್ತೆಯಲ್ಲಿ ಓಡಾಡಲು ಮತ್ತು ವಾಹನ ಓಡಿಸುವುದು ತುಂಬಾ ಕಷ್ಟಕರವಾಗಿದೆ.

ದಯವಿಟ್ಟು ಸಂಬಂಧಪಟ್ಟ ಅಧಿಕಾರಿಗಳು ಮಿನಿ ವಿಧಾನಸೌಧದ ಬಳಿ ಇರುವ ಈ ಎರಡು ಪ್ರಮುಖ ಸಮಸ್ಯೆಗಳನ್ನು ಕೂಡಲೇ ಪರಿಹರಿಸಬೇಕಾಗಿ ಕಳಕಳಿಯ ಮನವಿ.

–ಎಂ.ಕೆ. ಕಿರಣ್, ಟೆಲಿಕಾಂ ಕಾಲೋನಿ, ಉದಯಗಿರಿ ಅಂಚೆ, ಮೈಸೂರು.

ಇದೇನಾ ಸಭ್ಯತೆ ಮುಖ್ಯಮಂತ್ರಿಗಳೇ...!

ಮಾನ್ಯರೆ,

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕಾರ್ಯಕ್ರಮವೊಂದರಲ್ಲಿ ವೇದಿಕೆಯ ಮೇಲೆ ಆಸೀನರಾಗಿದ್ದ ಡಿಸಿಯವರನ್ನು ಬಹಳ ಹೀನಾಯವಾಗಿ ನಡೆಸಿಕೊಂಡ ವೀಡಿಯೋ ವೈರಲ್ ಆಗಿದೆ. ಈ ಸಂಬಂಧ ಯಾರೂ ಚಕಾರವೆತ್ತದೆ ಇರುವುದು ಬಹಳ ಶೋಚನೀಯ. ಹಿಂದಿನ ಕಾಲದಲ್ಲಿ ಡಿಸಿ ಎಂದರೆ ಬಹಳ ಗೌರವಸ್ಥಾನ. ಅವರನ್ನು ಡಿಸಿ ಸಾಹೇಬ್ರೆ ಎಂದೇ ಎಲ್ಲರೂ ಉದ್ದೇಶಿಸಿ ಮಾತನಾಡುತ್ತಿದ್ದರು. ಆದರೆ ಸಿದ್ದರಾಮಯ್ಯನಂತಹವರ ದುರಹಂಕಾರದ ವರ್ತನೆಯಿಂದಾಗಿ ಆ ಕೇಡರ್ ಅಧಿಕಾರಿಗಳ ನೈತಿಕತೆಗೆ ಬಹಳ ಅವಮಾನವಾಗಿದೆ. ಈ ಸಂಬಂಧ, ಅವರ ಸಂಘಟನೆಯು ತೀಕ್ಷ್ಣರೀತಿಯಲ್ಲಿ ಪ್ರತಿಭಟಿಸದಿದ್ದರೆ, ಮುಂದಿನ ದಿನಗಳಲ್ಲಿ ಅದು ಪುನರಾವರ್ತನೆಯಾಗಬಹುದು. ಈಗಲೂ ಕಾಲ ಮಿಂಚಿಲ್ಲ ಎಲ್ಲಾ ಐಎಎಸ್, ಐಪಿಎಸ್ ಮತ್ತಿತರೆ ಕೇಡರ್ ಅಧಿಕಾರಿಗಳು ಒಂದಾಗಿ ಪ್ರತಿಭಟಿಸಬೇಕು. ಇಲ್ಲದಿದ್ದರೆ, ನಾಳೆ ಇಂತಹ ಕೀಳುಮಟ್ಟದ ರಾಜಕಾರಣಿಗಳಿಂದ ಮತ್ತೆ ಮತ್ತೆ ಅವಮಾನವಾಗುವುದು ತಪ್ಪುವುದಿಲ್ಲ.

–ಬ್ಯಾಂಕ್ ಶಿವಕುಮಾರ್, ಜೆ.ಪಿ.ನಗರ, ಮೈಸೂರು.

ಇನಿದನಿ

ಮಾನ್ಯರೆ,

ನಗರದಲ್ಲಿ ಒಂದೆಡೆ ಸುಗಮ ಸಂಗೀತ ಪರಿಷತ್ತು;
ಮತ್ತೊಂದೆಡೆ 'ಹಂಸಧ್ವನಿ';
ಆಗಾಗ ತೇಲಿಬರುತ್ತದೆ ಇನಿದನಿ;
ಸರಸ್ವತಿಯ ಆಶೀರ್ವಾಣಿ!

ಧಾಟಿ : ಕೆಬಿಜಿಯವರ 'ದಾರಿ ತಪ್ಪಿದ ಮೈಸೂರು ಪಾಲಿಕೆ' (ಭೂಮಂತ್ರ, ಜ.3) ನನಗೆ ಇಷ್ಟವಾಯಿತು. ಅವರ ಆಲೋಚನೆಯ ಧಾಟಿಯಂತೆ ಬರವಣಿಗೆಯ ಧಾಟಿಯೂ ಗಮನಾರ್ಹ.

–ಸಿಪಿಕೆ, ಹಿರಿಯ ಸಾಹಿತಿ, ಮೈಸೂರು.

ಆಯಾಯ ಸಮುದಾಯಗಳು ತಮ್ಮದೆ ಪಾರಂಪರಗತ ವ್ಯವಹಾರ ವಹಿವಾಟು ಉಳಿಸಿಕೊಳ್ಳುವುದು ಅವಶ್ಯ

ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅಭಿಮತ



ವೀರಶೈವ ಲಿಂಗಾಯತ ಗ್ಲೋಬಲ್ ಬಿಸಿನೆಸ್ ಕಾನ್‌ಕ್ಲೇವ್–2025ನಲ್ಲಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ವಿಆರ್‌ಎಲ್ ಲಾಜಿಸ್ಟಿಕ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಡಾ.ಆನಂದ್ ಸಂಕೇಶ್ವರ್ ಹಾಗೂ ಐಎಲ್‌ವೈಎಫ್ ಸದಸ್ಯರು ಉಪಸ್ಥಿತರಿದ್ದರು.

ಮೈಸೂರು, ಜ.17(ಎಸ್‌ಪಿಎನ್)– ಸಮುದಾಯದೊಳಗಿನ ಪುರಾತನ ವ್ಯಾಪಾರ–ವ್ಯವಹಾರ, ಪರಂಪರೆ, ಸಂಸ್ಕೃತಿಗಳನ್ನು ರಕ್ಷಿಸುವ ಹೊಣೆ ಆಯಾಯ ಸಮುದಾಯಗಳದ್ದು, ಈ ಮೂಲಕ ವಿಕಸಿತ ಭಾರತ ಯಶಸ್ಸಿಗೆ ಐಎಲ್‌ವೈಎಫ್ ಸದಸ್ಯರು ಕೊಡುಗೆ ನೀಡಬೇಕು ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅಭಿಪ್ರಾಯಪಟ್ಟರು.

ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ಅಂತರರಾಷ್ಟ್ರೀಯ ಲಿಂಗಾಯತ್ ಯೂತ್ ಫೋರಂ(ಐಎಲ್‌ವೈಎಫ್) ಮೈಸೂರು ಘಟಕದ ವತಿಯಿಂದ ಏರ್ಪಡಿಸಿದ್ದ ಮೂರು ದಿನದ ವೀರಶೈವ ಲಿಂಗಾಯತ ಗ್ಲೋಬಲ್ ಬಿಸಿನೆಸ್ ಕಾನ್‌ಕ್ಲೇವ್–2025ನಲ್ಲಿ ಅವರು ಮಾತನಾಡಿದರು.

ಭಾರತ ಬಹುತ್ವದ ದೇಶ. ಇಲ್ಲಿ ಬೇರೆ ಬೇರೆ ಜಾತಿ, ಮತ, ಪಂಥಗಳು ನೆಲೆಗೊಂಡಿರುವ ದೇಶ. ಹಾಗಾಗಿ ಸಮುದಾಯಗಳೇ ತಮ್ಮಲ್ಲಿನ ಪುರಾತನ ಪರಂಪರೆ, ವ್ಯಾಪಾರ–ವಹಿವಾಟು, ಸಂಸ್ಕೃತಿಗಳನ್ನು ರಕ್ಷಣೆ ಮಾಡಬೇಕು. ಈ ಹಿಂದೆ ಮೈಸೂರು ಸಂಸ್ಥಾನ ಸಮುದಾಯವಾರು ರಕ್ಷಣೆ ಮುಂದಾಗಿತ್ತು. ಇದೀಗ ಪ್ರಜಾಪ್ರಭುತ್ವದ ಆಡಳಿತದಲ್ಲಿ ಸರ್ಕಾರ ಮತ್ತು ಸಮು ದಾಯಗಳ ಸಹಯೋಗದೊಂದಿಗೆ ಮುಂದುವರೆಯುವುದು ಉತ್ತಮ ಎಂದು ಸಲಹೆ ನೀಡಿದರು.

ತನ್ನ ಸಮುದಾಯದಲ್ಲಿನ ವ್ಯಾಪಾರ ಕ್ಷೇತ್ರದಲ್ಲಿ ಗುರುತಿಸಿಕೊಂಡಿರುವವರನ್ನು ಒಂದೇ ಸೂರಿನಡಿ ತಂದು ಅವರಿಗೆ ಹೊಸ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲು ಇಂತಹ ಪ್ರದರ್ಶಕ ಮೇಳಗಳ ಆಯೋಜನೆ ಉಪಯೋಗವಾಗಲಿದೆ ಎಂದ ಅವರು ವ್ಯಾಪಾರ ಕ್ಷೇತ್ರದ ರಕ್ಷಣೆ ಜೊತೆಜೊತೆಗೆ ಕನ್ನಡದ ರಕ್ಷಣೆಯೂ ಮುಖ್ಯ ಎಂದರು. ವೇದಿಕೆ ಕಾರ್ಯಕ್ರಮದ ನಂತರ ಖ್ಯಾತ ಗಾಯಕ ವಾಸುಕಿ ವೈಭವ್ ತಂಡದಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ವೇದಿಕೆಯಲ್ಲಿ ಐಎಲ್‌ವೈಎಫ್ ಬಿ.ಎಸ್.ಪ್ರಶಾಂತ್, ಮಹದೇವಪ್ರಸಾದ್ ಸೇರಿದಂತೆ ಇತರರಿದ್ದರು.

ಅಂತರರಾಷ್ಟ್ರೀಯ ಲಿಂಗಾಯತ್ ಯೂತ್ ಫೋರಂ(ಐಎಲ್‌ವೈಎಫ್) ಸಂಘಟನೆಯ ಮೊದಲ ಸಮ್ಮೇಳನ ಬೆಂಗಳೂರಿನಲ್ಲಿ ನಡೆದಿತ್ತು. ಎರಡನೇ ಸಮ್ಮೇಳನ ಹುಬ್ಬಳ್ಳಿಯಲ್ಲಿ ನಡೆಯಿತು. ಹುಬ್ಬಳ್ಳಿಯಲ್ಲಿ ನಡೆದಾಗ ಕೋಟ್ಯಾಂತರ ರೂ. ವಿವಿಧ ಕ್ಷೇತ್ರದ ಉದ್ಯಮಗಳಲ್ಲಿ ವಹಿವಾಟು ನಡೆದ ಮಾಹಿತಿ ಇದೆ. ಇದೀಗ ಮೈಸೂರಿನಲ್ಲಿ ಮೂರನೇ ಸಮ್ಮೇಳನಲ್ಲಿ ನಡೆಯುತ್ತಿದೆ. ಇಲ್ಲಿ 183ಕ್ಕೂ ಹೆಚ್ಚು ಮಳಿಗೆಗಳು ಸ್ಥಾಪನೆಯಾಗಿದ್ದು, ಈ ಸಮ್ಮೇಳನವೂ ಹೆಚ್ಚಿನ ವಹಿವಾಟನೊಂದಿಗೆ ಯಶಸ್ವಿಯಾಗುವ ನಿರೀಕ್ಷೆಯಿದೆ.

–ಡಾ.ಆನಂದ್ ಸಂಕೇಶ್ವರ್
ವ್ಯವಸ್ಥಾಪಕ ನಿರ್ದೇಶಕರು, ವಿಆರ್‌ಎಲ್ ಲಾಜಿಸ್ಟಿಕ್ ಲಿಮಿಟೆಡ್

ಬೆಳಗಾವಿ ಕಾಂಗ್ರೆಸ್ ಕಚೇರಿಯಲ್ಲಿ ಗದ್ದಲ

ಸುರ್ಜೇವಾಲ ಮೇಲೆ ಮುಗಿಬಿದ್ದ ಸತೀಶ್ ಜಾರಕಿಹೊಳಿ ಬೆಂಬಲಿಗರು

ಬೆಳಗಾವಿ, ಜ.17– ಬೆಳಗಾವಿ ಅಭಿವೃದ್ಧಿ ವಿಚಾರದಲ್ಲಿ ಸಚಿವ ಸತೀಶ್ ಜಾರಕಿಹೊಳಿ ವರ್ಸಸ್ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮಧ್ಯೆ ಕ್ರೆಡಿಟ್ ವಾರ್ ಶುರುವಾಗಿದೆ. ಇದೇ ಕ್ರೆಡಿಟ್ ವಾರ್ ರಾಜ್ಯ ಕಾಂಗ್ರೆಸ್ ಉಸ್ತುವಾರಿ ಸುರ್ಜೇವಾಲ ಸಭೆಯಲ್ಲೂ ಸ್ಫೋಟಗೊಂಡಿದೆ. ಬೆಳಗಾವಿಯ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಸತೀಶ್ ಜಾರಕಿಹೊಳಿ ಬೆಂಬಲಿಗರು ಮತ್ತು ಕಾಂಗ್ರೆಸ್ ಕಾರ್ಯಕರ್ತರ ಗದ್ದಲ ಏರ್ಪಟ್ಟಿದೆ.

ಇಂದು ನಗರದಲ್ಲಿ ಗಾಂಧಿ ಭಾರತ ಸಮಾವೇಶ ಹಿನ್ನೆಲೆಯಲ್ಲಿ ಜಿಲ್ಲಾ ಮುಖಂಡರ ಜೊತೆಗೆ ರಣದೀಪ್ ಸಿಂಗ್ ಸುರ್ಜೇವಾಲ ಪೂರ್ವಭಾವಿ ಸಭೆ ಮಾಡಿದರು. ಈ ಸಭೆಯಲ್ಲಿ ಗದ್ದಲ ಉಂಟಾಗಿದೆ. ಸಮಾವೇಶದ ಕುರಿತು ಈಗಾಗಲೇ ಸಭೆ ಮಾಡಿದ್ದೇವೆ ಎಂದು ಸುರ್ಜೇವಾಲ ಹೇಳಿದ್ದು, ಆದರೆ ಯಾವುದೇ ಸಭೆ ಮಾಡಿಲ್ಲ ಎಂದು ನೇರವಾಗಿ ಕಾಂಗ್ರೆಸ್ ಕಾರ್ಯಕರ್ತರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಬಳಿಕ ಕಾಂಗ್ರೆಸ್ ಕಚೇರಿ ನಿರ್ಮಾಣದ ಕುರಿತು ಕಾರ್ಯಕರ್ತರು ಆಕ್ರೋಶ ಹೊರ ಹಾಕಿದ್ದಾರೆ. ಸತೀಶ್ ಜಾರಕಿಹೊಳಿ ಅವರು ಕಚೇರಿಯನ್ನು ಈಗ ನೋಡಿಕೊಳ್ಳುತ್ತಿದ್ದಾರೆ ಎಂದರು. ಈ ವೇಳೆ ಸತೀಶ್ ಜಾರಕಿಹೊಳಿ ಅವರನ್ನು ಖುಷಿಪಡಿಸಲು ಮಾತನಾಡುತ್ತಿದ್ದೀರಿ




ಎಂದು ಸುರ್ಜೇವಾಲ ಹೇಳಿದ್ದಾರೆ. ಆಗ ಕೆಪಿಸಿಸಿ ಸದಸ್ಯೆ ಆಯಿಷಾ ಸನದಿ ಆಕ್ರೋಶ ಹೊರಹಾಕಿದ್ದಾರೆ.

ಸತೀಶ್ ಜಾರಕಿಹೊಳಿ ನಮ್ಮ ಹೆಮ್ಮೆ, ಅವರ ಸಲುವಾಗಿ ನಾವು ಜೀವ ಕೊಡುತ್ತೇವೆ. ಇಷ್ಟೆಲ್ಲಾ ಜನರು ಅವರ ಸಲುವಾಗಿ ಬಂದಿದ್ದಾರೆ ಎಂದು ನೇರವಾಗಿ ಸುರ್ಜೇವಾಲಗೆ ಟಾಂಗ್ ಕೊಟ್ಟರು. ಈ ವೇಳೆ ರಣದೀಪ್ ಸಿಂಗ್ ಸುರ್ಜೇವಾಲ ಮೂಕ ಪ್ರೇಕ್ಷಕರಾದರು. ಇದೇ ಸಂದರ್ಭದಲ್ಲಿ ಸಚಿವ ಸತೀಶ್ ಜಾರಕಿಹೊಳಿ ವೇದಿಕೆ ಮೇಲೆಯೇ ಇದ್ದರು.

ಬಳಿಕ ಎಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡೋಣ. ಯಾರಿಗೆ ಏನು ಅವಶ್ಯಕತೆ ಇದೆ. ವಾಹನ ಸೇರಿ ಎಲ್ಲ ವ್ಯವಸ್ಥೆ ಮಾಡುತ್ತೇವೆ ಎಂದು ಎಲ್ಲರನ್ನೂ ಸುರ್ಜೇವಾಲ ಸುಮ್ಮನಾಗಿಸಿದರು. ಇಷ್ಟೆಲ್ಲಾ ನಡೆಯುತ್ತಿದ್ದರು ಸತೀಶ್ ಜಾರಕಿಹೊಳಿ ಮಾತ್ರ ಸುಮ್ಮನೆ ಕುಳಿತಿದ್ದರು.

ಪೋಕ್ಸೋ ಕೇಸ್‌ನಲ್ಲಿ ಮಾಜಿ ಸಿಎಂ ಯಡಿಯೂರಪ್ಪಗೆ ಮತ್ತೆ ರಿಲೀಫ್

ಬೆಂಗಳೂರು, ಜ.17– ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ವಿರುದ್ಧದ ಪೋಕ್ಸೋ ಪ್ರಕರಣ ರದ್ದು ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ಪೂರ್ಣಗೊಳಿಸಿದ ಕರ್ನಾಟಕ ಹೈ ಕೋರ್ಟ್ ಎಲ್ಲರ ವಾದ ಆಲಿಸಿ ಆದೇಶ ಕಾಯ್ದಿರಿಸಿದೆ. ಜೊತೆಗೆ ಬಿ.ಎಸ್.ಯಡಿಯೂರಪ್ಪ ಖುದ್ದು ಹಾಜರಿಗೆ ನೀಡಿದ್ದ ವಿನಾಯಿತಿಯನ್ನು ವಿಸ್ತರಿಸಿದೆ. ಆ ಮೂಲಕ ಮಾಜಿ ಸಿಎಂಗೆ ಬಿಗ್ ರಿಲೀಫ್ ಸಿಕ್ಕಂತಾಗಿದೆ.


ಯಡಿಯೂರಪ್ಪ

ರದ್ದು ಕೋರಿ ಬಿ.ಎಸ್.ಯಡಿಯೂರಪ್ಪ ಸಲ್ಲಿಸಿದ್ದ ಅರ್ಜಿ ವಿಚಾರಣೆ ಮಾಡಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ನ್ಯಾಯಪೀಠ, ಆದೇಶ ಕಾಯ್ದಿರಿಸಿದ್ದಾರೆ. ಪ್ರಾಸಿಕ್ಯೂಷನ್ ಪರ ಪ್ರೊ. ರವಿವರ್ಮಕುಮಾರ್ ವಾದ ಮಂಡನೆ ಮಾಡಿದ್ದು, ಬಿ.ಎಸ್.ಯಡಿಯೂರಪ್ಪ ಮನೆಯ ಎಂಟ್ರಿ ರಿಜಿಸ್ಟರ್ ತಿರುಚಲಾಗಿದೆ ಎಂದು ಹೇಳಿದ್ದಾರೆ.

ಫಿರ್ಯಾದಿ, ಬಾಲಕಿ, ಶಿವಾನಂದ ತಗಡೂರು ಬಂದ ಸಮಯ ಬದಲಿಸಲಾಗಿದೆ. ಆರೋಪಿಗಳು ಫಿರ್ಯಾದಿ ಫೇಸ್ ಬುಕ್‌ನಿಂದ ವಿಡಿಯೋ ಡಿಲೀಟ್ ಮಾಡಿದ್ದಾರೆ. ಬಿಎಸ್ ಯಡಿಯೂರಪ್ಪ ಮನೆಗೆ ಕರೆತಂದು ವಿಡಿಯೋ ಡಿಲೀಟ್ ಮಾಡಿದ್ದಾರೆಂದು ವಾದಿಸಿದರು.

ಮೊಬೈಲ್ ರೆಕಾರ್ಡಿಂಗ್‌ನಲ್ಲಿ ಯಡಿಯೂರಪ್ಪ ಧ್ವನಿಯಿದೆ ಎಂದ ಜಡ್ಜ್, ಆ ವಿಡಿಯೋ ರೆಕಾರ್ಡಿಂಗ್‌ನಲ್ಲಿರುವ ಹೇಳಿಕೆ ಡಿಸ್ಟರ್ಬಿಂಗ್ ಆಗಿವೆ. ಯಡಿಯೂರಪ್ಪ ಮನೆಗೆ ಫಿರ್ಯಾದಿ ಮಹಿಳೆ ಪದೇ ಪದೆ ಬಂದಿದ್ದಾರೆ. ಈ ಘಟನೆ ನಡೆದ ನಂತರ ಪದೇ ಪದೆ ಬರಲು ಸಾಧ್ಯವೇ ಎಂದು ಪ್ರಶ್ನಿಸಿದ್ದಾರೆ.

ಫಿರ್ಯಾದಿ ಈ ಹಿಂದೆ 56 ದೂರು ನೀಡಿರುವ ಹಿನ್ನೆಲೆಯಲ್ಲಿ ಇದನ್ನು ಪರಿಗಣಿಸಬೇಕು. ಆರೋಪಪಟ್ಟಿಯಲ್ಲಿನ ಅಂಶಗಳೇ ಸಂಪೂರ್ಣ ಸತ್ಯವೆಂದು ಒಪ್ಪಬಾರದು ಎಂದು ಬಿ.ಎಸ್.ಯಡಿಯೂರಪ್ಪ ಪರ ಹಿರಿಯ ವಕೀಲ ಸಿ.ವಿ.ನಾಗೇಶ್ ವಾದಿಸಿದರು. ಆ ದಿನ ಏನೂ ನಡೆದಿಲ್ಲವೆಂದು ಅಲ್ಲಿದ್ದ ಶಿವಾನಂದ ತಗಡೂರು, ಆರಾಧ್ಯ ಹೇಳಿಕೆ ನೀಡಿದ್ದಾರೆ. ಆದರೆ ಪೊಲೀಸರು ಅದನ್ನು ತನಿಖೆಯ ಭಾಗವಾಗಿ ಪರಿಗಣಿಸಿಲ್ಲ. ಕೇವಲ ಸಂತ್ರಸ್ತೆ ಹೇಳಿಕೆಯಷ್ಟೇ ಅಲ್ಲ ಸಾಕ್ಷ್ಯಗಳೂ ಅಗತ್ಯವಿದೆ. ಎಲ್ಲ ಸಾಕ್ಷಿಗಳೂ ಈ ಘಟನೆ ನಡೆದಿಲ್ಲ ಎಂದು ಹೇಳಿದ್ದಾರೆಂದು ವಾದ ಮಂಡನೆ ಮಾಡಿದ್ದಾರೆ.

ಅವಳು ನನ್ನ ಮೊಮ್ಮಗಳಿದ್ದಂತೆ, ನಾನು ನೋಡಿದೆ ಚೆಕ್ ಮಾಡಿದೆ. ಬಹಳ ಒಳ್ಳೇ ಹುಡುಗಿ ಅವಳು, ಏನು ಬೇಕೋ ಸಹಾಯ ಮಾಡುತ್ತೇನೆ ಎಂದು ಯಡಿಯೂರಪ್ಪ ವಿಡಿಯೋದಲ್ಲಿ ಹೇಳಿದ್ದಾರೆಂದು ಆರೋಪಿಸಲಾಗಿದೆ. ಆದರೆ ಕೇಸ್ ಬಗ್ಗೆ ಆಕೆ ಬಳಿ ಚೆಕ್ ಮಾಡಿದೆ. ಯಾರನ್ನೂ ರೂಮಿನ ಒಳಗೆ ಕರೆದುಕೊಂಡು ಹೋಗಿಲ್ಲವೆಂದು ಯಡಿಯೂರಪ್ಪ ಹೇಳಿದ್ದಾರೆ.

ಸಿವಿಲ್ ಕ್ಷೇತ್ರದಲ್ಲಿ ಡಿಜಿಟಲ್ ರೂಪಾಂತರ ರಹಸ್ಯ ವಿಷಯವಲ್ಲ

'ಸಿವಿಲ್ ಇಂಜಿನಿಯರಿಂಗ್‌ನಲ್ಲಿ ಡಿಜಿಟಲ್ ರೂಪಾಂತರ' ವಿಚಾರ ಸಂಕಿರಣ

ಮೈಸೂರು, ಜ.17(ಜಿಎ)–ಸಿವಿಲ್ ಕ್ಷೇತ್ರದಲ್ಲಿ ಡಿಜಿಟಲ್ ರೂಪಾಂತರವು ರಹಸ್ಯ ವಿಷಯವಲ್ಲ. ಇದು ನಮ್ಮ ಉದ್ಯಮವನ್ನು ಮರು ರೂಪಿಸುವ ಪರಿವರ್ತಕ ರಿಯಾಲಿಟಿ ಆಗಿದ್ದು, ಪರಿಣಾಮಕಾರಿ ಮತ್ತು ಸುಸ್ಥಿರವಾಗಿ ನಿರ್ಮಿಸಲು ಇದು ನಮಗೆ ಸಹಕಾರಿಯಾಗಿದೆ ಎಂದು ಅಸೋಸಿ ಯೇಶನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರಿಂಗ್ ದಕ್ಷಿಣ ವಿಭಾಗದ ಉಪಾಧ್ಯಕ್ಷ ರಾಜ ಕುಮಾರ್ ಕಚರ್ಲ ಅಭಿಪ್ರಾಯಪಟ್ಟರು.

ಮೈಸೂರಿನ ವಿಶ್ವೇಶ್ವರನಗರದಲ್ಲಿರುವ ಬಿಲ್ಡರ್ಸ್ ಚಾರಿಟೆಬಲ್ ಟ್ರಸ್ಟ್ ಸಭಾಂಗಣದಲ್ಲಿ ಅಸೋಸಿಯೇಶನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರಿಂಗ್ (ಇಂಡಿಯಾ) ಮೈಸೂರು ಘಟಕದ ವತಿಯಿಂದ ಆಯೋಜಿಸಿರುವ ಎರಡು ದಿನಗಳ 'ಸಿವಿಲ್ ಇಂಜಿನಿಯರಿಂಗ್‌ನಲ್ಲಿ ಡಿಜಿಟಲ್ ರೂಪಾಂತರ' ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ಬಿಲ್ಡಿಂಗ್ ಇನ್ಫರ್ಮೇಷನ್ ಮಾಡೆಲಿಂಗ್(ಬಿಐಎಂ)ನಿಂದ ಜಿಯೋಗ್ರಾಫಿಕ್ ಇನ್ಫಾರ್ಮೇಶನ್ ಸಿಸ್ ಸ್ಟಮ್ (ಜಿಐಎಸ್) ವರೆಗೆ ಮತ್ತು ಡ್ರೋನ್‌ಗಳಿಂದ ಕೃತಕ ಬುದ್ಧಿಮತ್ತೆಯವರೆಗೆ ಡಿಜಿಟಲ್ ತಂತ್ರಜ್ಞಾನಗಳು ನಮ್ಮ ವೃತ್ತಿಯ ಪ್ರತಿಯೊಂದು ಅಂಶವನ್ನು ಕ್ರಾಂತಿಗೊಳಿಸುತ್ತಿವೆ. ಕಾರ್ಯಕ್ಷಮತೆಯನ್ನು ಅನುಕರಿಸಲು ವಿಶ್ಲೇಷಿಸಲು ಮತ್ತು ಅತ್ಯುತ್ತಮವಾಗಿಸಲು ಮೂಲ ಸೌಕರ್ಯದ ವಾಸ್ತವ ಪ್ರತಿಕೃತಿಗಳನ್ನು ರಚಿಸುವಲ್ಲಿ ಡಿಜಿಟಲ್ ತಂತ್ರಜ್ಞಾನದ ಸಾಮರ್ಥ್ಯವನ್ನು ಬಳಸಿಕೊಳ್ಳುವಂತೆ ಸಲಹೆ ನೀಡಿದರು.



ಮೈಸೂರಿನ ಬಿಲ್ಡರ್ಸ್ ಚಾರಿಟೆಬಲ್ ಟ್ರಸ್ಟ್ ಸಭಾಂಗಣದಲ್ಲಿ ಅಸೋಸಿಯೇಶನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರಿಂಗ್ (ಇಂಡಿಯಾ) ಮೈಸೂರು ಘಟಕದ ವತಿಯಿಂದ ಆಯೋಜಿರುವ ಎರಡು ದಿನಗಳ 'ಸಿವಿಲ್ ಇಂಜಿನಿಯರಿಂಗ್‌ನಲ್ಲಿ ಡಿಜಿಟಲ್ ರೂಪಾಂತರ' ವಿಚಾರ ಸಂಕಿರಣವನ್ನು ರಾಜಕುಮಾರ್ ಕಚರ್ಲ ಉದ್ಘಾಟಿಸಿದರು.

ಡಿಜಿಟಲ್ ತಂತ್ರಜ್ಞಾನವು ನಮ್ಮ ಕೆಲಸದ ಪ್ರತಿಯೊಂದು ಅಂಶವನ್ನು ರೂಪಿಸುತ್ತಿದೆ. ಸಮುದಾಯಕ್ಕೆ ಉತ್ತಮ ಭವಿಷ್ಯವನ್ನು ಸೃಷ್ಟಿಸಲು ನಾವು ಸಾಧ್ಯವಿರುವ ಅಂಶಗಳಾದ ಪ್ರಯೋಗ, ಆವಿಷ್ಕಾರವನ್ನು ಮುಂದುವರಿಸಬೇಕು. ನೈಜ ಸಮಯದ ಮೇಲ್ವಿಚಾರಣೆ ಮತ್ತು ಭವಿಷ್ಯ ಸೂಚಕವನ್ನು ಸಕ್ರಿಯಗೊಳಿಸುತ್ತದೆ. ಈ ರೂಪಾಂತರವು ಸಮಾಜಕ್ಕೆ ಪ್ರಯೋಜನಕಾರಿಯಾದ, ಚುರುಕಾದ, ಹೆಚ್ಚು ಸ್ಥಿತಿಸ್ಥಾಪಕ ಪರಿಹಾರಗಳಿಗೆ ದಾರಿ ಮಾಡಿಕೊಡುತ್ತಿದೆ. ಡಿಜಿಟಲ್ ರೂಪಾಂತರ ಕೇವಲ ಸುಧಾರಿತ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವುದರ ಬಗ್ಗೆ ಅಲ್ಲ ಎಂದು ತಿಳಿಸಿದರು.

ಡಿಜಿಟಲ್ ರೂಪಾಂತರವನ್ನು ಸಿವಿಲ್ ಇಂಜಿನಿಯರ್‌ಗಳು ಅಳವಡಿಸಿಕೊಳ್ಳಬೇಕು ಮತ್ತು ಸಮುದಾಯಕ್ಕೆ ಉತ್ತಮ ಭವಿಷ್ಯವನ್ನು ನಿರ್ಮಿಸಲು ಅದನ್ನು ಬಳಸಿಕೊಳ್ಳಬೇಕು. ಉದ್ಯಮ ಮತ್ತು ಸಮಾಜಕ್ಕೆ ಉಜ್ವಲ ಭವಿಷ್ಯವನ್ನು ಸೃಷ್ಟಿಸಲು ಡಿಜಿಟಲ್ ರೂಪಾಂತರದ ಶಕ್ತಿಯನ್ನು ಒಟ್ಟಾಗಿ ಬಳಸಿಕೊಳ್ಳುವಂತೆ ಕರೆ ನೀಡಿದರು.

ವಿಚಾರ ಸಂಕಿರಣದಲ್ಲಿ ಹಿರಿಯ ವಿಜ್ಞಾನಿ ಡಾ.ಪಿ.ಜಿ. ದಿವಾಕರ್, ಡಾ.ರಾಜೇಶ್ ಕುಮಾರ್, ವಸ್ತುಶಿಲ್ಪಿ ವಿಶು ಭೂಷಣ್, ರೋಶನ್ ಪುರೋಹಿತ್ ಸೇರಿದಂತೆ ಮತ್ತಿತರರು ಡಿಜಿಟಲ್ ರೂಪಾಂತರದ ಕುರಿತು ಮಾತನಾಡಿದರು. ಈ ವೇಳೆ ಕಾರ್ಯಕ್ರಮದಲ್ಲಿ ಮೈಸೂರು ವಿಭಾಗದ ಅಧ್ಯಕ್ಷ ಎಸ್.ಶಶಿರಾಜ್, ಶ್ರೀಕಾಂತ್, ಡಾ.ಎಸ್.ರವಿರಾಜ್, ಡಾ.ಜಿ.ಪಿ.ಚಂದ್ರಧರ, ಡಾ.ಬಿ.ಎಸ್.ಕೀರ್ತಿಗೌಡ, ಕೆ.ಎಸ್.ಪ್ರಕಾಶ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಮುಂದಿನ ಸಂಪುಟ ಸಭೆಯಲ್ಲಿ ಜಾತಿ ಗಣತಿ ವರದಿ ಪ್ರಸ್ತಾಪ

ಮೈಸೂರು, ಜ.17(ಎಂಟಿವೈ)– ಮುಂದಿನ ಸಂಪುಟ ಸಭೆಯಲ್ಲಿ ಜಾತಿ ಗಣತಿ ವರದಿ ಪ್ರಸ್ತಾಪವಾಗಲಿದ್ದು, ಆ ವರದಿಯನ್ನು ತೆರೆದ ನಂತರವೇ ಅದರ ಸಾಧಕ–ಬಾಧಕ ಗೊತ್ತಾಗಲಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ತಿಳಿಸಿದ್ದಾರೆ.



ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ವರದಿ ನೋಡುವ ಮುನ್ನ ಅದರ ಬಗ್ಗೆ ಮಾತನಾಡುವುದು ಸರಿಯಲ್ಲ. ವರದಿ ಜಾರಿಯಿಂದ ಯಾವುದೇ ಜಾತಿ ಸಮುದಾಯಕ್ಕೆ ಅನ್ಯಾಯ ಆಗಿರುವುದಿಲ್ಲ ಎಂಬ ವಿಶ್ವಾಸ ಇದೆ. ಜಾತಿ ಗಣತಿಯಲ್ಲಿ ಉಪ ಪಂಗಡಗಳಲ್ಲೇ ಗುರುತಿಸಿಕೊಂಡಿದ್ದರೂ, ಮುಖ್ಯ ಸಮುದಾಯದ ಅಡಿಯಲ್ಲಿ ತರಬೇಕು ಎಂದು ಮನವಿ ಮಾಡಿದ್ದೇವೆ. ಮುಖ್ಯವಾಗಿ ಲಿಂಗಾಯತ ಒಕ್ಕಲಿಗ ಉಪ ಪಂಗಡಗಳನ್ನು ಅದೇ ಜಾತಿ ಅಡಿಯಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಬೇಕು. ಈ ಬಗ್ಗೆ ಸಿಎಂ ಸಿದ್ದರಾಮಯ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆ ಎಂದು ಸ್ಪಷ್ಟಪಡಿಸಿದರು.

ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ವಿಷಯ ಹೈಕಮಾಂಡ್‌ಗೆ ಬಿಟ್ಟದ್ದು. ಹೈಕಮಾಂಡ್ ತೀರ್ಮಾನವೇ ಅಂತಿಮ. ರಂದೀಪ್ ಸುರ್ಜೇವಾಲಾ ಬದಲಾಗುತ್ತೆ ಅಂದರೆ ಬದಲಾಗುತ್ತೆ ಬದಲಾಗಲ್ಲ ಅಂದ್ರೆ ಬದಲಾಗಲ್ಲ. ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ನೇತೃತ್ವದ ಸಮಿತಿ ಏನು ತೀರ್ಮಾನ ಕೈಗೊಳ್ಳುತ್ತದೆಯೋ ಅದೇ ಅಂತಿಮ ಎಂದರು. ಸದ್ಯಕ್ಕೆ ಮುಖ್ಯಮಂತ್ರಿ ಹುದ್ದೆ ಖಾಲಿ ಇಲ್ಲ. ಆದ್ದರಿಂದ ನಾನು ಸಿಎಂ ಸ್ಥಾನದ ಆಕಾಂಕ್ಷಿ ಅಲ್ಲ. ಎಲ್ಲವನ್ನೂ ಪಕ್ಷದ ಹೈಕಮಾಂಡ್ ತೀರ್ಮಾನ ಮಾಡುತ್ತದೆ ಎಂದರು.

ಮೈಸೂರು ನಗರ ಪತ್ರಿಕಾ ವಿತರಕರ ಸಂಘದ ಕ್ಯಾಲೆಂಡರ್ ಬಿಡುಗಡೆ





ಮೈಸೂರು ನಗರ ಪತ್ರಿಕಾ ವಿತರಕರ ಸಂಘ ಪ್ರಕಟಿಸಿರುವ ನೂತನ ಕ್ಯಾಲೆಂಡರನ್ನು ಮಾಜಿ ಸಚಿವ ಎಸ್.ಎ.ರಾಮದಾಸ್ ಬಿಡುಗಡೆ ಮಾಡಿದರು. ಹಿರಿಯ ಪತ್ರಿಕಾ ವಿತರಕರನ್ನು ಇದೇ ವೇಳೆ ಸನ್ಮಾನಿಸಲಾಯಿತು.

ಮೈಸೂರು, ಜ.17(ಎಂಟಿವೈ)– ಮೈಸೂರು ನಗರ ಪತ್ರಿಕಾ ವಿತರಕರ ಸಂಘ ಪ್ರಕಟಿಸಿರುವ 2025ನೇ ಸಾಲಿನ ಕ್ಯಾಲೆಂಡರನ್ನು ಮಾಜಿ ಸಚಿವ ಎಸ್.ಎ.ರಾಮದಾಸ್ ಬಿಡುಗಡೆ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಕ್ಯಾಲೆಂಡರ್ ಬಿಡುಗಡೆ ಬಳಿಕ ಎಸ್.ಎ. ರಾಮದಾಸ್ ಮಾತನಾಡಿ, ಕ್ಯಾಲೆಂಡರ್‌ಗಳು ಪ್ರತಿಯೊಬ್ಬರ ಜೀವನದಲ್ಲಿ ಹಾಸು ಹೊಕ್ಕಾಗಿದೆ. ದೈನಂದಿನ ಚಟುವಟಿಕೆಗಳಲ್ಲಿ ಕ್ಯಾಲೆಂಡರ್‌ಗಳು ಪ್ರಮುಖ ಪಾತ್ರ ವಹಿಸುತ್ತವೆ. ಜಗತ್ತಿನಲ್ಲಿ ಹಲವಾರು ವಿಧದ ಕ್ಯಾಲೆಂಡರ್‌ಗಳಿದ್ದರೂ ದಿನ, ವರ್ಷಗಳ ಗುರುತಿಸುವಿಕೆಗೆ ಅನುಕೂಲವಾಗಲೆಂದು ಆಂಗ್ಲ ಕ್ಯಾಲೆಂಡರ್ ಬಳಸುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ವಿವಿಧ ಸಂಘಟನೆಗಳಂತೆ ಪತ್ರಿಕಾ ವಿತರಕರ ಸಂಘವೂ ಕ್ಯಾಲೆಂಡರ್ ಪ್ರಕಟಿಸಿರುವುದು ಶ್ಲಾಘನೀಯ ಎಂದರು.

ಅಸಂಘಟಿತ ವರ್ಗಕ್ಕೆ ಸೇರಿರುವ ಪತ್ರಿಕಾ ವಿತರಕರನ್ನು ಸ್ವನಿಧಿ ಯೋಜನೆ ವ್ಯಾಪ್ತಿಗೆ ತರಲು ಶ್ರಮಿಸಿದ್ದೇನೆ. ಇದರಿಂದ

ಹಿರಿಯ ಪತ್ರಿಕಾ ವಿತರಕರಿಗೆ ಸನ್ಮಾನ

ರಾಜ್ಯಾದ್ಯಂತ ಸಾವಿರಾರು ಮಂದಿ ಸ್ವನಿಧಿ ಉಪಯೋಗ ಪಡೆದುಕೊಳ್ಳುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಮೈಸೂರು ಜಿಲ್ಲೆ ಸೇರಿದಂತೆ ಎಲ್ಲೆಡೆಯಿರುವ ಪತ್ರಿಕಾ ವಿತರಕರು ಸ್ವನಿಧಿ ಯೋಜನೆಯ ಸೌಲಭ್ಯ ಪಡೆದುಕೊಳ್ಳುವತ್ತ ಗಮನ ಹರಿಸಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ದೀಪಕ್ ಮಾತನಾಡಿ, ನಿತ್ಯ ನಮ್ಮ ಬದುಕು ಆರಂಭವಾಗುವುದೇ ಕ್ಯಾಲೆಂಡರ್‌ನಿಂದ. ಕ್ಯಾಲೆಂಡರ್ ಕೇವಲ ಅಂಕಿ ಅಂಶಗಳ ಪುಟವಲ್ಲ. ನಮ್ಮ ಬದುಕನ್ನು ನಿರ್ಧರಿಸುತ್ತದೆ. ನಾವು ಎಲ್ಲವನ್ನೂ ಉಚಿತವಾಗಿ ಪಡೆಯುತ್ತೇವೆ. ಆದರೆ ನೆಮ್ಮದಿಯನ್ನು ಮಾತ್ರ ಈ ರೀತಿ ಪಡೆಯಲು ಸಾಧ್ಯವಿಲ್ಲ. ಆದ್ದರಿಂದ ಅದನ್ನು ನಮ್ಮಲ್ಲಿಯೇ ಹುಡುಕಿಕೊಳ್ಳುವ ಪ್ರಯತ್ನ ಕ್ಯಾಲೆಂಡರ್ ನೋಡಿದಾಗ ಆರಂಭವಾಗಲಿದೆ. ಕ್ಯಾಲೆಂಡರ್ ನೋಡಿದಾಗ ನಮ್ಮ ತಪ್ಪುಗಳನ್ನು ತಿದ್ದಿಕೊಂಡು ಜೀವನ ಸಾಗಿಸುವ ಬಗ್ಗೆ ಆಲೋಚಿಸುವ ಕೆಲಸ ಮಾಡಬೇಕು ಎಂದರು.

ಈ ಸಂದರ್ಭದಲ್ಲಿ ಮೈಸೂರು ನಗರ ಪತ್ರಿಕಾ ವಿತರಕರ ಸಂಘದ ಅಧ್ಯಕ್ಷ ಬಿ. ಸುರೇಶ್, 'ಮೈಸೂರು ಮಿತ್ರ', 'ಸ್ಟಾರ್ ಆಫ್ ಮೈಸೂರ್' ಪ್ರಸರಣ ವ್ಯವಸ್ಥಾಪಕರಾದ ಟಿ.ಎಸ್.ಗೋಪಿನಾಥ್, ಪತ್ರಿಕಾ ವಿತರಕರ ಸಂಘದ ಪದಾಧಿಕಾರಿಗಳು, ಸದಸ್ಯರು ಉಪಸ್ಥಿತರಿದ್ದರು. ಇದೇ ವೇಳೆ ಹಿರಿಯ ಪತ್ರಿಕಾ ವಿತರಕರನ್ನು ಸನ್ಮಾನಿಸಲಾಯಿತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

Sri Ramakrishna Seva Sangha ®

RAMAKRISHNA VIDYAKENDRA

NURSERY, PRIMARY & HIGH SCHOOL [ENGLISH MEDIUM-STATE SYLLABUS]
Dakshineshwara Marga, Ramakrishna Nagara, Mysuru-22
Phone No.: 0821-2959073 / 88844 55549

REQUIRES

Applications are invited from experienced, Qualified, Talented Teachers with Good English Communication skills.

Post	Section	Qualification
Hindi	Primary & High School	M.A./ B.A.with B.Ed.
English	High School & Higher Primary	M.A./ B.A.with B.Ed.
Science	High School & Higher Primary	M.Sc./ B.Sc.with B.Ed.(CBZ)
Maths & Science	Primary	B.Sc.with TCH / D.Ed. /B.Ed. (PCM)
Computer Science	Primary to High School	MCA / BCA & B.Ed.
Nursery Teacher	Nursery Classes	B.A./ NTT/ NST / Montessori
Music (Part Time)	Primary to High School	B.Music / M.Music or Senior Grade Music

Submit your Resume on or before 31.01.2025
At School Premises between 10.00 to 4.00
Also Send your Resume through Email ID:
ramakrishnavidyakendra1991mys@gmail.com

Contact No.: 88845 40382 / 88845 40383



VIDYA VIKAS INSTITUTIONS

Alanahally and Nadanahally, Bannur Road Mysore.

TENDER NOTICE
CANTEEN CATERING CONTRACT

Proposals are invited from reputed Canteen Catering Service Providers fulfilling the following eligibility criteria:

1. Having experience of 10 years or more.
2. Currently servicing at least one client, with similar catering service and with a billing of at least 1crore per annum.
3. Currently preparing food and servicing at least 1000 persons per day.
4. Having annual average turnover of Rs 2.5 crores & above in the last three years.

Further service providers should have an excellent record of running canteen and hostel catering services, in order to run our student & staff canteen at Vidya Vikas Institutions Campus Alanahally and Nadanahally, Bannur Road Mysore.

Vidya Vikas Institutions reserves the right to accept or reject any proposal without assigning any reason whatsoever

You shall submit your proposals at the address and email id mentioned below. Last date for submitting proposal is 24th January 2025

For More Details Contact:
Registrar,
127-128, Mysuru - Bannur Road, Alanahally, Alanahally Post
Mysuru - 570 028 Karnataka, India
email: principalvviet@gmail.com

ಕರ್ನಾಟಕ ಸರ್ಕಾರ

ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಶಿಶು ಅಭಿವೃದ್ಧಿಯೋಜನಾ ಕಚೇರಿ, ಬಿ.ಪಿ.ಎಲ್ ಶೋರೂಂ ರಸ್ತೆ,
ಶ್ರೀರಂಗಂ ಕಾಂಪ್ಲೆಕ್ಸ್, ಚೈತ್ರ ಆಸ್ಪತ್ರೆ ಎದುರು, ಕೆ.ಆರ್.ನಗರ–571602
Mail id : cdpokrn@gmail.com ದೂರವಾಣಿ:08223–262714
ಸಂ:ಶಿಅಯೋಕೃರಾನ/ವಾಹನ.ಟೆಂಡರ್/2024–25 ದಿನಾಂಕ:16.01.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಶು ಅಭಿವೃದ್ಧಿ ಯೋಜನಾ ಕಚೇರಿ, ಕೆಆರ್.ನಗರ , ಮೈಸೂರು ಜಿಲ್ಲೆ ಇವರ ಕಚೇರಿ ಉಪಯೋಗಕ್ಕಾಗಿ ಆದೇಶ ನೀಡಿದ ಒಂದು ವರ್ಷದ ಅವಧಿಗೆ (ಫೆಬ್ರವರಿ–2025 ರಿಂದ ಜನವರಿ–2026) ಅಥವಾ ಮುಂದಿನ ಆದೇಶದವರೆಗೆ ಅನ್ವಯಿಸುವಂತೆ ಸ್ವಿಫ್ಟ್ ಡಿಸೈರ್/ ಬೊಲೆರೊ/ ಹುಂಡೈ ಎಕ್ಸೆಂಟ್ ವಾಹನವನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ ಒದಗಿಸುವ ಸಲುವಾಗಿ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. ಸಂಕ್ಷಿಪ್ತ ವಿವರಗಳು ಈ ಕೆಳಕಂಡಂತಿವೆ.

1. ಟೆಂಡರ್ ಪ್ರಕಟಣೆಯ ದಿನಾಂಕ : **16/01/2025** 2.ಟೆಂಡರ್‌ನ ವಾರ್ಷಿಕ ಅಂದಾಜು ಮೊತ್ತ : **ರೂ. 4.80 ಲಕ್ಷ** 3. ಇ.ಎಂ.ಡಿ ಮೊತ್ತ : **ರೂ. 12,000/–** 4. ಟೆಂಡರ್ ಅರ್ಜಿಯನ್ನು ವಿತರಿಸುವ ದಿನಾಂಕ ಮತ್ತು ವೇಳೆ **16.01.2025 ರಿಂದ 30.01.2025**ರ ಮಧ್ಯಾಹ್ನ **3.00** ಗಂಟೆವರೆಗೆ
5. ಮೊಹರಾದ ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ವೇಳೆ : **30.01.2025** ಸಂಜೆ **5.00** ಗಂಟೆವರೆಗೆ 6. ಟೆಂಡರ್ ತೆರೆಯುವ ದಿನಾಂಕ ಮತ್ತು ವೇಳೆ : **31.01.2025 ಬೆಳಿಗ್ಗೆ 11.00 ಗಂಟೆಗೆ** 7.ಟೆಂಡರ್ ಅರ್ಜಿ ಶುಲ್ಕ ರೂ.500/– ಗಳು

ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾ ಕಚೇರಿಯನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸುವುದು. ದೂರವಾಣಿ ಸಂಖ್ಯೆ : 08223–262714.

ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಕೃಷ್ಣರಾಜನಗರ

DIPR/DDMYS/1121/KSMCA/760/2024-25

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

HOUSE FOR SALE
Vijayanagar 3rd Stage [East Face], B KHATHA Ground Floor - Parking & Office Space. 1st Floor - 2 BHK Home, 2nd Floor - Duplex 3 BHK House.
9972268624
9844401228

SITES for SALE
JP Nagar Ring Road
30x40, 34 Lakhs
Near Gurur Bus Stop, Ramabainagar, Mysore.
(Corporation limits with E Katha)
DTCP approved 1.5 Kms from JP Nagar Ring Road
8660105902

SITE FOR SALE
40x60 S/F
Roopa Nagar
Mob: 8050821108

ಸೆಕ್ಯೂರಿಟಿ ಗಾರ್ಡ್, ಹೌಸ್ ಕೀಪಿಂಗ್ ಬೇಕಾಗಿದ್ದಾರೆ
45 ವರ್ಷದೊಳಗಿನ ಸೆಕ್ಯೂರಿಟಿ ಗಾರ್ಡ್ ಮತ್ತು ಹೌಸ್ ಕೀಪಿಂಗ್ (ಮಹಿಳೆಯರು) ಬೇಕಾಗಿದ್ದಾರೆ. ಸ್ಥಳ: ವಿಜಯನಗರ, ದಟ್ಟಗಳ್ಳಿ, ಶ್ರೀರಾಂಪುರ ಸುತ್ತಮುತ್ತ..
ಸಂಪರ್ಕಿಸಿ
70224 57197

ಬೇಕಾಗಿದ್ದಾರೆ
ಆಶ್ರಮದಲ್ಲಿ ಉಳಿದುಕೊಂಡು ಕೆಲಸ ಮಾಡುವಂಥವರು, ಮಹಿಳೆಯರು ಬೇಕಾಗಿದ್ದಾರೆ. ಎಸ್‌ಎಸ್‌ಎಲ್‌ಸಿ, ಪಿಯುಸಿ, ಫೇಲ್/ಪಾಸ್ ಊಟ ವಸತಿ ದೊರೆಯುತ್ತದೆ
9110455297

WANTED
Lady Sales Girls and Office work must Kannada, English & Hindi. @ Hinkal. Contact:
9480930786 / 9980040125

ಶ್ರೀ ಗೌರೀಶಂಕರ ಟ್ರಾವೆಲ್ಸ್
15-2-25 (4 ದಿನ): ಕುಂಭ ಮೇಳ, ಪ್ರಯಾಗ್‌ರಾಜ್, ಕಾಶಿ, ಅಯೋಧ್ಯೆ
17-4-25 (4 ದಿನ): ಹಂಪಿ, ಕೂಡಲಸಂಗಮ, ಬಾದಾಮಿ
1-5-25 (4 ದಿನ): ಇಂದೋರ್, ಉಜ್ಜಯಿನಿ, ಓಂಕಾರೇಶ್ವರ
18-5-25 (10 ದಿನ): ಅಯೋಧ್ಯೆ, ಕಠ್ಮಂಡು, ಪೋಖ್ರ, ಮುಕ್ತಿನಾಥ್, ಕಾಶಿ.
8-6-25 (12 ದಿನ): ಗಂಗೋತ್ರಿ, ಯಮುನೋತ್ರಿ, ಬದರೀನಾಥ್, ಕೇದಾರನಾಥ್.
(ವಿಮಾನ, ಬಸ್, ಊಟ, ರೂಂ)
Mob: 9620002114

SK CONSTRUCTION
ನಿಮ್ಮ ಸ್ವಂತ ಮನೆ ಕನಸು 20x30 BEML-Layout ದಟ್ಟಗಳ್ಳಿಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ 3 BHK Duplex Architecht Design ಮನೆ Loan ಸಹಿತ ನಾವೇ ಮಾಡಿಸಿ Construction ಮಾಡಿ ಕೊಡುತ್ತೇವೆ.
9620528490

ಮನೆ ಮಳಿಗೆ ಭೋಗ್ಯಕ್ಕಿದೆ
ಶ್ರೀರಾಂಪುರ 2ನೇ ಹಂತ, LIC ಲೇಔಟ್ ಭೋಗ್ಯ 10 ಲಕ್ಷ (Nego) ಸಿಂಗಲ್ ಬೆಡ್ ರೂಂ ಮನೆ ಉತ್ತರ ದಿಕ್ಕು (ಗ್ರೌಂಡ್ ಫ್ಲೋರ್) ಹೊಸ ಮನೆ & ಮಳಿಗೆ (13x13) ವಿಸ್ತೀರ್ಣ ಎರಡು ಭೋಗ್ಯಕ್ಕಿದೆ
ಸತೀಶ್ 9113612442
ಸ್ವಾಮಿ 9845570573

Under Construction HOUSE FOR SALE on 30x50 site
near Mysore Public School on HD Kote Road
1.10cr (negotiable)
Call : 8951817835

MYSURU RETINA CARE
STAFF REQUIRED
1. O.T. TECHNICIAN
2. RECEPTIONIST (Any Degree / Fresher)
3. HOUSE KEEPING (URGENT)
7338369364 / 08212543244
NIVEDITHA NAGAR, MYSORE

ಬೇಕಾಗಿದ್ದಾರೆ
ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 8ರವರೆಗೆ ಲಕ್ಷ್ಮೀಪುರಂನಲ್ಲಿ ಒಂದೂವರೆ ವರ್ಷದ ಮಗುವನ್ನು ನೋಡಿಕೊಳ್ಳಲು ಮಹಿಳಾ ಸಹಾಯಕಿ ಬೇಕಾಗಿದ್ದಾರೆ.
Mob: 9632866616

ಮನೆ ಮಾರಾಟಕ್ಕಿದೆ
20x30
ಲಾಲ್ ಬಹದ್ದೂರ್ ಶಾಸ್ತ್ರಿ ನಗರ, ಮನೆ ನಂಬರ್ 1293, ಗ್ರೌಂಡ್, 1st, 2nd.
Mob: 9880729299

ಬೇಕಾಗಿದ್ದಾರೆ
5 ವರ್ಷ ಅನುಭವವುಳ್ಳ Security Field Officer ಬೇಕಾಗಿದ್ದಾರೆ. ಹಾಗೂ ಅನುಭವವುಳ್ಳ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ಮೇಟಗಳ್ಳಿ ಕೆ.ಆರ್.ಎಸ್. ವರುಣಾ, ಟೆರಿಷಿಯನ್ ಕಾಲೇಜು ಸುತ್ತಮುತ್ತ ಮತ್ತು ಹೆಬ್ಬಾಳ ವಿಜಯನಗರ 2ನೇ ಹಂತ, ಮೈಸೂರಿನ ಸುತ್ತಮುತ್ತ
ವಿದ್ಯಾರ್ಹತೆ : SSLC PASS or Fail
9916772043,9538886328

---

1 ಎಕರೆ ಜಮೀನು ಬಾಡಿಗೆಗೆ ಇದೆ
Near RTO 55 & N H Hospital Ring Road (1/2 K.M
9845675239
8095415186

WANTED
1. Diploma in E&C (2 Years Experience in EMS Industry)
2. ITI-Fitter & Electronics
3. Diploma in Mechanical
4. B.S.C in Chemistry
Male & Candidates
Age 18-30 Years ESI, EPF & Canteen Facility.
9986719855
0821-2415366

ಬೇಕಾಗಿದ್ದಾರೆ
MARUTHI SUZUKI ARENA AND TATA MOTORS CAR SHOWROOM ಗಳಿಗೆ ಮತ್ತು ಆಫೀಸ್ ಕೆಲಸದ ಉದ್ಯೋಗಗಳಿಗೆ ತಕ್ಷಣ ಯುವಕ ಯುವತಿಯರು ಬೇಕಾಗಿದ್ದಾರೆ ಯಾವುದೇ ಸಂದರ್ಶನ ಇರುವುದಿಲ್ಲ ಪ್ರಸಿದ್ಧ ಕಂಪನಿಗಳಲ್ಲಿ, ಅಕೌಂಟೆಂಟ್, ಡೇಟಾ ಆಪರೇಟರ್, ಟೆಲಿಕಾಲರ್, ಕ್ಯಾಶಿಯರ್, ಆಫೀಸ್ ಬಾಯ್, ಮತ್ತು ಮ್ಯಾನುಫ್ಯಾಕ್ಚರಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ, ಶಿಕ್ಷಣ 4ನೇ ತರಗತಿ ಇಂದ ಯಾವುದೇ ಪದವೀಧರರು, (*ಸಂಬಳ: 18000rs ಇಂದ 30000rs + ಇನ್ಸೆಂಟಿವ್*) ಹೆಚ್ಚಿನ ಮಾಹಿತಿಗಾಗಿ ಇಂದೇ ಸಂಪರ್ಕಿಸಿ.
9535849148, 7411273440

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

ಹೊಸ ಮನೆ ಮಾರಾಟಕ್ಕಿದೆ
3 BHK, 30x40
EAST FACE
MUDA APPROVED
Near St. Joseph School, Yelwala, Mysore
Mob: 8217851695

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

MUDA APPROVED
SITE FOR SALE
30x40 East facing
100 Mts. from N.J. Hospital, Elwala, Mysuru.
Mob: 9632806699

Government Approved Layout Near MIT Engineering College Near Mys-Bangalore Highwary
6381779015

HOUSE FOR SALE
24X30
NORTH FACE
LIG 123, 4ನೇ ಕ್ರಾಸ್, ಗಂಗೋತ್ರಿ ಹುಡ್ಕೋ ಲೇಔಟ್, ಮಾರುತಿ ದೇವಸ್ಥಾನದ ಹತ್ತಿರ
9008423578

SC ಆದಿ ಕರ್ನಾಟಕ (ಬಲಗೈ)
ಸ್ಥಾಪನೆ 2010
MBBS, MD, MS, BE, M.Tech, BAMS, MSc, MBA, MCA, M.Com, MA Phd, BSc, B.Com, BCA, BA, BEd
ವಧುವರರಿಗೆ ಸಂಪರ್ಕಿಸಿ
ನವಿಲೂರು ರಂಗಸ್ವಾಮಿ
ಮೈಸೂರು ಸಿಟಿ ವಧುವರರ ಮಾಹಿತಿ ಕೇಂದ್ರ, ಎನ್.ಆರ್.ಮೊಹಲ್ಲಾ, ಮೈಸೂರು
8711974172

JOBNET
ಮೊಬೈಲ್‌ನಲ್ಲಿ ಕೆಲಸ
ಮನೆಯಲ್ಲೇ ಕುಳಿತು ಮೊಬೈಲ್ ಮೂಲಕ ಫಾರಂ ಫಿಲ್ಲಿಂಗ್ ಮಾಡಿ ಪ್ರತಿ ತಿಂಗಳಿಗೆ 10,000 ದಿಂದ 20,000 ಸಂಪಾದಿಸಿ.
Mob: 9731891409

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಬೇಕಾಗಿದ್ದಾರೆ. ESI / PF ಸೌಲಭ್ಯ ಊಟ, ವಸತಿಯಿರುತ್ತದೆ ಸಂಬಳ – ರೂ. 15200 – 56,100
7337645977, 7892046990

ವಿವಾಹ ಭಾಗ್ಯ
MRJ ಮ್ಯಾಟ್ರಿಮೋನಿ
ಎಲ್ಲಾ ಜಾತಿಯ ವಧು / ವರರಿಗಾಗಿ ಸಂಪರ್ಕಿಸಿ
1) ಮೊದಲನೇ ಮದುವೆ
2) ಎರಡನೇ ಮದುವೆ
3) ವಿಧವೆ / ವಿಧುರರು
FREE REGISTRATION
Mob: 8904890413

ಹೆಲ್ತ್ ಕೇರ್ ತರಬೇತಿ
SSLC/PUC ಆದವರಿಗೆ ಡಿಪ್ಲೋಮ ಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ.
ಸೆಂಟ್ ಮೇರೀಸ್ ಆಸ್ಪತ್ರೆ
ಸಿಲ್ಕ್ ಫ್ಯಾಕ್ಟರಿ ಸರ್ಕಲ್
NIE ಕಾಲೇಜ್ ಪಕ್ಕ, ಮೈಸೂರು
9916908454

ಮ್ಯಾಂಗೋ ಟ್ರೀ ಬಡಾವಣೆ
Fully Developed ಸೈಟ್‌ಗಳು ಮಾರಾಟಕ್ಕಿವೆ
30x40 ಅಳತೆ
ಇಲವಾಲ ನಂತರ
8050009696

ತಕ್ಷಣ ಬೇಕಾಗಿದ್ದಾರೆ
ನಮಗೆ ಪಾಂಡವಪುರ ಹಾಗೂ ಕೆ.ಆರ್.ಪೇಟೆ ಸ್ಕೂಲ್‌ಗಳಿಗೆ ಕೆಲಸಕ್ಕೆ Security Officer ಬೇಕಾಗಿದ್ದಾರೆ.
7899752014
9741515772

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ಸೈಟು ಬೇಕಾಗಿದೆ
ಚಿಕ್ಕಹಳ್ಳಿ / ವರುಣ / ವಾಜಮಂಗಲ ಹಾಗೂ ಇತರೆ ಅಕ್ಕಪಕ್ಕದ ಬಡಾವಣೆಗಳಲ್ಲಿ T. ನರಸೀಪುರ ರಸ್ತೆ/ ಬನ್ನೂರು ರಸ್ತೆ, ನಂಜನಗೂಡು ರಸ್ತೆ.
Mob: 9686071750

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್, ಸೋಲಾರ್ ಸರ್ವೀಸ್.
8197383645, 9008711654

2 BHK for Rent
1st Floor with Italian kitchen Wardrobes & solar #MUDA Employees Layout, behind YMS Badminton Academy, Kuvempunagar, Mysore.
Mob: 9945655125

LAND FOR SALE IN MYSORE
2.1 acres, 81 kuntaaessi at Marsettihalli Main Road, 1.5 kms from T. Narasipura signal ring road, very near to T.N. Pura main road, good location, clear documents.
8867522787, 9900374767

BOYS-WANTED
Sales Person Mens Show Room
8310093516
9742076736

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಏರಿಯಾ 8 ಗಂಟೆ ಕೆಲಸ SSLC ಓದಿರುವ 45 ವರ್ಷ ವಯಸ್ಸು ಒಳಗಿನ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವೇತನ, ವಾರದರಜಾ ಕ್ಯಾಂಟೀನ್ ESI & PF ಸೌಲಭ್ಯವಿರುತ್ತದೆ ಎಲ್ಲಾ ಕಟ್ಟಾಗಿ ಕೈಗೆ ಸಿಗುವುದು ತಿಂಗಳಿಗೆ 17000 ರೂ. ಸಂಪರ್ಕಿಸಿ:
9731259328

JOB OPPORTUNITY
Interested Persons Only
Designation: Marketing
Qualification: M.Tech or Diploma Civil or BE Civil (1 Year Experience)
srilakshmireadymixconcrete@gmail.com
9606487762

COMMERCIAL PLOT FOR SALE
45x110 prime location in T. Narasipura Town limit. Good location, clear documents.
8867522787, 9900374767

Change of Name
I, Tashi Narbu, residing at G.T. University, Gurupura Post, Hunsur Taluk, Mysuru District-571105, have changed my name as Tashi Norbu on my own free will, in front of Notary L.N. Rajendran on 16-1-2025. I declare that I shall at all times hereafter in all records, deeds and writings and in all proceedings, dealings and transactions, private as well as upon all occasions whatsoever use and sign the name of Tashi Norbu.
Sd/- Tashi Norbu

Document Lost
M. Chandrashekara Aradhya, No. 948, 16th Main, 1st Cross, S.V.P. Nagar, T. Narasipura, Mysore, have lost possession certificate of house, No. 25, LIG-2, Kyathamaranahally Extension, Nazarbad Mohalla, Mysore.
Finders please contact:
Mob: 9880793880


ಮನೆ ಬಾಡಿಗೆ / ಭೋಗ್ಯಕ್ಕೆ ಇದೆ
ಶ್ರೀರಾಂಪುರ ಯೂನಿವರ್ಸಿಟಿ ಲೇಔಟ್ ಎದುರು ಗಾಯತ್ರಿ ಬಡಾವಣೆಯಲ್ಲಿ 1ನೇ ಮಹಡಿಯಲ್ಲಿ 2 ಬಿಹೆಚ್‌ಕೆ ಮತ್ತು 2ನೇ ಮಹಡಿಯಲ್ಲಿ 1 ಬಿಹೆಚ್‌ಕೆ ಮನೆ ಬಾಡಿಗೆ / ಭೋಗ್ಯಕ್ಕೆ ಇದೆ. ಸಂಪರ್ಕಿಸಿ:
Mob: 9481041871

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC & ಮೇಲ್ಪಟ್ಟು
ವಯೋಮಿತಿ 50 ವರ್ಷದೊಳಗೆ
ಸಂಬಳ: 17500 26 days (8 hours)
ESI, PF ಊಟ ತಿಂಡಿ ವಸತಿ ಸೌಲಭ್ಯವಿರುತ್ತದೆ.
9620777819
9620667819

MUDA KHATA SITE SALE
East facing Corner Site
8.7 Mtrs x 12 Mtrs, (Totally 1124 Sqf.ft)
E-Khata done
Direct Owner Rs. 40 Lacs (Slightly Negotiable)
9342123373

FOR SALE
1. 20x30, 30x40, Sites @ Bogadi. Duplex House @ 53L
2. 40x50 SE Crnr 2BHK 4 Houses Near ISKCON Temple
3. 40x60 3BHK, @ Hari Vidhyala, Bogadi
4. Commercial Properties @ Kuvempu Nagar, Saraswati Puram & More.
5. 20x30, Sites & House near Yelwala
30x40 Sites attached to Brahmins Lyt
PRAKRUTHI PROPERTIES
95386 90359, 90359 90359

ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ
ಶ್ರೀರಂಗಪಟ್ಟಣ
Qualification-Any Degree
Work: Guest handling and Property Management
ವಸತಿ ಹಾಗೂ ಆಹಾರ ಸಹಿತ ಆಕರ್ಷಕ ಸಂಬಳ ನೀಡಲಾಗುವುದು.
9035719219
yogadhaamamys@gmail.com



SUNZONE SOLAR SYSTEM
VM Double Road, Kuvempunagar, Mysuru
9845175443

SITE FOR SALE
52X60 SW CORNER SITE FOR SALE IN RMS LAYOUT NEAR DR RAJKUMAR ROAD 40X60 SITE FOR SALE IN SHARADA LAYOUT ATTACHED SRINAGAR
9880344263

SITES FOR SALE
40X60 SITE
ROOPA NAGAR
9740088990

SITE FOR SALE
30X40
SITE @ ROOPA NAGAR
9880273834

ಹೊಸ ಮನೆ ಮಾರಾಟಕ್ಕಿದೆ
20x30
ಡ್ಯೂಪ್ಲೆಕ್ಸ್ 3 ರೂಂ ವಿನಾಯಕ ಗಾರ್ಡನ್ ಸಿಟಿ MUDA ಟಿ.ಎನ್.ಪುರ NH ಹೈವೇ ಹತ್ತಿರ ಆಲನಹಳ್ಳಿ ರಿಂಗ್ ರಸ್ತೆ ಜಂಕ್ಷನ್, ಮೈಸೂರು
9448553810

JOB OPPORUNITY ONLY FOR RETIRED PERSONS
9902508150

SITE REQUIRED
30'x40', 30'x50' Housing site in or around Bankers Layout or Bogadi.
Only Owners contact
7981351087

ಉದ್ಯೋಗವಕಾಶ
ವಯಸ್ಸಾದವರನ್ನು ನೋಡಿಕೊಳ್ಳಲು ಅನುಭವ ಇರುವ ಇಲ್ಲದೆ ಇರುವ ಹುಡುಗ ಹುಡುಗಿಯರು ಕೇರ್ ಟೇಕರ್ ಹೋಮ್ ನರ್ಸ್ ಬೇಕಾಗಿದ್ದಾರೆ. Day Shift/ Night Shift / 24 Hrs
8123630683
8123252840

ಸೈಟುಗಳು ಮಾರಾಟಕ್ಕಿದೆ
30x40
(ಬ್ಯಾಂಕ್ ಲೋನ್ ದೊರೆಯುತ್ತದೆ)
ಶ್ರೀರಾಂಪುರ ರಿಂಗ್ ರೋಡ್ ಮೈಸೂರು
8050345574

SITES FOR SALE
50X80 EAST CFTRI LAYOUT (NEAR SHARADA DEVINAGAR)
9880273834

ಕಾಮಾಖ್ಯ ಶಕ್ತಿ ಪೀಠ ಪ್ರವಾಸ ಅಸ್ಸಾಂ ಮೇಘಾಲಯ ಸೇರಿ 8 ದಿನಗಳು
11/2/25, ಮಧ್ಯ ಪ್ರದೇಶ ಮಹಾಕಾಳೇಶ್ವರ ಹಾಗೂ ಓಂಕಾಳೇಶ್ವರ 4 ದಿನಗಳು
6/2/25, ಗುಜರಾತ್ ಪ್ರವಾಸ ಸೋಮನಾಥ ನಾಗೇಶ್ವರ ಸೇರಿ 8 ದಿನಗಳು 12/2/25 ಸುವರ್ಣ ಯಾತ್ರಾ
6360146483
9019462508

ತಕ್ಷಣ ಬೇಕಾಗಿದ್ದಾರೆ
ನಮ್ಮ ಹೆಲ್ತ್ ಕೇರ್ ಸಂಸ್ಥೆಗೆ ಪುರುಷರು ಹಾಗೂ ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ ಆಕರ್ಷಕ ಸಂಬಳ ನೀಡಲಾಗುವುದು.
(ಸರ್ಕಾರಿ ನೊಂದಯಿತಾ ಸಂಸ್ಥೆ)
9035113222

ವಧು–ವರರಿಗೆ ಸಂಪರ್ಕಿಸಿ
ಒಕ್ಕಲಿಗ, ಲಿಂಗಾಯತ, ಕುರುಬ, ಬಲಿಜಗ, ನಾಯಕ, SC ಎಲ್ಲಾ ಜಾತಿಯ ವಧು–ವರರು, ವಿಧವೆಯರು, ವಿಚ್ಛೇದಿತರು
9591015713

SITE FOR SALE
20x40, 30x40 sites near Hari vidyalaya school Railway layout SBM bogadi
4600 per sqft
8792235466
8884616461

ತಕ್ಷಣ ಬೇಕಾಗಿದ್ದಾರೆ
1. ಸೆಕ್ಯೂರಿಟಿ ಗಾರ್ಡ್ – ವಿಜಯನಗರ, ದಟ್ಟಗಳ್ಳಿ, ರಾಮಕೃಷ್ಣನಗರ, ಹೆಬ್ಬಾಳು)
2. ಹುಡುಗರು – ಹೌಸ್‌ಕೀಪಿಂಗ್ ಕೆಲಸಕ್ಕೆ
3. ಮಹಿಳೆಯರು–ಗಾರ್ಡನ್ ಕೆಲಸಕ್ಕೆ
ESI ಮತ್ತು PF ಸೌಲಭ್ಯವಿರುತ್ತದೆ.
9739166772
9731663856

SITE FOR SALE
30x35 east facing site for sale in varuna nagara layout, Near MIT college kesare Mysore.
Just 28 lakh rupees
+91 8884616461
+91 8073300783

AFFIDAVIT
I, Chikkathayamma (47) Wife of Mahadevaiah, resident of Sagadevillage Harave Hobali, Chamarajanagar Taluk, do hereby certify before a notary that my name is Chikkathayamma in Aadhaar, PAN Card, Ration Card, ID Card, bank Passbook and only in my SBI Life Insurance Policy if is written as Nanjamani I hereby certify before Notary G.Nagashree C.H.Nagara Chikkathayamma and Nanjamani are my names. vide affidavit date: 10-01-2025
Sd/- Chikkathayamma

SITE FOR SALE
50x70 North face, 40 feet road, Roopa Nagar, 4000 per sq feet, bank loan available.
8073300783
8792235466

SITE FOR SALE
30x40 site is available for sale in vishwaprajna attached layout in Hale kesare Mysore. Just 7km from Mysore city Bus stop. Just 2km from Manipal hospital.
Price is 38 lakh
8884616461
8073300783

ತಕ್ಷಣವೇ ಬೇಕಾಗಿದ್ದಾರೆ
NAMMANE CONSTRUCTION PVT, LTD, MYSORE
ಸೇಲ್ಸ್ ಆಫೀಸರ್ ಮತ್ತು ಡ್ರೈವರ್ ಬೇಕಾಗಿದ್ದಾರೆ.
ಕೂಡಲೇ ಸಂಪರ್ಕಿಸಿ:
9035010467
8073882830

ಮನೆ ಭೋಗ್ಯಕ್ಕೆ ಇದೆ
2BHK 24 ಗಂಟೆ ನೀರು ಹಾಗೂ ಸೋಲಾರ್ ಸೌಲಭ್ಯ ಇರುವ ಮನೆ ಮೊದಲನೇ ಮಹಡಿ, ಪಶ್ಚಿಮ ದಿಕ್ಕು, 2ನೇ ಮಹಡಿ ಉತ್ತರ ದಿಕ್ಕಿನ ಮನೆ # 2458/ಕೆ8, 12ನೇ ಕ್ರಾಸ್, ಬಸವೇಶ್ವರ ರಸ್ತೆ, ಕೆ.ಆರ್.ಮೊಹಲ್ಲಾ, (ಅಗ್ರಹಾರ ಮೈಸೂರು–04)
9945615679,9916019102

ವಾಸ್ತು ಪ್ರಕಾರ ಆಲ್ಟ್ರೇಷನ್ ಕೆಲಸ ಮಾಡಿ ಕೊಡಲಾಗುತ್ತದೆ
ಹಳೇ ಮನೆ ಕೆಲಸ ಮತ್ತು ಬಣ್ಣದ ಕೆಲಸ ಗಾರೆ ರಿಪೇರಿ ಮತ್ತು ತಾರಸಿ ಸೋರುವಿಕೆ ಸರಿಪಡಿಸಿಕೊಡಲಾಗುತ್ತದೆ
9880813586
6360884930

ಮನೆ ಮಾರಾಟಕ್ಕಿದೆ
20x30
T.K.Layout
ಮನೆ ನಂ. 201, ಗ್ರೌಂಡ್ 1st, 2nd Duplex
T.K.Layout, Mysore
9880729299

ಜಮೀನು ಮಾರಾಟಕ್ಕಿದೆ
24 ಗುಂಟೆ ಮೈಸೂರು ಸಿಟಿಯಿಂದ 12km, ಬನ್ನೂರು ರಸ್ತೆಯಿಂದ 3km ಅಂತರದಲ್ಲಿ ಫಾರಂ ಹೌಸ್ ಮಾಡಲು ಯೋಗ್ಯವಾದ ಜಮೀನು
9448447035

ಇಂದೇ ಸಂಪರ್ಕಿಸಿ.
ಮೈಸೂರಿನ ಪ್ರಸಿದ್ಧ ಕಂಪನಿ office & Show-room & ಕಂಪನಿಗಳಿಗೆ 7th 10th puc, ITI. Dipolmo Anydegree pass & fail ಆದವರಿಗೆ helpers, packing, Security, Driving, Data Entry Adma HR ಮುಂತಾದ ಕೆಲಸಗಳಿಗೆ ಯುವಕ ಯುವತಿಯರು ಬೇಕಾಗಿದ್ದಾರೆ. (ESI+PF+OT] ಸೇರಿ ಸಂಬಳ 16500/–ರಿಂದ 48000/–
9164052361,6364103418

ನಿರ್ಮಲ ಆಸ್ಪತ್ರೆ ಮತ್ತು ಗೋಪಾಲಗೌಡ ಹಾಸ್ಪಿಟಲ್ ಕ್ಯಾಂಟೀನ್‌ಗೆ ಕೆಲಸಕ್ಕೆ ಬೇಕಾಗಿದ್ದಾರೆ
1. ಟೀ ಕ್ಯಾಂಟೀನ್‌ಗೆ ಭಟ್ಟರು ಬೇಕಾಗಿದ್ದಾರೆ ಫುಡ್ ಸರ್ವಿಸಸ್‌ಗೆ ನಾಲ್ಕು ಜನ ಬೇಕಾಗಿದ್ದಾರೆ. ಹುಡುಗರು/ಹುಡುಗಿಯರು
2. ಅಡುಗೆ ಮಾಡಲು ಇಬ್ಬರು ಭಟ್ಟರು ಬೇಕಾಗಿದ್ದಾರೆ (ಸಸ್ಯಾಹಾರಿ)
9663150577

WANTED
Residential Manager (Experienced)
For Senior commun in Pandavapura Mandya Dist
age 40 to 50
accommadation & Food will be Provided
9986874574

HOUSE FOR SALE
20x30 Duplex Fully Furnished Mahamane Circle Dattagalli
8317413199
7760981659


ಮನೆ ಮಾರಾಟಕ್ಕಿದೆ (ಕಾರ್ನರ್)
40x53 ಚೋರನಹಳ್ಳಿ ಮೇನ್ ರೋಡ್, ಮೈಸೂರು KSRTC ಬಸ್ ಸ್ಟ್ಯಾಂಡ್‌ನಿಂದ 8.5 ಕಿ.ಮೀ ಡಬಲ್ ಬೆಡ್ ರೂಂ ಫುಲ್ ಗ್ರಾನೈಟ್ & ಮುಂದೆ ಕಾರ್ ಪಾರ್ಕಿಂಗ್ & ಅಂಗಡಿ ಮಳಿಗೆ ಕಟ್ಟಲು ಖಾಲಿ ಜಾಗ ಇದೆ. ಕೆ.ಹೆಚ್.ಬಿ ನಿಸರ್ಗ ಬಡಾವಣೆ ಇಲವಾಲ ಸೈಟ್ ಬೇಕಾಗಿದೆ.
7676077678

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 11 ರಲ್ಲಿ

ರೈತರು ಸೌಕರ್ಯವಿಲ್ಲದೆಯೂ ಸಮಯದ ಪರಿವಿಲ್ಲದೇ ದುಡಿಯುತ್ತಾರೆ; ಉದ್ಯಮಗಳಲ್ಲಿ ಎಲ್ಲವನ್ನೂ ನೀಡಿಯೂ ಕಂಡಿಷನ್ ಏಕೆ

ಉದ್ಯಮಿ ಉಲ್ಲಾಸ್ ಕಾಮತ್ ಪ್ರಶ್ನೆ




ವೀರಶೈವ ಲಿಂಗಾಯತ ಗ್ಲೋಬಲ್ ಬಿಸಿನೆಸ್ ಕಾನ್‌ಕ್ಲೇವ್-2025ನಲ್ಲಿ ಉದ್ಯಮಿ ಕೆ.ಉಲ್ಲಾಸ ಕಾಮತ್ ಅವರು, 'ಸಣ್ಣ ಕೈಗಾರಿಕೆ ಮತ್ತು ಕುಟುಂಬ ಉದ್ಯಮ' ವಿಷಯ ಕುರಿತು ಮಾತನಾಡಿದರು.

ಮೈಸೂರು, ಜ.17(ಎಸ್‌ಪಿಎನ್)- ಕೃಷಿ ಕ್ಷೇತ್ರದಲ್ಲಿ ತೊಡಗುವ ರೈತರಿಗೆ ಯಾವುದೇ ಸೌಕರ್ಯವಿಲ್ಲದಿದ್ದರೂ, ಸಮಯದ ಅರಿವೇ ಇಲ್ಲದೆ ಕಷ್ಟಪಟ್ಟು ವರ್ಷ ಪೂರ್ತಿ ದುಡಿಯುತ್ತಾರೆ. ಆದರೆ, ಕೈಗಾರಿಕೆ ಸೇರಿದಂತೆ ಇತರೆ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ವೇತನ ಸೇರಿದಂತೆ ಇತರೆ ಸೌಕರ್ಯ ನೀಡಿಯೂ ಕೆಲಸ ಮಾಡಲು ಕಂಡಿಷನ್ ಏಕೆ ಎಂದು ಜ್ಯೋತಿ ಲ್ಯಾಬೊರೇಟರೀಸ್ ಜಂಟಿ ವ್ಯವಸ್ಥಾಪಕ ನಿರ್ದೇಶಕ ಕೆ.ಉಲ್ಲಾಸ ಕಾಮತ್ ಪ್ರಶ್ನಿಸಿದರು.

ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ಅಂತರರಾಷ್ಟ್ರೀಯ ಲಿಂಗಾಯತ್ ಯೂತ್ ಫೋರಂ (ಐಎಲ್‌ವೈಎಫ್) ಮೈಸೂರು ಘಟಕದ ವತಿಯಿಂದ ಏರ್ಪಡಿಸಿದ್ದ ವೀರಶೈವ ಲಿಂಗಾಯತ ಗ್ಲೋಬಲ್ ಬಿಸಿನೆಸ್ ಕಾನ್‌ಕ್ಲೇವ್-2025ನಲ್ಲಿ ಭಾಗವಹಿಸಿ 'ಸಣ್ಣ ಕೈಗಾರಿಕೆ ಮತ್ತು ಕುಟುಂಬ ಉದ್ಯಮ' ವಿಷಯ ಕುರಿತು ಮಾತನಾಡಿದರು.

ಇತ್ತೀಚೆಗೆ ಎಲ್ ಅಂಡ್ ಟಿ ಛೇರ್ಮನ್ ಎಸ್.ಎನ್.ಸುಬ್ರಹ್ಮಣ್ಯನ್ ಅವರು, ಯುವಕರು ವಾರದಲ್ಲಿ 90 ಗಂಟೆ ದುಡಿಯಬೇಕು ಎಂದರೆ, ಇನ್ಫೋಸಿಸ್ ಸಂಸ್ಥಾಪಕರಾದ ನಾರಾಯಣ ಮೂರ್ತಿ ಅವರು, ಯುವಕರು ವಾರಕ್ಕೆ 70 ಗಂಟೆ ದುಡಿಯಬೇಕು ಎಂದು ಹೇಳಿದ್ದಾರೆ. ಇದು ದೇಶದಲ್ಲಿ ಇದರ ಪರ-ವಿರೋಧ ಚರ್ಚೆಯಾಗುತ್ತಿದೆ. ಇದಕ್ಕೆ ನಿಮ್ಮ ಪ್ರತಿಕ್ರಿಯೆ ಏನು ಎಂದು ಸಭಿಕರೊಬ್ಬರು ಕೇಳಿದ ಪ್ರಶ್ನೆಗೆ ಈ ಮೇಲಿನಂತೆ ಉತ್ತರಿಸಿ, ಇಬ್ಬರೂ ಕೈಗಾರಿಕೋದ್ಯಮಿಗಳ ಹೇಳಿಕೆಯನ್ನು ಬಲವಾಗಿ ಸಮರ್ಥಿಸಿದರು.

ಕೃಷಿ ಕ್ಷೇತ್ರದಲ್ಲಿ ರೈತರು, ಕೆಪಿಟಿಸಿಎಲ್ ವಿದ್ಯುತ್ ಕೊಟ್ಟಾಗ ತಮ್ಮ ಬೆಳೆಗಳಿಗೆ ನೀರು ಹಾಯಿಸುತ್ತಾರೆ. ಕಾರ್ಮಿಕರು ಸಿಕ್ಕಾಗ ಕೃಷಿ ಚಟುವಟಿಕೆಗಳಲ್ಲಿ ತೊಡಗುತ್ತಾರೆ. ಒಟ್ಟಾರೆ, ಸಮಯದ ಅರಿವೇ ಇಲ್ಲದೆ ಕೃಷಿ ಚಟುವಟಿಕೆಯಲ್ಲಿ ತೊಡಗುತ್ತಾರೆ. ಈ ಕ್ಷೇತ್ರದಲ್ಲಿ ತೊಡಗುವ ಯಾವುದೇ ಆರ್ಥಿಕ ಭದ್ರತೆ ಇಲ್ಲದೆ, ಲಕ್ಷಾಂತರ ರೈತರು ಕೆಲಸ ಮಾಡುತ್ತಿರುವಾಗ, ಇತರೆ ಕ್ಷೇತ್ರದಲ್ಲಿ ಆಕರ್ಷಕ ಸಂಬಳ ಸೇರಿದಂತೆ ಇತರೆ ಸೌಕರ್ಯ ನೀಡಿಯು ತಕರಾರು ಏಕೆ ಎಂದು ಪ್ರಶ್ನಿಸಿದರು.

ನೂತನ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ)-2020ರ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಉಲ್ಲಾಸ್ ಕಾಮತ್, ಶಿಕ್ಷಣ ಕ್ಷೇತ್ರದ ಸುಧಾರಣೆ ನಿಟ್ಟಿನಲ್ಲಿ 36 ವರ್ಷದ ಬಳಿಕ ಜಾರಿಗೆ ತಂದಿರುವ ನೂತನ ಶಿಕ್ಷಣ ನೀತಿಯನ್ನು ಸ್ವಾಗತಿಸುತ್ತೇನೆ. ಆದರೆ, ಅದರ ಬಗ್ಗೆ ಹೆಚ್ಚು ಲಂಭಿಸುವುದಿಲ್ಲ ಎಂದು ಚುಟುಕಾಗಿ ಉತ್ತರಿಸಿದರು.

ದೇಶದ ಕೈಗಾರಿಕಾ ಕ್ಷೇತ್ರದಲ್ಲಿ ಬೇರೆ ಬೇರೆ ದೇಶದವರು ಹೆಚ್ಚಿನ ಬಂಡವಾಳ ಹೂಡಿಕೆ ಮಾಡುತ್ತಿದ್ದಾರೆ. ಹೆಚ್ಚಿನ ಯುವಕರು, ಕೌಶಲಾಧಾರಿತ ಶಿಕ್ಷಣ, ಹೆಚ್ಚು ಜನರು ಮಾತನಾಡುವ ಭಾಷೆ ಕಲಿಯುವುದರ ಜೊತೆಗೆ ಮಾತೃ ಭಾಷೆ ಕಲಿಕೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಯುವಕರು, ಸಣ್ಣ ಕೈಗಾರಿಕಾ ಕ್ಷೇತ್ರದಲ್ಲಿ ಅನುಭವ ಪಡೆದು ಸ್ವಂತ ಉದ್ಯಮ ಸ್ಥಾಪಿಸುವುದರ ಕಡೆಗೆ ಹೆಚ್ಚಿನ ಆದ್ಯತೆ ನೀಡಬೇಕು ಸಲಹೆ ನೀಡಿದರು.

ನಾನು ಯಾವುದೇ ಹುದ್ದೆಗೆ ಅಂಟಿಕೊಂಡು ಕೂತಿಲ್ಲ: ಡಿಸಿಎಂ ಡಿ.ಕೆ.ಶಿವಕುಮಾರ್



ಬೆಂಗಳೂರು, ಜ.17- ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ(ಕೆಪಿಸಿಸಿ) ಅಧ್ಯಕ್ಷ ಸ್ಥಾನದ ಬದಲಾವಣೆ ವಿಚಾರಕ್ಕೆ ಪ್ರತಿಕ್ರಿಯಿಸಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ತಾವು ಯಾವುದೇ ಹುದ್ದೆದೆ ಅಂಟಿಕೊಂಡು ಕೂತಿಲ್ಲ ಎಂದು ಶುಕ್ರವಾರ ಹೇಳಿದ್ದಾರೆ.

ಇಂದು ನಗರದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಶಿವಕುಮಾರ್, ಹೊಸ ರಾಜ್ಯಾಧ್ಯಕ್ಷರ ಬೇಡಿಕೆಯ ಕುರಿತ ಪ್ರಶ್ನೆಗೆ ಉತ್ತರಿಸುತ್ತಾ, ನಾನು ಯಾವುದೇ ಹುದ್ದೆಗೆ ಅಂಟಿಕೊಂಡು ಕೂತಿಲ್ಲ . ನಮ್ಮ ಪಕ್ಷದಲ್ಲಿ ಅವರ ನಾಯಕತ್ವ ಮತ್ತು ಸಂಘಟನಾ ಸಾಮರ್ಥ್ಯದ ಆಧಾರದ ಮೇಲೆ ಸ್ಥಾನಗಳನ್ನು ನೀಡಲಾಗುತ್ತದೆ. ನಾನು ಇತರ ರಾಜಕೀಯ ಪಕ್ಷ ಗಳ ಬಗ್ಗೆ ಮಾತ ನಾಡುವುದಿಲ್ಲ. ಹುದ್ದೆಯ ಬಗ್ಗೆ ಮಾಧ್ಯಮ ಗಳಲ್ಲಿ ಚರ್ಚಿಸಬೇಕಾಗಿಲ್ಲ ಎಂದರು.

ಪಕ್ಷವು ಈ ಸಮಸ್ಯೆಗಳನ್ನು ಪರಿಹರಿಸುತ್ತದೆ ಮತ್ತು ಕರ್ನಾಟಕದವರಾಗಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಪರಿಸ್ಥಿತಿಯ ಬಗ್ಗೆ ಚೆನ್ನಾಗಿ ತಿಳಿದಿದೆ ಎಂದರು.

ಏತನ್ಮಧ್ಯೆ ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಅವರು ಬೆಂಗಳೂರಿನಲ್ಲಿರುವ ಗೃಹ ಸಚಿವ ಜಿ. ಪರಮೇಶ್ವರ ಅವರ ಮನೆಗೆ ಭೇಟಿ ನೀಡಿ, ಸುಮಾರು 40 ನಿಮಿಷಗಳ ಕಾಲ ಚರ್ಚಿಸಿದ್ದು, ಹಲವು ಊಹಾ ಪೋಹಗಳಿಗೆ ಕಾರಣವಾಗಿದೆ.

ಬಳಿಕ ಮಾಧ್ಯಮದವರು ಪ್ರಶ್ನಿಸಿದಾಗ, ಯಾವುದೇ ನಿರ್ದಿಷ್ಟ ವಿಷಯಗಳ ಬಗ್ಗೆ ಚರ್ಚಿಸಲಾಗಿಲ್ಲ ಮತ್ತು ಇದು ಅನೌಪಚಾರಿಕ ಸಭೆಯಾಗಿತ್ತು ಎಂದು ಸಚಿವ ಮಹಾದೇವಪ್ಪ ಸ್ಪಷ್ಟಪಡಿಸಿದರು.

ಮಾಧ್ಯಮಗಳೊಂದಿಗೆ ಮಾತನಾಡಿದ ಸಚಿವ ಪರಮೇಶ್ವರ ಅವರು, "ಇದರಲ್ಲಿ ವಿಶೇಷ ಏನೂ ಇಲ್ಲ. ಮಹದೇವಪ್ಪ ವೈಯಕ್ತಿಕ ವಿಷಯಗಳ ಬಗ್ಗೆ ಚರ್ಚಿಸಲು ಬಂದಿದ್ದರು. ನಮಗೆ ಪ್ರತ್ಯೇಕವಾಗಿ ಮಾತನಾಡಲು ಅವಕಾಶವಿಲ್ಲವೇ? ನಾವು ಆಗಾಗ್ಗೆ ಪರಸ್ಪರ ಭೇಟಿ ಮಾಡುತ್ತೇವೆ. ನಾವು ಒಟ್ಟಿಗೆ ಊಟ ಅಥವಾ ಭೋಜನ ಮಾಡುವುದು ತಪ್ಪಾ ಎಂದು.

IN THE COURT OF THE III ADDITIONAL SENIOR CIVIL JUDGE AT MYSURU.
O.S.# 1678/2023.

Plaintiffs:Arvind Kumar Jain And another, -Vs- Defendants: Santhosh.G.N & others

To,
1. Sri. Santhosh.G.N. Aged about 43 years, S/o. G.M. Nagaraj, Residing at House # 76, Hulse Moodaravalli, Hulse Handli, Somawarapete Taluk Kodagu District-571235.
2. Smt Yashaswini.C.C., Aged about 34 years, W/o. Sri. Santhosh.G.N, Residing at House # 76, Hulse Moodaravalli, Hulse Handli, Somawarapete Taluk Kodagu District-571235

Defendants #1&2

NOTICE

The above named Plaintiffs have filed the above suit for recovery of sum of Rs.12,91,200/- together with Court costs, current and future interest at the rate of 12% per annum from the date of suit till the date of realization and for the Reliefs and the above case is posted to 01-03-2025 at 11 A,M before the above court for your appearance

If you fail to appear before the above Court on the said date and time, either in person or through Advocate, failing which the matter will be proceeded on its merits by placing you exparte.

BY ORDER OF THE COURT
Sd/- Chief Ministerial Officer
Court of Senior Civil Judge & CJM, Mysuru

Sd/- Sri. O. Shama Bhat, & O. Sathisha, Advocates for the Plaintiffs, # 20/c, 2nd Floor, Jayalakshmivilas Road, Chamarajapuram, Mysuru.



ಕ್ರ.ಸಂ.	ಅಭ್ಯರ್ಥಿ ಹೆಸರು	ಚಿಹ್ನೆ
02	ಅರವಿಂದ ಎಸ್.(B.Sc.,) ಹಾಲಿ ನಿರ್ದೇಶಕರು; ಸಾಮಾನ್ಯ; ಮೊ : 7353137359	ರೈಲುಇಂಜಿನ್
06	ಜಿ.ಕುಮಾರ್‌ಗೌಡ; ಮಾಜಿ ಗೌರವಾಧ್ಯಕ್ಷರು ಹಾಲಿ ನಿರ್ದೇಶಕರು ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘ. ಶ್ರೀ ಆದಿಶಕ್ತಿ ಬಂದಂತಮ್ಮ ಕಾಳಮ್ಮ ಸೇವಾ ಸಮಿತಿ ಉಪಾಧ್ಯಕ್ಷರು, ಕೆ. ಜಿ ಕೊಪ್ಪಲು, ಕುವೆಂಪುನಗರ ಮೈಸೂರು.; ಸಾಮಾನ್ಯ; ಮೊ : 98452 45166	ಹೊಲಿಗೆಯಂತ್ರ
10	ಎಂ.ಛಾಯಮ್ಮ M.Sc.; ಸಾಮಾನ್ಯ ಮಹಿಳಾ ಮೀಸಲು; ಮೊ : 98809 43906	ಸಿಲಿಂಡರ್
18	ಎ.ಮಂಚಪ್ಪ ಹಾಲಿ ನಿರ್ದೇಶಕರು; ಎಸ್.ಸಿ.ಮೀಸಲು; ಮೊ : 9845667887	ಹಣ್ಣಿನ ಬುಟ್ಟಿ
19	ಎಸ್.ಬಿ.ಎಂ.ಮಂಜು M.A., ಮಾಜಿ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರು, ಮಾಜಿ ಸದಸ್ಯರು, ಮೈಸೂರು ಮಹಾನಗರ ಪಾಲಿಕೆ; ಸಾಮಾನ್ಯ; ಮೊ : 9886249004	ಸೇಬು
22	ಆರ್.ರವಿಕುಮಾರ್ ರಾಜಕೀಯ, ಹಾಲಿ ನಿರ್ದೇಶಕರು; ಸಾಮಾನ್ಯ; ಮೊ : 9731560007	ಆಟೋರಿಕ್ಷಾ
23	ಆರ್.ರವಿಕುಮಾರ್ (SR) B.Com, (DCA), ಹಾಲಿ ನಿರ್ದೇಶಕರು, ಭಾರತೀಯ ರಾಷ್ಟ್ರೀಯ ಬ್ಯಾಂಕಿಂಗ್ ಪದವೀಧರರು; ಹಿಂದುಳಿದ ವರ್ಗ; ಮೊ : 9845632555	ಜೀಪು
28	ಎಸ್.ರೋಹಿತ್, ದಿ. ಶಿವರುದ್ರಪ್ಪನವರ ಮಗ ಮಂಜುಳ ಸೌಂಡ್ಸ್ ಸಿಸ್ಟಂ, ಸುಣ್ಣದಕೇರಿ; ಎಸ್.ಟಿ.ಮೀಸಲು; ಮೊ : 94482 46844	ಬಲ್ಬು
30	ಹೆಚ್.ವಸಂತ ಮುನೀಶ್, ಮಾಜಿ ನಿರ್ದೇಶಕರು, ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಮಹಿಳಾ ಸಹಕಾರ ಬ್ಯಾಂಕ್ ನಿರ್ದೇಶಕರು, ಜಿಲ್ಲಾ ಒಕ್ಕಲಿಗರ ಸಂಘ; ಸಾಮಾನ್ಯ ಮಹಿಳಾ ಮೀಸಲು; ಮೊ : 99800 29481	ಗುಲಾಬಿ
31	ವಿಕಾಶ್ ವೈ. M.B.A., SBM ಮಂಜು ರವರ ಸಹೋದರ ಎಸ್. ಯೋಗೇಶ್ ರವರ ಪುತ್ರ; ಸಾಮಾನ್ಯ; ಮೊ : 96119 96250	ತೆಂಗಿನಕಾಯಿ

ಹಸುಗಳ ಮೇಲಿನ ಹೀನ ಕೃತ್ಯ ಖಂಡಿಸಿ ಪ್ರತಿಭಟನೆ



ಹಿಂದೂಪರ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮಡಿಕೇರಿ, ಜ.17–ಬೆಂಗಳೂರಿನ ಚಾಮರಾಜಪೇಟೆಯಲ್ಲಿ ಹಸುಗಳ ಕೆಚ್ಚಲುಗಳನ್ನು ಕತ್ತರಿಸಿ ದುಷ್ಕೃತ್ಯ ಎಸಗಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಗೋ ಸಂರಕ್ಷಣಾ ಸಂವರ್ಧನಾ ಸಮಿತಿ ನೇತೃತ್ವದಲ್ಲಿ ವಿವಿಧ ಹಿಂದೂಪರ ಸಂಘಟನೆಗಳ ಕಾರ್ಯಕರ್ತರು ನಗರದಲ್ಲಿ ಶುಕ್ರವಾರ ಬೃಹತ್ ಪ್ರತಿಭಟನೆ ನಡೆಸಿದರು.

ನಗರದ ಜನರಲ್ ಕೆ.ಎಸ್.ತಿಮ್ಮಯ್ಯ ವೃತ್ತದಲ್ಲಿ ಸಮಾವೇಶಗೊಂಡ ಹಿಂದೂಪರ ಸಂಘಟನೆಗಳ ಪ್ರಮುಖರು ಮತ್ತು ಕಾರ್ಯಕರ್ತರು, ಮಾನವ ಸರಪಳಿ ರಚಿಸಿ ಹಸುಗಳ ಮೇಲಿನ ಹೀನ ಕೃತ್ಯದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ರಾಜ್ಯ ಕಾಂಗ್ರೆಸ್ ಸರ್ಕಾರ ಗೋ ಹತ್ಯೆಗೆ ಬೆಂಬಲ ನೀಡುತ್ತಿದೆ. ರಾಜ್ಯದಲ್ಲಿ ಗೋ ಹತ್ಯೆ ನಿಷೇಧ ಕಾನೂನನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ಹಿಂದೂ ಸಮಾಜಕ್ಕೆ ಪೂಜ್ಯನೀಯವಾಗಿರುವ ಹಸುಗಳ ಮೇಲೆ ಕೃತ್ಯ ಎಸಗಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುತ್ತಿಲ್ಲ ಎಂದು ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನಾಕಾರರು ಆರೋಪಿಸಿದರು.

ದುಷ್ಕರ್ಮಿಗಳನ್ನು ಬಂಧಿಸಿ: ಹಿಂದೂ ಜಾಗರಣಾ ವೇದಿಕೆ ಅಧ್ಯಕ್ಷ ರವಿಗೌಡ ಮಾತನಾಡಿ, ಹಸುವಿನ ಮೇಲೆ ಕ್ರೌರ್ಯ ಎಸಗುವ ಮೂಲಕ ಹಿಂದೂ ಸಮಾಜದ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರಲಾಗಿದೆ. ತಕ್ಷಣ ದುಷ್ಕೃತ್ಯ ಎಸಗಿದವರ ಬಂಧನಕ್ಕೆ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ವಿಶ್ವ ಹಿಂದೂ ಪರಿಷತ್‌ನ ಮಠ–ಮಂದಿರ ಅರ್ಚಕರ ವಿಭಾಗದ ಪ್ರಮುಖ ಮಹಾಬಲೇಶ್ವರ ಭಟ್ ಮಾತನಾಡಿ, ಅತ್ಯಂತ ಪವಿತ್ರವಾದ ಗೋವುಗಳ ವಿರುದ್ಧ ಹೇಯ ಕೃತ್ಯ ಎಸಗಲಾಗಿದೆ. ಸರ್ಕಾರ ತನಿಖೆಗೂ ಮೊದಲೇ ಈ ಘಟನೆ ಮಾನಸಿಕ ಅಸ್ವಸ್ಥನಿಂದ ನಡೆದಿದೆ ಎಂದು ತೀರ್ಪು ನೀಡಲು ಮುಂದಾಗುತ್ತಿದೆ. ಪ್ರಕರಣವನ್ನು ಸೂಕ್ತ ತನಿಖೆಗೊಳಪಡಿಸಿ, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಹಿಂದೂ ಜಾಗರಣಾ ವೇದಿಕೆ ಮಾಜಿ ಅಧ್ಯಕ್ಷ ಕುಕ್ಕೇರ ಅಜಿತ್, ಕಾರ್ಯಾಧ್ಯಕ್ಷ ಸುರೇಶ್ ಮುತ್ತಪ್ಪ, ಸಂಪತ್ ಕುಮಾರ್, ಮದಿಯೊಕ್ಕಡ ರಮೇಶ್, ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ಮಾಜಿ ಅಧ್ಯಕ್ಷ ರಾಬಿನ್ ದೇವಯ್ಯ, ಪ್ರಮುಖರಾದ ಶಾಂತೆಯಂಡ ರವಿ ಕುಶಾಲಪ್ಪ, ಅನಿತಾ ಪೂವಯ್ಯ, ಮಹೇಶ್ ಜೈನಿ, ರಮೇಶ್ ಹೊಳ್ಳ, ಬಿ.ಕೆ.ಜಗದೀಶ್, ಸುಬ್ರಹ್ಮಣ್ಯ ಹೊಳ್ಳ, ಕನ್ನಂಡ ಸಂಪತ್, ವಿನಯ್, ಕೆ.ಎಸ್.ರಮೇಶ್, ಸತೀಶ್ ಪೈ, ಪಿ.ಎಂ.ರವಿ, ಸವಿತಾ ರಾಕೇಶ್, ಕನ್ನಿಕೆ, ಡೀನ್ ಬೋಪಣ್ಣ, ಬಿ.ಪಿ.ಡಿಶು, ಅರುಣ್ ಶೆಟ್ಟಿ ಮತ್ತಿತರರು ಭಾಗವಹಿಸಿದ್ದರು.

ಸಜ್ಜನರೊಂದಿಗೆ ಸಾರ್ಥಕ ಬದುಕು ಸಾಗಿಸಬೇಕು

● ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿಮತ ● 'ದುಗ್ಗಹಟ್ಟಿ ಧೀಮಂತ' ಕೃತಿ ಲೋಕಾರ್ಪಣೆ



ಯಳಂದೂರು ಎಸ್‌ಡಿವಿಎಸ್ ವಿದ್ಯಾಸಂಸ್ಥೆ ಆವರಣದಲ್ಲಿ ನಡೆದ 'ದುಗ್ಗಹಟ್ಟಿ ಧೀಮಂತ' ಕೃತಿ ಲೋಕಾರ್ಪಣೆ ಕಾರ್ಯಕ್ರಮವನ್ನು ಪಿ.ಜಿ.ಆರ್.ಸಿಂಧ್ಯಾ ಉದ್ಘಾಟಿಸಿದರು.

ಯಳಂದೂರು, ಜ.17–ಮಾನವೀಯ ಮೌಲ್ಯಗಳ ನೆಲೆಗಟ್ಟಿನಲ್ಲಿ ಉತ್ತಮ ಶಿಕ್ಷಣ ಪಡೆದು ಸಜ್ಜನರೊಂದಿಗೆ ಸಾರ್ಥಕ ಬದುಕು ಸಾಗಿಸಬೇಕು ಎಂದು ಸುತ್ತೂರು ಮಠಾಧ್ಯಕ್ಷರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ಪಟ್ಟಣದ ಎಸ್‌ಡಿವಿಎಸ್ ವಿದ್ಯಾಸಂಸ್ಥೆ ಆವರಣದಲ್ಲಿ ಹಮ್ಮಿಕೊಂಡಿದ್ದ ದುಗ್ಗಹಟ್ಟಿ ವೀರಭದ್ರಪ್ಪ ಅಭಿನಂದನೆ ಹಾಗೂ ದುಗ್ಗಹಟ್ಟಿ ಧೀಮಂತ ಕೃತಿ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಉತ್ತಮ ಜೀವನ ರೂಪಿಸಿಕೊಳ್ಳಲು ಶಿಕ್ಷಣ ಬಹುಮುಖ್ಯ. ಪ್ರತಿಯೊಬ್ಬರು ಶಿಕ್ಷಣ ಪಡೆಯಬೇಕು. ಈ ನಿಟ್ಟಿನಲ್ಲಿ ವೀರಭದ್ರಪ್ಪ ಅವರು ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ನೀಡುವ ನಿಟ್ಟಿನಲ್ಲಿ ಶ್ರಮಿಸಿದ್ದಾರೆ ಎಂದು ತಿಳಿಸಿದರು.

ಸಿದ್ದಗಂಗಾ ಮಠದ ಕಿರಿಯ ಶ್ರೀಗಳಾದ ಶಿವಸಿದ್ದೇಶ್ವರ ಸ್ವಾಮೀಜಿ ಮಾತನಾಡಿ, ಕಾಯಕ ಜೀವಿಗಳಾದ ವೀರಭದ್ರಪ್ಪ ಅವರು ತಮ್ಮ ಬದುಕಿನ ಉದ್ದಕ್ಕೂ ಕಾಯಕಕ್ಕೆ ಹೆಚ್ಚಿನ ಮಹತ್ವ ನೀಡಿದವರು. ಇವರ ಆದರ್ಶ ಬದುಕು ಬರಹ ಕುರಿತ ಕೃತಿಯ ಮೌಲ್ಯಗಳನ್ನು ಅನುಸರಿಸುವಂತೆ ಸಲಹೆ ನೀಡಿದರು.

ಶಾಸಕ ಪುಟ್ಟರಂಗಶೆಟ್ಟಿ ಮಾತನಾಡಿ, ವೀರಭದ್ರಪ್ಪ ಅವರು ಯಳಂದೂರಿನ ಬಳಗಿರಂಗನಬೆಟ್ಟದ ರಸ್ತೆ ನಿರ್ಮಾಣ, ಕು ಷಷ್ಠದ ಜಾವ ದೇವ ಗಳಿಗೆ ಜೀರ್ಣೋದ್ಧಾರ, ಸಾಹಿತ್ಯ, ಸಾಂಸ್ಕೃತಿಕ ಸಂರಕ್ಷಣೆ, ರೈತರ ಚಿಂತನೆಗಳನ್ನು ಮೈಗೂಡಿಸಿಕೊಂಡಿದ್ದರು ಎಂದರು.

ರಾಜ್ಯ ಸ್ಟೇಟ್ ಅಂಡ್ ಗೈಡ್ಸ್ ಮುಖ್ಯ ಆಯುಕ್ತ ಪಿ.ಜಿ.ಆರ್.ಸಿಂಧ್ಯಾ ಮಾತನಾಡಿ, ಹಿಂದುಳಿದ ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಣ ಸಂಸ್ಥೆ ತೆರೆದು ಶಿಕ್ಷಣ ನೀಡುವುದು ಸುಲಭದ ಮಾತಲ್ಲ. ಈ ನಿಟ್ಟಿನಲ್ಲಿ ವೀರಭದ್ರಪ್ಪನವರು ಸಂಸ್ಥೆಯಲ್ಲಿ ನುರಿತ ಶಿಕ್ಷಕರು ಹಾಗೂ ಸಿಬ್ಬಂದಿ, ಪೋಷಕರ ಸಹಕಾರದಿಂದ ಉತ್ತಮ ಶಿಕ್ಷಣ ಸಂಸ್ಥೆ ಪ್ರಾರಂಭಿಸಿ, ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿದ್ದಾರೆ ಎಂದು ತಿಳಿಸಿದರು.

ಶಾಸಕ ಎ.ಆರ್.ಕೃಷ್ಣಮೂರ್ತಿ, ಡಾ.ಶ್ರೀ ಶರತ್‌ಚಂದ್ರ ಸ್ವಾಮೀಜಿ ಮಾತನಾಡಿದರು. ಶಾಸಕ ಗಣೇಶ ಪ್ರಸಾದ್, ಕಾಡಾ ಅಧ್ಯಕ್ಷ ಮರಿಸ್ವಾಮಿ, ಮಾಜಿ ಶಾಸಕರಾದ ಜಿ.ಎನ್.ನಂಜುಂಡಸ್ವಾಮಿ, ಪರಿಮಳಾ ನಾಗಪ್ಪ, ಎಸ್.ಬಾಲರಾಜು, ಚಾಮುಲ್ ಅಧ್ಯಕ್ಷ ನಾಗೇಂದ್ರ, ಜಿಪಂ ಮಾಜಿ ಅಧ್ಯಕ್ಷೆ ಲಕ್ಷ್ಮಿ ಮಲ್ಲು, ವಿದ್ಯಾಸಂಸ್ಥೆ ಅಧ್ಯಕ್ಷ ಮಲ್ಲಿಕಾರ್ಜುನ ಸ್ವಾಮಿ, ಕಾರ್ಯದರ್ಶಿ ಗಂಗಾಧರ ಸ್ವಾಮಿ, ಖಜಾಂಚಿ ಡಿ.ಜಿ.ರಾಜಶೇಖರ್, ಸದಸ್ಯರಾದ ಪ್ರವೀಣಾ ಗುರುಪ್ರಸಾದ್, ಗೌರಮ್ಮ ಮಹದೇವಸ್ವಾಮಿ, ಐಟಿಐ ಪ್ರಾಂಶುಪಾಲ ವಿಶ್ವಾಸ್, ಗುರುಪ್ರಸಾದ್, ಜಿಪಂ ಮಾಜಿ ಸದಸ್ಯರಾದ ಯೋಗೇಶ್, ಸದಾಶಿವ ಮೂರ್ತಿ, ಮೂಡ್ಲುಪುರ ನಂದೀಶ್, ಅರಕಲವಾಡಿ ಗುರುಸ್ವಾಮಿ, ತೋಟೇಶ್, ಬಿ.ಕೆ. ರವಿಕುಮಾರ್, ಸಂತೋಷ್, ಮಹದೇವಪ್ಪ ಇತರರು ಇದ್ದರು.

ಸರ್ಕಾರಿ ಭೂಮಿ ಒತ್ತುವರಿ ತೆರವುಗೊಳಿಸುವಂತೆ ಆಗ್ರಹಿಸಿ ಪ್ರತಿಭಟನೆ



ಸರ್ಕಾರಿ ಭೂಮಿ ಒತ್ತುವರಿ ತೆರವುಗೊಳಿಸುವಂತೆ ಆಗ್ರಹಿಸಿ ಭೂ ಗುತ್ತಿಗೆ ವಿರೋಧಿ ಹೋರಾಟ ಸಮಿತಿಯಿಂದ ಮಡಿಕೇರಿ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಮಡಿಕೇರಿ, ಜ.17–ಸರ್ಕಾರಿ ಭೂಮಿಯನ್ನು ಅನಧಿಕೃತವಾಗಿ ಅತಿಕ್ರಮಿಸಿಕೊಂಡವರಿಗೆ ಮತ್ತೆ ಅದನ್ನು ಗುತ್ತಿಗೆ ಆಧಾರದಲ್ಲಿ ನೀಡುವ ಭೂ ಗುತ್ತಿಗೆ ಕಾಯ್ದೆಯನ್ನು ಹಿಂಪಡೆದು, ಒತ್ತುವರಿ ತೆರವುಗೊಳಿಸುವಂತೆ ಆಗ್ರಹಿಸಿ ಭೂ ಗುತ್ತಿಗೆ ವಿರೋಧಿ ಹೋರಾಟ ಸಮಿತಿಯಿಂದ ಶುಕ್ರವಾರ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಯಿತು.

ಭೂ ಗುತ್ತಿಗೆ ವಿರೋಧಿ ಹೋರಾಟ ಸಮಿತಿ ಅಧ್ಯಕ್ಷ ಡಿ.ಎಸ್.ನಿರ್ವಾಣಪ್ಪ ನೇತೃತ್ವದಲ್ಲಿ ವಿವಿಧ ಸಂಘಟನೆಗಳ ಪ್ರಮುಖರು, ನೂರಾರು ನಿವೇಶನ ರಹಿತರು ನಗರದ ಸುದರ್ಶನ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿ ವರೆಗೆ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದರು.

ನಮ್ಮ ಭೂಮಿ ನಮ್ಮ ಹಕ್ಕು ಘೋಷಣೆಯೊಂದಿಗೆ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದ ನಿವೇಶನ ರಹಿತರು ಮತ್ತು ವಿವಿಧ ಸಂಘಟನೆಗಳ ಪ್ರಮುಖರು, ಸರ್ಕಾರ ಇನ್ನಾದರು ಎಚ್ಚೆತ್ತು ಸರ್ಕಾರಿ ಭೂಮಿ ಅತಿಕ್ರಮಣ ತೆರವುಗೊಳಿಸಬೇಕು. ಈ ಭೂಮಿಯನ್ನು ನಿವೇಶನ ರಹಿತರಿಗೆ ನೀಡಲು ಕ್ರಮ ಕೈಗೊಳ್ಳಬೇಕು. ಹಿಂದಿನ ಸರ್ಕಾರ ಜಾರಿಗೆ ತಂದಿದ್ದ ಭೂ ಗುತ್ತಿಗೆ ಕಾಯ್ದೆಯನ್ನು ತಕ್ಷಣ ಕೈ ಬಿಡಬೇಕು ಎಂದು ಒತ್ತಾಯಿಸಿದರು.

ವಿಧಾನಸೌಧ ಚಲೋ: ನಿವೇಶನ ರಹಿತರಿಗೆ ನಿವೇಶನ ನೀಡುವುದು ಸೇರದಂತೆ ವಿವಿಧ ಬೇಡಿಕೆ ಈಡೇರಿಕೆಯ ಹೋರಾಟ ಇಲ್ಲಿಗೆ ನಿಲ್ಲುವುದಿಲ್ಲ. ನಮ್ಮ ಹೋರಾಟಕ್ಕೆ ಸರ್ಕಾರ ಸೂಕ್ತ ಸ್ಪಂದಿಸದಿದ್ದಲ್ಲಿ ಜಿಲ್ಲೆಯಿಂದ ಸಾವಿರಾರು ಮಂದಿ ನಿವೇಶನ ರಹಿತರೊಂದಿಗೆ 'ವಿಧಾನಸೌಧ ಚಲೋ' ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಭೂ ಗುತ್ತಿಗೆ ವಿರೋಧಿ ಹೋರಾಟ ಸಮಿತಿ ಅಧ್ಯಕ್ಷ ಡಿ.ಎಸ್. ನಿರ್ವಾಣಪ್ಪ ತಿಳಿಸಿದರು.

ಪ್ರತಿಭಟನೆಯಲ್ಲಿ ಸಮಿತಿ ಸಂಚಾಲಕರಾದ ಕೆ.ಮೊಣ್ಣಪ್ಪ, ರಮೇಶ್ ಮಾಯಮುಡಿ, ರಮೇಶ್, ಹೆಚ್.ಈ. ಸಣ್ಣಪ್ಪ, ಪ್ರಮುಖರಾದ ಟಿ.ಎನ್. ಗೋವಿಂದಪ್ಪ, ಕಾರ್ಮಿಕ ಮುಖಂಡ ಪಿ.ಆರ್.ಭರತ್, ದಸಂಸ ಜಿಲ್ಲಾ ಸಂಚಾಲಕ ಹೆಚ್.ಎಲ್. ದಿವಾಕರ್, ವಿಭಾಗೀಯ ಸಂಚಾಲಕ ವೀರಭದ್ರಯ್ಯ, ಸಂಘಟನಾ ಸಂಚಾಲಕ ಡಿ.ಜೆ.ಈರಪ್ಪ, ಸಿಪಿಐ ಜಿಲ್ಲಾಧ್ಯಕ್ಷ ಸುನಿಲ್, ಪ್ರಗತಿಪರ ಹೋರಾಟಗಾರ ಪ್ರೇಮ್ ಕುಮಾರ್, ದಸಂಸ ಮಾವ್ಳಿ ಶಂಕರ್ ಬಣದ ಹೆಚ್.ಆರ್. ಶಿವಣ್ಣ, ಎಐಯುಕೆಎಸ್‌ನ ಹೆಚ್.ಜೆ. ಪ್ರಕಾಶ್, ಸಿಪಿಐಎಂಎಲ್‌ನ ಜಿಲ್ಲಾ ಕಾರ್ಯದರ್ಶಿ ವೈ.ಎಂ.ಸುರೇಶ್, ದಲಿತ ಆದಿವಾಸಿ ಕೃಷಿ ಕಾರ್ಮಿಕರ ಸಂಘದ ಜಿಲ್ಲಾ ಮುಖಂಡ ಮುತ್ತಣ್ಣ ಮತ್ತಿತರರು ಪಾಲ್ಗೊಂಡಿದ್ದರು.

ಜ.21ರಂದು ಬೆಳಗಾಂನಲ್ಲಿ ಜೈ ಸಂವಿಧಾನ್ ಸಮಾವೇಶ



ಚಾಮರಾಜನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾಜಿ ಉಪಸಭಾಪತಿ ವಿ.ಆರ್.ಸುದರ್ಶನ್ ಮಾತನಾಡಿದರು.

ಚಾಮರಾಜನಗರ, ಜ.17–ಅಖಿಲ ಭಾರತ ಹಾಗೂ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ವತಿಯಿಂದ ಜ.21ರಂದು ಬೆಳಗಾಂನಲ್ಲಿ ಹಮ್ಮಿಕೊಂಡಿರುವ ಜೈ ಬಾಪೂ, ಜೈ ಭೀಮ್, ಜೈ ಸಂವಿಧಾನ್ ಸಮಾವೇಶಕ್ಕೆ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಜಿಲ್ಲಾ ಕಾಂಗ್ರೆಸ್ ಉಸ್ತುವಾರಿ ಹಾಗೂ ವಿಧಾನಪರಿಷತ್ ಮಾಜಿ ಉಪ ಸಭಾಪತಿ ವಿ.ಆರ್.ಸುದರ್ಶನ್ ಮನವಿ ಮಾಡಿದರು.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಸಮಾವೇಶದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಸೂರ್ಯ, ಚಂದ್ರ ಇರುವ ತನಕ ಜೈ ಬಾಪೂ, ಜೈ ಭೀಮ್, ಜೈ ಸಂವಿಧಾನ್ ಇರುತ್ತದೆ. ದೇಶದ ಪ್ರಜಾಪ್ರಭುತ್ವ ವ್ಯವಸ್ಥೆ, ಸಂವಿಧಾನವನ್ನು ಮುಂದಿನ ಪೀಳಿಗೆಗೆ ತಿಳಿಸಿಕೊಡುವ ನಿಟ್ಟಿನಲ್ಲಿ ಸಮಾವೇಶ ನಡೆಸಲಾಗುತ್ತಿದೆ. ಇದೊಂದು ಐತಿಹಾಸಿಕ ಕಾರ್ಯಕ್ರಮವಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಸಂಸದ ಸುನೀಲ್ ಬೋಸ್, ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಎ.ಆರ್.ಕೃಷ್ಣಮೂರ್ತಿ, ಹೆಚ್.ಎಂ.ಗಣೇಶಪ್ರಸಾದ್, ಮಾಜಿ ಶಾಸಕ ಜಿ.ಎನ್. ನಂಜುಂಡಸ್ವಾಮಿ, ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್.ಸಿ.ಬಸವರಾಜು, ಮಿಲಿಂದರ್ ಧರ್ಮಸೇನೆ, ಜಿಲ್ಲಾ ಉಪಾಧ್ಯಕ್ಷರಾದ ಬಿ.ಕೆ.ರವಿಕುಮಾರ್, ವಡಗೆರೆ ದಾಸ್, ಪ್ರಧಾನಕಾರ್ಯದರ್ಶಿಗಳಾದ ಆರ್.ಮಹದೇವು, ಚಿಕ್ಕಮಹದೇವು, ಜಿಪಂ ಮಾಜಿ ಸದಸ್ಯರಾದ ಕೆ.ಪಿ. ಸದಾಶಿವಮೂರ್ತಿ, ಜೆ.ಯೋಗೇಶ್, ಕೇತಮ್ಮ, ಕ್ಯಬಹಳ್ಳಿ ಮಹೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಮಹಮ್ಮದ್ ಅಸ್ಗರ್, ಅರಕಲವಾಡಿ ಗುರುಸ್ವಾಮಿ, ಹೆಚ್.ವಿ.ಚಂದ್ರು, ತೋಟೇಶ್, ಮುಕುಂದ ವರ್ಮ ಮತ್ತಿತರರಿದ್ದರು.

ಮಹದೇವಮ್ಮ ನಿಧನ



ಯಳಂದೂರು: ತಾಲೂಕಿನ ಕೊಮರನಪುರ ಗ್ರಾಮದ ಮಹದೇವಮ್ಮ(85) ಶುಕ್ರವಾರ ನಿಧನರಾದರು. ಮೃತರು ಪ್ರೌಢಶಾಲಾ ಸಹಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ವೀರಭದ್ರಸ್ವಾಮಿ, ಮೊಮ್ಮಕ್ಕಳು, ಮರಿಮಕ್ಕಳು ಹಾಗೂ ಅಪಾರ ಬಂಧು–ಬಳಗ ಆಗಲಿದ್ದಾರೆ. ಸ್ವಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಿತು.

ವಕ್ಫ್ ಗೊಂದಲವನ್ನು ಶೀಘ್ರವಾಗಿ ಬಗೆಹರಿಸಿ

ಅಧಿಕಾರಿಗಳಿಗೆ ಶಾಸಕ ರಮೇಶ ಬಂಡಿಸಿದ್ದೇಗೌಡ ಸೂಚನೆ



ಶ್ರೀರಂಗಪಟ್ಟಣ ತಾಲೂಕು ಕಚೇರಿಯಲ್ಲಿ ಶುಕ್ರವಾರ ನಡೆದ ಕಂದಾಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿಯ ಸಭೆಯಲ್ಲಿ ಶಾಸಕ ರಮೇಶ ಬಂಡಿಸಿದ್ದೇಗೌಡ ಮಾತನಾಡಿದರು. ತಹಸೀಲ್ದಾರ್ ಪರಶುರಾಮ ಸತ್ತಿಗೇರಿ, ಗ್ರೇಡ್–2 ತಹಸೀಲ್ದಾರ್ ಚೈತ್ರ ಇತರರು ಇದ್ದಾರೆ.

ಶ್ರೀರಂಗಪಟ್ಟಣ, ಜ.17– ಪಟ್ಟಣ ಮತ್ತು ತಾಲೂಕಿನ ಕೆಲವೆಡೆ ಖಾಸಗಿ ಮತ್ತು ಸಾರ್ವಜನಿಕ ಆಸ್ತಿಗಳ ಪಹಣಿಗಳಲ್ಲಿ ಕಣ್ತಪ್ಪು ಅಥವಾ ಇತರ ಕಾರಣಗಳಿಂದ ವಕ್ಫ್ ಎಂದು ನಮೂದಾಗಿರುವ ಪ್ರಕರಣಗಳನ್ನು ಈ ತಿಂಗಳ ಅಂತ್ಯದೊಳಗೆ ಸರಿಪಡಿಸಬೇಕು ಎಂದು ಶಾಸಕ ರಮೇಶ ಬಂಡಿಸಿದ್ದೇಗೌಡ ಕಂದಾಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಸೂಚಿಸಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ಶುಕ್ರವಾರ ನಡೆದ ಕಂದಾಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ತುರ್ತು ಸಭೆಯಲ್ಲಿ ಮಾತನಾಡಿದ ಅವರು, ಗೊಂದಲ ಇರುವ ಆಸ್ತಿಯ ಸ್ಥಳಕ್ಕೆ ಖುದ್ದಾಗಿ ಭೇಟಿ ನೀಡಬೇಕು. ಸಂಬಂಧಿಸಿದ ಆಸ್ತಿಯ ಫೋಟೋ, ವಿಡಿಯೋ ಮಾಡಿಕೊಂಡು ಅದು ಯಾರ ಅನುಭವದಲ್ಲಿ ಇದೆಯೋ ಅದರಂತೆ ಮೂಲ ದಾಖಲೆಗಳನ್ನು ತಾಳೆ ಮಾಡಿ ನೋಡಬೇಕು. ಪ್ರತಿ ಆಸ್ತಿಗೂ ಪ್ರತ್ಯೇಕ ಫೈಲ್ ಸಿದ್ಧಪಡಿಸಬೇಕು. ಬಳಿಕ ಅದನ್ನು ತಹಶೀಲ್ದಾರ್‌ಗೆ ಸಲ್ಲಿಸಬೇಕು. ಗ್ರೇಡ್–2 ತಹಸೀಲ್ದಾರ್ ಇಷ್ಟೂ ಪ್ರಕ್ರಿಯೆಗಳ ಉಸ್ತುವಾರಿ ನೋಡಿಕೊಳ್ಳಬೇಕು ಎಂದು ಹೇಳಿದರು.

ತಾಲೂಕಿನ ಕಸಬಾ ಮತ್ತು ಬೆಳಗೊಳ ಹೋಬಳಿಯ ಕೆಲವೆಡೆ ವಕ್ಫ್ ಗೊಂದಲ ಉಂಟಾಗಿದ್ದು, ಗ್ರಾಮ ಲೆಕ್ಕಾಧಿಕಾರಿ ಹಾಗೂ ಕಂದಾಯ ನಿರೀಕ್ಷಕರು ನೀಡುವ ದಾಖಲೆಗಳನ್ನು ಪರಿಶೀಲಿಸಿ ಆಧಾರದ ಮೇಲೆ ತಹಸೀಲ್ದಾರ್ ಮತ್ತು ಉಪ ವಿಭಾಗಾಧಿಕಾರಿ ಸಮಸ್ಯೆ ಬಗೆಹರಿಸಬೇಕು. ಈ ದಾಖಲೆಗಳನ್ನು ಸರ್ಕಾರಕ್ಕೂ ಕಳುಹಿಸಬೇಕಾಗಿದ್ದು ನಿಖರ ಮಾಹಿತಿಗಳನ್ನು ಸಂಗ್ರಹಿಸಬೇಕು. ಸಿಬ್ಬಂದಿಗಳು ತಮಗೆ ವಹಿಸಿದ ಕಾರ್ಯ ಮಾಡದೆ ಸಬೂಬು ಹೇಳಿದರೆ ಸುಮ್ಮನಿರುವುದಿಲ್ಲ ಎಂದು ಎಚ್ಚರಿಸಿದರು.

ಕಂದಾಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ ರೈತರ ಸಮಸ್ಯೆ ಕಿವಿಗೊಡಬೇಕು. ರೈತರು ಅಲೆದಾಡದಂತೆ ನೋಡಿಕೊಳ್ಳಬೇಕು. ಸಾರ್ವಜನಿಕರನ್ನು ಗೌರವದಿಂದ ನಡೆಸಿಕೊಳ್ಳಬೇಕು ಎಂದರು.

ತಾಲೂಕಿನಾದ್ಯಂತ ಆಶ್ರಯ ಯೋಜನೆಯಡಿ ಒಂದು ಸಾವಿರ ನಿವೇಶನಗಳನ್ನು ಹಂಚಲು ತೀರ್ಮಾನಿಸಲಾಗಿದೆ. ಫೆ.28ರ ಒಳಗೆ ನಿವೇಶನ ಹಂಚಿಕೆ ಮಾಡಲಾಗುತ್ತದೆ. ಯಾವ ಗ್ರಾಮಗಳಲ್ಲಿ ಸರ್ಕಾರಿ ಜಾಗ ಲಭ್ಯ ಇದೆಯೋ ಅದನ್ನು ಗುರುತಿಸಿ, ಹದ್ದುಬಸ್ತು ಗೊತ್ತುಪಡಿಸಬೇಕು ಎಂದು ಹೇಳಿದರು.

ತಹಶೀಲ್ದಾರ್ ಪರಶುರಾಮ ಸತ್ತಿಗೇರಿ ಮಾತನಾಡಿದರು. ಗ್ರೇಡ್–2 ತಹಶೀಲ್ದಾರ್ ಚೈತ್ರ, ಎಡಿಎಲ್‌ಆರ್ ಮೇಘನಾ, ಎಇಇ ರಾಮಕೃಷ್ಣೇಗೌಡ, ಉಪ ತಹಸೀಲ್ದಾರ್‌ಗಳಾದ ವರುಣ್, ದಿನೇಶ ಕುಮಾರ್, ಕಂದಾಯ ನಿರೀಕ್ಷಕರಾದ ರೇವಣ್ಣ, ಭಾಸ್ಕರ್, ಪುಟ್ಟಸ್ವಾಮಿ, ಮಂಜುನಾಥ್ ಸಭೆಯಲ್ಲಿದ್ದರು.

ವಿದ್ಯಾರ್ಥಿಗಳಿಂದ ರಸ್ತೆ ಸುರಕ್ಷತಾ ಸಪ್ತಾಹ ಜಾಥಾ



ರಸ್ತೆ ಸುರಕ್ಷತಾ ಸಪ್ತಾಹ ಜಾಥಾಕ್ಕೆ ಚಾಲನೆ ನೀಡಲಾಯಿತು.

ಮಂಡ್ಯ, ಜ.17– ಜಿಲ್ಲಾ ಪೊಲೀಸ್ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ರಸ್ತೆ ಸುರಕ್ಷತಾ ಸಪ್ತಾಹ ಜಾಥಾದಲ್ಲಿ 1500ಕ್ಕೂ ಹೆಚ್ಚು ವಿದ್ಯಾರ್ಥಿಗಳು ರಸ್ತೆ ಸುರಕ್ಷತೆಯ ಮಾಹಿತಿ ಫಲಕಗಳನ್ನು ಹಿಡಿದು ಭಾಗವಹಿಸಿ ಸಾರ್ವಜನಿಕರಿಗೆ ಜಾಗೃತಿ ಮೂಡಿಸಿದರು.

ನಗರದ ಸಂಜಯ್ ವೃತ್ತಿದಿಂದ ಜಾಥಾ ಪ್ರಾರಂಭವಾಗಿ ಆರ್‌ಪಿ ರೋಡ್, 100 ಅಡಿ ರಸ್ತೆ, ವಿವಿ ರಸ್ತೆಯ ಮೂಲಕ ಸಂಚರಿಸಿತು. ವಿದ್ಯಾರ್ಥಿಗಳು ಸಂಚಾರಿ ನಿಯಮಗಳ ಜಾಗೃತಿ ಘೋಷಣೆ ಕೂಗುತ್ತ ಜಾಥಾದಲ್ಲಿ ಪಾಲ್ಗೊಂಡರು

'ನೀವು ರಸ್ತೆ ದಾಟುವಾಗ ಎರಡೂ ಕಡೆ ನೋಡಿ', 'ವಾಹನ ಚಾಲನೆ ಮಾಡುವಾಗ ಅಧಿಕ ವೇಗ ಬೇಡ', 'ಸೀಟ್ ಬೆಲ್ಟ್ ಧರಿಸಿ ವಾಹನ ಚಲಾಯಿಸಿ', 'ವಾಹನ ಚಾಲನೆ ಮಾಡುವಾಗ ಮೊಬೈಲ್ ಬಳಸಬೇಡಿ', 'ಜೀಬ್ರಾ ಕ್ರಾ ಸಿಂಗ್‌ನಲ್ಲಿ ಪಾದಚಾರಿಗಳಿಗೆ ಆದ್ಯತೆ ನೀಡಿ' ಎಂಬ ರಸ್ತೆ ಸುರಕ್ಷಾ ಫಲಕಗಳನ್ನು ಜಾಥಾದಲ್ಲಿ ಪ್ರದರ್ಶಿಸಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಜಿಲ್ಲಾ ಅಪರ ಪೊಲೀಸ್ ವರಿಷ್ಠಾಧಿಕಾರಿ ತಿಮ್ಮಯ್ಯ ದೇಶದಾದ್ಯಂತ ಜ.11 ರಿಂದ 18 ರವರೆಗೆ ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮ ನಡೆಸಲಾಗುತ್ತದೆ. ಪ್ರತಿ ವರ್ಷದಂತೆ ಈ ವರ್ಷವೂ ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮವನ್ನು ಹಮ್ಮಿ ಕೊಳ್ಳಲಾಗಿದೆ. ವಿವಿಧ ಶಾಲೆಯ ವಿದ್ಯಾರ್ಥಿಗಳು ಮತ್ತು ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಸಹಕಾರದೊಂದಿಗೆ ನಗರದ ಜನರಲ್ಲಿ ಜಾಗೃತಿ ಮೂಡಿಸುವ ಜಾಥಾವನ್ನು ಜಿಲ್ಲೆಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದರು.

ಜಿಲ್ಲೆಯಲ್ಲಿ ಮುಂದಿನ ದಿನಗಳಲ್ಲಿ ಸಂಚಾರಿ ನಿಯಮ ಅನುಷ್ಠಾನವನ್ನು ಪೊಲೀಸ್ ಇಲಾಖೆ ತೀವ್ರಗೊಳಿಸಲಿದೆ. ನಿಯಮ ಉಲ್ಲಂಘಿಸಿದರೆ ದಂಡ ಹಾಗೂ ಕ್ರಮ ಕೈಗೊಳ್ಳುತ್ತೇವೆ, ಮಂಡ್ಯ ನಗರ ಸಭೆಯಿಂದ ಮುಖ್ಯ ರಸ್ತೆಗಳಲ್ಲಿ ಅಳವಡಿಸಲು 24 ಕ್ಯಾಮರಾಗಳಿಗೆ ಅನುಮೋದನೆ ದೊರೆತಿದ್ದು, ಶೀಘ್ರವೇ ಕ್ಯಾಮರಾಗಳನ್ನು ಅಳವಡಿಸಲಾಗುವುದು ಎಂದರು. ಜಾಥಾದಲ್ಲಿ ಎಎಸ್ಪಿ ಗಂಗಾಧರ ಸ್ವಾಮಿ, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್‌ನಾ ಜಿಲ್ಲಾ ಮುಖ್ಯ ಆಯುಕ್ತ ಜಿ.ಪಿ.ಭಕ್ತವತ್ಸಲ ಇನ್ನಿತರೆ ಅಧಿಕಾರಿಗಳು ಹಾಗೂ ಗಣ್ಯರು ಉಪಸ್ಥಿತರಿದ್ದರು.

ಇಂದು ವಿದ್ಯುತ್ ವ್ಯತ್ಯಯ

ನಾಗಮಂಗಲ, ಜ.17– ನಾಗಮಂಗಲ MUSS ನಿಂದ ಹೊಸ ಲಿಂಕ್‌ಲೈನ್ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಜ.18ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆವರೆಗೆ ನಾಗಮಂಗಲ ಟಿ.ಬಿ. ವೃತ್ತದಿಂದ ಮಂಡ್ಯ ಸರ್ಕಲ್‌ವರೆಗೆ, ಬದ್ರಿಕೊಪ್ಪಲು, ಕೋಟೆ ಬೆಟ್ಟ ರಸ್ತೆ, ಟಿಬಿ ವೃತ್ತದಿಂದ ಜೂನಿಯರ್ ಕಾಲೇಜುವರೆಗೆ, ಬಿಎಸ್‌ಎನ್‌ಎಲ್ ಆಫೀಸ್ ಸುತ್ತಮುತ್ತ ವಿದ್ಯುತ್ ಸರಬರಾಜು ಇರುವುದಿಲ್ಲ ಎಂದು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ತಿಳಿಸಿದ್ದಾರೆ.

ಸರಗೂರಲ್ಲಿ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ

ಕೇರಳ ಗಡಿಯಲ್ಲಿ ಭಾಷೆ ಉಳಿವಿಗಾಗಿ ಜನತೆ ಶ್ರಮಿಸುತ್ತಿದ್ದಾರೆ

ಕವಯತ್ರಿ ಡಾ.ಟಿ.ಸಿ. ಪೂರ್ಣಿಮಾ ಅಭಿಪ್ರಾಯ



ಕನ್ನಡ ಸಾಹಿತ್ಯ ಸಮ್ಮೇಳನವನ್ನು ಕವಯತ್ರಿ ಡಾ.ಟಿ.ಸಿ.ಪೂರ್ಣಿಮಾ ಉದ್ಘಾಟಿಸಿದರು.

► ಸರಗೂರಲ್ಲಿ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜಿಸಲಾಗಿದೆ. ಯುವಕರು ಹೆಚ್ಚಾಗಿ ಸಮ್ಮೇಳನಗಳಲ್ಲಿ ಭಾಗವಹಿಸಬೇಕು. ಡಾ.ವೈ.ಡಿ.ರಾಜಣ್ಣ ಎರಡೂ ತಾಲೂಕಿನಲ್ಲಿ ಪಶುವೈದ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಈ ಸಮ್ಮೇಳನದ ಅಧ್ಯಕ್ಷರಾಗಿರುವುದು ಹೆಮ್ಮೆಯ ವಿಚಾರ.

-ಅನಿಲ್, ಶಾಸಕ.

ಸರಗೂರು, ಜ.17– ಯೋಧರು ದೇಶದ ಗಡಿ ಕಾಯುವ ಹಾಗೆ ಕೇರಳ ಗಡಿಯಲ್ಲಿ ಭಾಷೆ ಉಳಿವಿಗಾಗಿ ಜನತೆ ಶ್ರಮಿಸುತ್ತಿದ್ದಾರೆ ಎಂದು ಕವಯತ್ರಿ ಡಾ.ಟಿ.ಸಿ.ಪೂರ್ಣಿಮಾ ಅಭಿಪ್ರಾಯಪಟ್ಟರು.

ಪಟ್ಟಣದ ಜಯಚಾಮರಾಜೇಂದ್ರ ಕ್ರೀಡಾಂಗಣದ ನಾಲ್ವಡಿ ಕೃಷ್ಣರಾಜ ಒಡೆಯರ್ ವೇದಿಕೆಯಲ್ಲಿ ತಾಲೂಕು ಕಸಾಪ ವತಿಯಿಂದ ಶುಕ್ರವಾರ ನಡೆದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ನೂತನ ತಾಲೂಕು ರಚನೆಯಾದ ಬಳಿಕ ಸರಗೂರಲ್ಲಿ ಮೊದಲ ಬಾರಿಗೆ ಕನ್ನಡದ ಬಾವುಟ ಮುಗಿಲೆತ್ತರಕ್ಕೆ ಹಾರಿಸಿರುವುದು ಐತಿಹಾಸಿಕ ಕ್ಷಣವಾಗಿದೆ. ಸಮ್ಮೇಳನದಲ್ಲಿ ಭಾಗಿಯಾಗಿರುವುದು ನನಗೆ ಹೆಮ್ಮೆ ಇದೆ ಎಂದರು.

ಸರಗೂರು ಅತೀ ಪ್ರಾಚೀನ ಪ್ರದೇಶಗಳಲ್ಲಿ ಒಂದು. ಇತಿಹಾಸದಲ್ಲಿ ಪೊನ್ನಾಡು ಎಂದು ಉಲ್ಲೇಖವಾಗಿದೆ. ಅಂದರೆ ಹೊನ್ನಿನ ನಾಡು ಎಂಬುದು ಇದರ ಮೂಲ ಹೆಸರು. ಇಲ್ಲಿ ಚಿನ್ನ ಮತ್ತು ಪಚ್ಚೆ ಹೇರಳವಾಗಿತ್ತು ಅಂದಿನ ಕಾಲದಲ್ಲೇ ದಕ್ಷಿಣ ಆಫ್ರಿಕಾದೊಂದಿಗೆ ವ್ಯವಹಾರ ಇಟ್ಟುಕೊಳ್ಳಲಾಗಿತ್ತು. ಇಂತಹ ನಾಡಿನಲ್ಲಿ ಕನ್ನಡ ಬಾವುಟ ಹಾರಿಸಿರುವುದು ಹೆಮ್ಮೆ ಪಡುವ ವಿಚಾರ ಎಂದು ಹರ್ಷ ವ್ಯಕ್ತಪಡಿಸಿದರು.

ಇದೇ ವೇಳೆ ಶಿಕ್ಷಕ ಬಸಾಪುರ ಶಿವಕುಮಾರ್ ರಚಿಸಿರುವ 'ಅಪೂರ್ವ' ಕವನ ಸಂಕಲನ ಬಿಡುಗಡೆ ಮಾಡಲಾಯಿತು. ತಾಲೂಕು ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು, ಸಾಹಿತಿ ಡಾ.ವೈ.ಡಿ. ರಾಜಣ್ಣ ಮಾತನಾಡಿ, ಶಿಕ್ಷಣದಿಂದ ಸಿಗುವ ಜ್ಞಾನದ ಮಾಧ್ಯಮ ಕನ್ನಡವಾದಾಗ ಮಾತ್ರ ನಮ್ಮ ಹೃದಯದ ಭಾಷೆ ಅರಳಬಲ್ಲದು, ವಿಕಾಸಗೊಳ್ಳಬಲ್ಲದು ಎಂದು ಬಣ್ಣಿಸಿದರು. ಇದಕ್ಕೂ ಮುನ್ನಾ ಸಮ್ಮೇಳನಾಧ್ಯಕ್ಷ ಸಾಹಿತಿ ಡಾ.ವೈ.ಡಿ.ರಾಜಣ್ಣ ಅವರನ್ನು ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಮೆರವಣಿಗೆಯಲ್ಲಿ ವೇದಿಕೆಗೆ ಕರೆ ತರಲಾಯಿತು.

ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಮಾತನಾಡಿದರು. ಸಂಸದ ಸುನೀಲ್ ಬೋಸ್, ಶಾಸಕ ಶ್ರೀವತ್ಸ, ಎಂಎಲ್‌ಸಿ ಹೆಚ್.ವಿಶ್ವನಾಥ್, ದಡದಹಳ್ಳಿ ಗುರುಮಲ್ಲೇಶ್ವರ ದಾಸೋಹ ಮಠದ ಷಡಕ್ಷರ ಸ್ವಾಮೀಜಿ, ಮಾಜಿ ಸಚಿವ ಎಂ.ಶಿವಣ್ಣ, ಕಸಾಪ ಸರಗೂರು ತಾಲೂಕು ಅಧ್ಯಕ್ಷ ಎಂ.ಕೆಂಡಗಣ್ಣಸ್ವಾಮಿ, ಮೈಸೂರು ನಗರಾಧ್ಯಕ್ಷ ಕೆ.ಶಿವರಾಂ, ನಿಕಟಪೂರ್ವ ಮಾಜಿ ಅಧ್ಯಕ್ಷ ಚಂದ್ರಶೇಖರ್, ಮಹಿಳಾ ಘಟಕ ಅಧ್ಯಕ್ಷೆ ರತ್ನ, ಪಪಂ ಅಧ್ಯಕ್ಷೆ ರಾಧಿಕಾ, ಉಪಾಧ್ಯಕ್ಷರಾದ ಶಿವಕುಮಾರ್, ವಿನಾಯಕ ಪ್ರಸಾದ್, ಸದಸ್ಯರಾದ ಹೇಮಾವತಿ, ಚೈತ್ರ, ಸಣ್ಣತಾಯಮ್ಮ, ಚಂದ್ರಕಲಾ, ನೂರಾಳಸ್ವಾಮಿ, ಉಮಾ, ಶ್ರೀನಿವಾಸ್, ದಿವ್ಯಾ, ಚಲುವಕೃಷ್ಣ, ಕೋಟೆ ಕಸಾಪ ಅಧ್ಯಕ್ಷ ಕನ್ನಡ ಪ್ರಮೋದ್, ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ಸರ್ವೇ ರಾಜಣ್ಣ ಟ್ರಸ್ಟ್ ಅಧ್ಯಕ್ಷ ಎಸ್.ವಿ.ವೆಂಕಟೇಶ್, ಜಿಪಂ ಮಾಜಿ ಸದಸ್ಯರಾದ ಪಿ.ರವಿ, ಭಾಗ್ಯಲಕ್ಷ್ಮಿ, ವೆಂಕಟಸ್ವಾಮಿ, ತಹಸೀಲ್ದಾರ್ ಮೋಹನಕುಮಾರಿ, ಶ್ರೀನಿವಾಸ್, ಮೈಮುಲ್ ನಿರ್ದೇಶಕ ಕೆ.ಈರೇಗೌಡ, ಮಮತ, ತಾಲೂಕು ಆರೋಗ್ಯಾಧಿಕಾರಿ ಡಾ.ಟಿ.ರವಿಕುಮಾರ್, ಡಿವೈಎಸ್‌ಪಿ ಡಿ.ಜೆ.ರಾಜಣ್ಣ, ಬಿಇಓ ಚಂದ್ರಕಾಂತ್, ಡಾ.ಚಂದ್ರಕಲಾ, ಡಿವೈಎಸ್‌ಪಿ ಗೋಪಾಲಕೃಷ್ಣ, ಇಓ ಪ್ರೇಮ್ ಕುಮಾರ್, ಆದಿ ಕರ್ನಾಟಕ ಮಹಾಸಭಾ ಅಧ್ಯಕ್ಷ ಶಿವಣ್ಣ, ನರಸಿಂಹಮೂರ್ತಿ, ಎಸ್.ಎನ್.ನಾಗರಾಜು, ಮಲ್ಲೇಶ್, ಮಹೇಶ್, ಚಲುವರಾಜು, ಎಪಿಎಂಸಿ ಮಾಜಿ ಅಧ್ಯಕ್ಷ ಸಿದ್ದರಾಜು, ಚಿನ್ನಣ್ಣ, ಹೆಗ್ಗನೂರು ಡೈರಿ ಅಧ್ಯಕ್ಷ ಸುಧೀರ್, ಸಕಲೇಶ್, ವರ್ತಕ ಮಂಡಳಿ ಅಧ್ಯಕ್ಷ ಪ್ರಸಾದ್, ಹಿರಿಯ ವಕೀಲ ನಾರಾಯಣಗೌಡ, ಡಿ.ಆರ್. ಮಹೇಶ್, ಅಕ್ರಮ ಸಕ್ರಮ ಸಮಿತಿ ಸದಸ್ಯ ಶಿವಶಂಕರ್, ಶಂಭುಲಿಂಗನಾಯಕ, ನಾಗರಾಜು, ಎಸ್.ಚಿಕ್ಕಮಾದು ಬಳಗದ ಅಧ್ಯಕ್ಷ ರಾಜನಾಯಕ, ತಾಪಂ ಮಾಜಿ ಅಧ್ಯಕ್ಷ ಹನು, ಗಿರೀಶ್, ವಿದ್ಯಾಸಾಗರ್, ಭೀಮರಾಜು, ವೀರಭದ್ರಪ್ಪ, ನೀಲಗಿರಿಗೌಡ, ವರ್ತಕರ ಸಂಘ ಅಧ್ಯಕ್ಷ ಎಸ್.ಪಿ.ಪ್ರಸಾದ್, ದಸಂಸ ರಾಜಣ್ಣ, ನಿಂಗರಾಜು, ಅಶೋಕ್, ಸಿಪಿಐ ಲಕ್ಷ್ಮೀಕಾಂತ್ ಸೇರಿದಂತೆ ಇತರರಿದ್ದರು.

ಹರಕೆ ಗೋವುಗಳ ಗೋಶಾಲೆಗೆ ಕಳುಹಿಸಲು ಕ್ರಮ: ಶಾಸಕ ದರ್ಶನ್



ಗೋ ಸಂರಕ್ಷಣಾ ಕೇಂದ್ರಕ್ಕೆ ಶಾಸಕ ದರ್ಶನ್ ಭೇಟಿ ನೀಡಿದರು.

ನಂಜನಗೂಡು, ಜ.17– ಶ್ರೀಕಂಠೇಶ್ವರ ಸ್ವಾಮಿ ದೇವಾಲಯಕ್ಕೆ ಭಕ್ತರು ನೀಡುವ ಹರಕೆ ಗೋವುಗಳನ್ನು ನೋಂದಾಯಿಸಿಕೊಂಡ ಬಳಿಕ ಅವುಗಳನ್ನು ಪೋಷಣೆ ಮಾಡಿ ನಂತರ ಗೋಶಾಲೆಗೆ ಕಳುಹಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಶಾಸಕ ದರ್ಶನ್ ತಿಳಿಸಿದರು.

ನಗರದ ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಆನೆಲಾಯದ ಆವರಣದಲ್ಲಿ ತೆರೆದಿರುವ ಗೋ ಸಂರಕ್ಷಣಾ ಕೇಂದ್ರಕ್ಕೆ ಭೇಟಿ ನೀಡಿ ಬಾಲ ಕತ್ತರಿಸಿ ಹೋಗಿರುವ ಕರು ವೀಕ್ಷಿಸಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

ಗಾಯಗೊಂಡಿರುವ ಕರುವಿಗೆ ಸೂಕ್ತ ಚಿಕಿತ್ಸೆ ನೀಡಲಾಗಿದ್ದು, ಚೇತರಿಸಿಕೊಳ್ಳುತ್ತಿರುವುದಾಗಿ ಪಶು ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ಕಿಡಿಗೇಡಿಗಳ ಈ ದುಷ್ಕೃತ್ಯವನ್ನು ಗಂಭೀರವಾಗಿ ಪರಿಗಣಿಸಲು ಪೊಲೀಸ್ ಇಲಾಖೆಗೆ ಸೂಚಿಸಲಾಗಿದ್ದು, ಆರೋಪಿ ಪತ್ತೆಗೆ ಬಲೆ ಬೀಸಿದ್ದಾರೆ. ದೇವಾಲಯಕ್ಕೆ ಭಕ್ತರು ಹರಕೆ, ಕಾಣಿಕೆಯಾಗಿ ನೀಡುವ ಗೋವುಗಳನ್ನು ಗೋ ಸಂರಕ್ಷಣಾ ಕೇಂದ್ರಕ್ಕೆ ಕರೆತಂದು ಉಪಚರಿಸಿ ಬಳಿಕ ಗೋಶಾಲೆಗೆ ಕಳುಹಿಸಲು ಸೂಚಿಸಲಾಗಿದೆ. ಭಕ್ತರು ನೀಡುವ ಹರಕೆ ಗೋವುಗಳನ್ನು ನೋಂದಾಯಿಸಿಕೊಳ್ಳಲು ಸೂಚಿಸಲಾಗಿದೆ ಎಂದರು.

ಎಚ್ಚರಿಕೆ: ನಂಜನಗೂಡು ನಗರಸಭೆ ವ್ಯಾಪ್ತಿಯಲ್ಲಿ ಬಿಡಾಡಿ ದನಗಳು ಬೇಕಾಬಿಟ್ಟಿ ಓಡಾಡುತ್ತಿದ್ದು, ಇದರಿಂದ ರಸ್ತೆ ಅಪಘಾತ ಸಂಭವಿಸುವ ಹಾಗೂ ಪಾದಚಾರಿಗಳು, ವಾಹನ ಸವಾರರಿಗೆ ಮತ್ತು ಪ್ರಾಣಿಗಳಿಗೂ ಹಾನಿ ಆಗುವ ಸಂಭವವಿರುವುದರಿಂದ ಬಿಡಾಡಿ ದನಗಳನ್ನು ನಗರಸಭೆ ವಶಕ್ಕೆ ಪಡೆದು ಪಿಂಜರಪೋಲಿಗೆ ನೀಡಲಾಗುವುದು ಎಂದು ಪೌರಾಯುಕ್ತ ವಿಜಯ್ ಪ್ರಕಟಣೆಯಲ್ಲಿ ಎಚ್ಚರಿಕೆ ನೀಡಿದ್ದಾರೆ.

ನಂಜನಗೂಡು ನಗರಸಭೆ ವ್ಯಾಪ್ತಿಯ ಎಲ್ಲಾ ಬಿಡಾಡಿ ದನಗಳ ಮಾಲೀಕರು ತಮ್ಮ ಸ್ವಾಧೀನದಲ್ಲಿರುವ ಯಾವುದೇ ಹಸು ಅಥವಾ ದನಗಳನ್ನು ವ್ಯವಸ್ಥೆಯಲ್ಲಿಟ್ಟುಕೊಳ್ಳದೇ ಸಾರ್ವಜನಿಕ ಮಾರ್ಗ ಅಥವಾ ದಾರಿಯಲ್ಲಿ ಬಿಟ್ಟು ಯಾವುದೇ ವ್ಯಕ್ತಿಗೆ ಅಪಾಯ ಮತ್ತು ಅಡ್ಡಿಪಡಿಸಿದ್ದಲ್ಲಿ ಅಂತಹ ಮಾಲೀಕರಿಗೆ ಐಪಿಸಿ ಸೆಕ್ಷನ್ 283 ಪ್ರಕಾರ ಶಿಕ್ಷೆಗೆ ಒಳಪಡಿಸುವ ಮತ್ತು ವ್ಯಕ್ತಿಯ ಸ್ವಾಧೀನದಲ್ಲಿರುವ ಪ್ರಾಣಿಗಳಿಂದ ಮನುಷ್ಯನ ಪ್ರಾಣಕ್ಕೆ ಅಪಾಯವಾದರೆ ಅಂತಹ ವ್ಯಕ್ತಿ ವಿರುದ್ಧ ಐಪಿಸಿ ಸೆಕ್ಷನ್ 289 ಪ್ರಕಾರ ಪ್ರಕರಣ ದಾಖಲಿಸಲು ಅವಕಾಶವಿರುತ್ತದೆ. ಆದ್ದರಿಂದ ಜಾನುವಾರುಗಳನ್ನು ರಸ್ತೆಯಲ್ಲಿ ಬಿಡುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ತಿಳಿಸಿದ್ದಾರೆ.

ಇಂಟರ್‌ನ್ಯಾಷನಲ್ ಲಿಂಗಾಯತ ಯೂತ್ ಫೋರಂ ವತಿಯಿಂದ ಮೈಸೂರಲ್ಲಿ ವೀರಶೈವ ಲಿಂಗಾಯತ ಬ್ಯುಸಿನೆಸ್ ಮೀಟ್

ಭಿನ್ನ ವಿಚಾರ ಬದಿಗೊತ್ತಿ ವೀರಶೈವ ಲಿಂಗಾಯತ ಸಮುದಾಯ ಒಂದಾಗುವ ಅನಿವಾರ್ಯತೆ

● ಬಿಜೆಪಿ ರಾಜ್ಯಾಧ್ಯಕ್ಷ ವಿ.ವೈ.ವಿಜಯೇಂದ್ರ ಅಭಿಮತ ● ಆರ್ಥಿಕ ಸ್ವಾತಂತ್ರ್ಯಕ್ಕೆ ಶೈಕ್ಷಣಿಕ ಸ್ವಾತಂತ್ರ್ಯದ ಅನಿವಾರ್ಯತೆ ಇದೆ: ಸುಭಾಷ್ ಬಿ.ಆಡಿ



ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಆಯೋಜಿಸಿರುವ ಮೂರು ದಿನಗಳ ವೀರಶೈವ ಲಿಂಗಾಯತ ಗ್ಲೋಬಲ್ ಬಿಜಿನೆಸ್ ಕಾನ್‌ಕ್ಲೇವ್–2025 ಕಾರ್ಯಕ್ರಮವನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಉದ್ಘಾಟಿಸಿದರು. ಚಿತ್ರದಲ್ಲಿ ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರೀದೇಶಿಕೇಂದ್ರ ಸ್ವಾಮಿಜಿ, ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ರಾಜ್ಯ ಸಮಿತಿ ಅಧ್ಯಕ್ಷ ಸುಭಾಷ್ ಬಿ. ಆಡಿ, ಶಾಸಕ ಎಚ್.ಎಂ.ಗಣೇಶ್ ಪ್ರಸಾದ್, ಕಾನ್ ಕ್ಲೇವ್ ಅಧ್ಯಕ್ಷ ಬಿ.ಎಸ್.ಪ್ರಶಾಂತ್, ಉಪಾಧ್ಯಕ್ಷ ಕೆ.ಎಚ್.ಕಿರಣ್, ಫೋರಂ ಮೈಸೂರು ಚಾಪ್ಟರ್ ಅಧ್ಯಕ್ಷ ಕೆ.ಎಸ್.ಮಹದೇವಪ್ರಸಾದ್ ಮತ್ತಿತರರು ಹಾಜರಿದ್ದರು.

ಮೈಸೂರು,ಜ.17(ಎಂಟಿವೈ)– ವೀರಶೈವ ಲಿಂಗಾಯತ ಸಮುದಾಯದ ಏಳ್ಗೆಗಾಗಿ ಒಳಪಂಗಡ ಹಾಗೂ ರಾಜಕೀಯವನ್ನು ಬದಿಗೊತ್ತಿ ನಾವೆಲ್ಲರೂ ಒಂದಾಗಬೇಕಾದ ಅನಿವಾರ್ಯತೆ ಎದುರಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಶುಕ್ರವಾರ ಇಂಟರ್‌ನ್ಯಾಷನಲ್ ಲಿಂಗಾಯತ ಯೂತ್ ಫೋರಂ ಆಯೋಜಿಸಿದ್ದ ವೀರಶೈವ–ಲಿಂಗಾಯತ ಬ್ಯುಸಿನೆಸ್ ಮೀಟ್ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ವೀರಶೈವ ಲಿಂಗಾಯತ ಸಮಾಜ ಒಡೆಯಬೇಕು ಎಂದು ಪ್ರಯತ್ನ ನಡೆದಾಗ ಸಮಾಜದ ಹಿರಿಯರಾದ ಶಾಮನೂರು ಶಿವಶಂಕರಪ್ಪ ತೀವ್ರ ವಿರೋಧ ವ್ಯಕ್ತಪಡಿಸಿ, ಎಚ್ಚರಿಕೆ ಸಂದೇಶ ನೀಡಿದರು. ರಾಜಕೀಯ ಕಾರಣದಿಂದಾಗಿ ಜಾತಿ ಗಣತಿ ಪಗಡೆಯಾಟವಾಡಲು ಹೊರಟಿರುವಾಗ ಸಮಾಜದ ಪರವಾಗಿ ಮಾತನಾಡಿರುವುದು ಸಂತೋಷ. ಸಮಾಜವನ್ನು ಕಟ್ಟುವ ಜವಾಬ್ದಾರಿ ನಮ್ಮ ಮೇಲಿದೆ. ಇಡೀ ವಿಶ್ವಕ್ಕೆ ಸ್ವಾವಲಂಬನೆಯ ಸಂದೇಶವನ್ನು ಬಸವಣ್ಣ ನೀಡಿದರು. ಕಾಯಕದಲ್ಲಿ ಕೈಲಾಸ ಕಾಣಬಹುದು ಎಂದು ಪ್ರತಿಪಾದಿಸಿದರು. ಕೇವಲ ವಚನಗಳಿಂದ ಮಾತ್ರವಲ್ಲದೆ ವಿಚಾರಗಳಿಂದ ಬಸವಣ್ಣ ವಿಶ್ವಗುರು ಆಗಿದ್ದಾರೆ. ವೀರಶೈವ ಲಿಂಗಾಯತ ಬೇಡುವ ಸಮಾಜ ಅಲ್ಲ, ನೀಡುವ ಸಮಾಜ. ಸಮಯೋಚಿತ ಮತ್ತು ಅರ್ಥಪೂರ್ಣ ಗ್ಲೋಬಲ್ ಬಿಸಿನೆಸ್ ಕಾನ್‌ನಲ್ಲಿ ಒಳಪಂಗಡ ಮರೆತು ಒಟ್ಟಾಗಿ ಬೆಳೆಯಬೇಕು ಎಂದರು.

ಶೈಕ್ಷಣಿಕ ಸ್ವಾತಂತ್ರ್ಯ: ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ರಾಜ್ಯ ಸಮಿತಿ ಅಧ್ಯಕ್ಷ ಸುಭಾಷ್ ಬಿ.ಆಡಿ ಮಾತನಾಡಿ, ಬಸವಣ್ಣ ಸಾಮಾಜಿಕ ನ್ಯಾಯ, ಆರ್ಥಿಕ ಸ್ವಾವಲಂಬನೆ, ವರ್ಗ ರಹಿತ ಸಮಾಜ ನಿರ್ಮಾಣಕ್ಕೆ ಯತ್ನಿಸಿದರು. ಸಂವಿಧಾನದ ಮೂಲ ಅಂಶಗಳನ್ನು ಬಸವಣ್ಣ ಹನ್ನೆರಡನೇ ಶತಮಾನದಲ್ಲಿ ಜಾರಿಗೆ ತಂದಿದ್ದರು. ಜಾತಿ ತೆಗೆದು ಜಾತಿ ರಹಿತ ಸಮಾಜ ಮಾಡುವ ಯತ್ನ ಇಂದಿಗೂ ಸಾಧ್ಯವಾಗಿಲ್ಲ. ಆರ್ಥಿಕ ಸ್ವಾತಂತ್ರ್ಯ ಬರಬೇಕಾದರೆ ಶೈಕ್ಷಣಿಕ ಸ್ವಾತಂತ್ರ್ಯ ದೊರೆಯಬೇಕು ಎಂದರು.

ಉದ್ಯಮದಲ್ಲಿ ಸಾಧನೆ: ಇಂಟರ್‌ನ್ಯಾಷನಲ್ ಲಿಂಗಾಯತ ಯೂತ್ ಫೋರಂ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಹಾಗೂ ವಿಧಾನ ಪರಿಷತ್ ಸದಸ್ಯ ಕೆ.ಎಸ್. ನವೀನ್ ಮಾತನಾಡಿ, ಸಮುದಾಯ ಉದ್ಯಮಿಗಳನ್ನು ಒಂದು ಕಡೆ ಸೇರಿಸಿ, ಉದ್ಯಮದಲ್ಲಿ ಸಾಧನೆ ಮಾಡಲು ನೆರವಾಗುವ ನಿಟ್ಟಿನಲ್ಲಿ ಇಂಟರ್‌ನ್ಯಾಷನಲ್ ಲಿಂಗಾಯತ ಯೂತ್ ಫೋರಂ ಸ್ಥಾಪಿಸಲಾಯಿತು. ಬಸವ ತತ್ವದಲ್ಲಿ ನಂಬಿಕೆ ಇಟ್ಟುಕೊಂಡು ಬಂದ ನಾವು ಸಮಾಜದ ಏಳಿಗೆಗಾಗಿ ಪಣತೊಟ್ಟಿದ್ದೇವೆ. ನಮ್ಮ ಸಮಾಜದ ಸಂಘಟನೆ ಮಾಡಿದ ಶಾಮನೂರು ಶಿವಶಂಕರಪ್ಪ ಒಂದು ಕಣ್ಣಾದರೆ ಮತ್ತು ರಾಜಕೀಯದಲ್ಲಿ ಬಿ.ಎಸ್.ಯಡಿಯೂರಪ್ಪ ಮತ್ತೊಂದು ಕಣ್ಣು. ಅವರಿಬ್ಬರ ಮಾರ್ಗದರ್ಶನದಲ್ಲಿ ನಾವೆಲ್ಲರೂ ಸಾಗಬೇಕು ಎಂದರು.

ಮುಂಬರುವ ದಿನಗಳಲ್ಲಿ ಸಮುದಾಯ ಹೊಸ ಉದ್ಯಮಿಗಳಿಗೆ ನೆರವಾಗಲು ಒಂದು ಸಾವಿರ ಕೋಟಿ ರೂ. ಸ್ಟಾರ್ಟ್ ಅಪ್ ಫಂಡ್ ಕಾಯ್ದಿರಿಸಲು ನಿರ್ಧರಿಸಲಾಗಿದೆ. ಅಲ್ಲದೆ, ಸಮುದಾಯ 50 ಶಾಸಕರನ್ನು ಗೆಲ್ಲಿಸಲು ಬೇಕಾದ ಹಣವನ್ನು ಪ್ರತ್ಯೇಕವಾಗಿಡಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದ ಕಾರ್ಯಕ್ರಮದಲ್ಲಿ ಶಾಸಕರಾದ ಹೆಚ್.ಎಂ. ಗಣೇಶ್ ಪ್ರಸಾದ್, ಟಿ.ಎಸ್.ಶ್ರೀವತ್ಸ, ಫೆಡರೇಷನ್ ಆಫ್ ಇಂಡಸ್ಟ್ರೀ ಆಫ್ ಇಂಡಿಯಾ ಅಧ್ಯಕ್ಷ ಬಾಲಚಂದ್ರಸಿಂಗ್ ರಾವ್ ರಾಣೆ, ಕಾನ್ ಕ್ಲೇವ್ ಅಧ್ಯಕ್ಷ ಬಿ.ಎಸ್. ಪ್ರಶಾಂತ್, ಉಪಾಧ್ಯಕ್ಷ ಕೆ.ಹೆಚ್. ಕಿರಣ್, ಫೋರಂ ಮೈಸೂರು ಚಾಪ್ಟರ್ ಅಧ್ಯಕ್ಷ ಕೆ.ಎಸ್.ಮಹದೇವಪ್ರಸಾದ್, ಚಾಮರಾಜನಗರ ಉಪಾಧ್ಯಕ್ಷ ಎಂ.ಮಹೇಶ್, ಜಂಟಿ ಕಾರ್ಯದರ್ಶಿ ತೀರ್ಥಾ ಎಸ್.ಸ್ವಾಮಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಅಖಂಡತೆಯಿಂದ ಮಾತ್ರವೇ ಲಿಂಗಾಯತರ ಏಳ್ಗೆ

ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಕಿವಿಮಾತು



ಮೈಸೂರು, ಜ.17(ಎಂಟಿವೈ)– ಲಿಂಗಾಯತ ಸಮುದಾಯವು ತನ್ನಲ್ಲಿರುವ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಮತ್ತು ಮಧ್ಯ ಕರ್ನಾಟಕ ತಾರತಮ್ಯಗಳನ್ನು ಮರೆತು ಒಗ್ಗೂಡಿದರೆ ಮಾತ್ರ ಏಳ್ಗೆ ಸಾಧ್ಯವಾಗಲಿದೆ. ಇದರ ಜೊತೆಗೆ ಸಮುದಾಯದ ಸದಸ್ಯರು ಉದ್ಯಮಶೀಲತೆ ಬೆಳೆಸಿಕೊಳ್ಳ ಬೇಕು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಹೇಳಿದ್ದಾರೆ.

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಇಂಟರ್‌ನ್ಯಾಷನಲ್ ಲಿಂಗಾಯತ ಯೂತ್ ಫೋರಂ ವತಿಯಿಂದ ಆಯೋಜಿಸಿದ್ದ ವೀರಶೈವ–ಲಿಂಗಾಯತ ಬ್ಯುಸಿನೆಸ್ ಮೀಟ್‌ನಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಲಿಂಗಾಯತ ಸಮುದಾಯ ರಾಜ್ಯದ ಉದ್ದಕ್ಕೂ ಇದೆ. ಆದರೆ ನಮ್ಮಲ್ಲಿ ಅಖಂಡತೆಯ ಪ್ರಜ್ಞೆ ಇಲ್ಲ. ಇದು ದೊಡ್ಡ ಸಮಸ್ಯೆಯಾಗಿದೆ. ಸಮುದಾಯದ ಸದಸ್ಯರ ನಡುವೆ ಪರಸ್ಪರ ಸಂಪರ್ಕವನ್ನು ಬೆಳೆಸಬೇಕಾದ್ದು ಅಗತ್ಯವಾಗಿದೆ. ಲಿಂಗಾಯತ ಸಮುದಾಯವು ನಾಡಿನಲ್ಲಿ ಶೈಕ್ಷಣಿಕ ಕ್ರಾಂತಿಗೆ ಕಾರಣವಾಗಿದೆ. ನಮ್ಮ ಸಮುದಾಯ ಸಮಾಜಕ್ಕೆ ಕೊಡುತ್ತ ಬಂದಿರುವವರೇ ವಿನಾ ಬೇಡಿದವರಲ್ಲ. ಸಮುದಾಯದ ಮಠಮಾನ್ಯಗಳಲ್ಲಿ ಲಕ್ಷಾಂತರ ಜನರಿಗೆ ಊಟ ಮತ್ತು ವಸತಿಯ ದಾಸೋಹವನ್ನು ನಡೆಸಿಕೊಂಡು ಬರುತ್ತಿದ್ದೇವೆ. ಆದರೆ, ಈಗ ಹೊರಳು ಹಾದಿಯಲ್ಲಿ ಇದ್ದೇವೆ ಎಂದರು. ಸರ್ಕಾರ ಕೈಗಾರಿಕೆಗೆ ಸಂಬಂಧಿಸಿದಂತೆ ಹಲವು ಉಪಯುಕ್ತ ಉಪಕ್ರಮ ಕೈಗೊಂಡಿದೆ. ರಾಜ್ಯದ ಪ್ರತಿಯೊಂದು ಭಾಗದಲ್ಲೂ ಬಗೆಬಗೆಯ ಉದ್ದಿಮೆಗಳು ನೆಲೆಯೂರಬೇಕು ಎಂಬ ಸದಾಶಯದಿಂದ ಹಲವು ಪ್ರೋತ್ಸಾಹಕ ಕ್ರಮಗಳನ್ನು ಅಳವಡಿಸಿ ಕೊಂಡಿದ್ದೇವೆ. ಲಿಂಗಾಯತ ಸಮುದಾಯ ಇದರ ಪ್ರಯೋಜನ ಪಡೆದುಕೊಳ್ಳಬೇಕು ಎಂದು ಅವರು ಕರೆ ಕೊಟ್ಟಿದ್ದಾರೆ.

ಹಳೆ ಮೈಸೂರು ಭಾಗದಲ್ಲಿ ಸುತ್ತೂರು ಮತ್ತು ಸಿದ್ಧಗಂಗಾ ಮಠಗಳು ಅಪಾರ ಕೆಲಸ ಮಾಡಿವೆ. ಉದ್ಯಮಶೀಲತೆಯ ಬೆಳವಣಿಗೆಗೂ ಈ ಮಠಗಳ ಶ್ರೀಗಳು ಮಾರ್ಗದರ್ಶನ ಮಾಡಬೇಕು ಎಂದು ಪಾಟೀಲರು ಮನವಿ ಮಾಡಿದರು.

ಮೀಸಲಾತಿಗೆ ಅನುಕೂಲವಾಗುತ್ತಿತ್ತು: ಲಿಂಗಾಯತ ಪ್ರತ್ಯೇಕ ಧರ್ಮವಾಗಿದ್ದರೆ, ಎಲ್ಲಾ ಪಂಗಡಗಳನ್ನು ಒಂದುಗೂಡಿಸಿ ಮೀಸಲಾತಿ ಪ್ರಮಾಣ ಹೆಚ್ಚಾಗಿ ಪಡೆಯಬಹುದೆಂಬ ಕಾರಣದಿಂದ ಆ ಹೋರಾಟದಲ್ಲಿ ಮುಂಚೂಣಿಯಲ್ಲಿ ಪಾಲ್ಗೊಂಡಿದ್ದೆ. ಈ ಹಿಂದೆ ಲಿಂಗಾಯತ ಪ್ರತ್ಯೇಕ ಧರ್ಮಕ್ಕಾಗಿ ಹೋರಾಟ ನಡೆಸಲಾಗಿತ್ತು. ಅದಕ್ಕೆ ಕೆಲವರು ಆಕ್ಷೇಪ ವ್ಯಕ್ತಪಡಿಸಿದ್ದರು. ಆದರೆ, ಲಿಂಗಾಯತ ಧರ್ಮ ಪ್ರತ್ಯೇಕ ಧರ್ಮವಾದರೆ, ಲಿಂಗಾಯತ ಧರ್ಮದ ವಿವಿಧ ಪಂಗಡಗಳನ್ನು ಒಂದುಗೂಡಿಸಲು ಸಾಧ್ಯವಾಗುತ್ತಿತ್ತು. ಅದರಿಂದ ಹೆಚ್ಚಿನ ಮೀಸಲಾತಿ ಪ್ರಮಾಣ ವೀರಶೈವ ಲಿಂಗಾಯತ ಧರ್ಮಕ್ಕೆ ಸಿಗುತ್ತಿತ್ತು. ಇದರಿಂದ ಸಮುದಾಯ ವಿದ್ಯಾರ್ಥಿಗಳಿಗೆ ನೆರವಾಗುತ್ತಿತ್ತು. ಆ ಕಾರಣಕ್ಕಾಗಿ ಪ್ರತ್ಯೇಕ ಧರ್ಮಕ್ಕಾಗಿ ಹೋರಾಟ ಮಾಡಬೇಕಾದ ಅನಿವಾರ್ಯತೆ ಇತ್ತು ಎಂದರು. ಲಿಂಗಾಯತ ಪ್ರತ್ಯೇಕ ಧರ್ಮದ ಕೂಗನ್ನು ವಿರೋಧಿಸುತ್ತಿರುವವರು ಒಮ್ಮೆ ಮೈಸೂರು ಸಮೀಕ್ಷೆ 1871, 1881ರಲ್ಲಿ ನಡೆದ ಸಮೀಕ್ಷೆಯನ್ನು ನೋಡಬೇಕು. ಅದರಲ್ಲಿ ಲಿಂಗಾಯತ ಧರ್ಮದ ಬಗ್ಗೆ ಸಂಪೂರ್ಣ ಮಾಹಿತಿ ದೊರೆಯಲಿದೆ. ಈ ಹಿಂದೆ ಯಾವ ಯಾವ ಪಂಗಡಗಳು ಲಿಂಗಾಯತ ಸಮುದಾಯಕ್ಕೆ ಸೇರಿತ್ತು. ಅವು ಯಾವ ಕಾರಣಕ್ಕೆ ಇಂದು ಅಂತರ ಕಾಯ್ದುಕೊಂಡಿವೆ ಎಂದು ತಿಳಿಯುತ್ತದೆ.

ಈ ಹಿನ್ನೆಲೆಯಲ್ಲಿ ಸಮುದಾಯ ಪ್ರಮುಖ ಮುಖಂಡರು, ಸ್ವಾಮೀಜಿಗಳ ತಂಡ ಈ ಹಿಂದಿನ ಸಮೀಕ್ಷೆಯನ್ನು ನೋಡಿ, ಈ ವಿವಾದವನ್ನು ಸುಖಾಂತ್ಯಗೊಳಿಸಿ ಸಮುದಾಯಕ್ಕೆ ಒಳಿತಾಗುವಂತೆ ಮಾಡಬೇಕು ಎಂದು ಮನವಿ ಮಾಡಿದರು.

ಜಾತಿ ಗಣತಿ ವರದಿ ಸಿದ್ದರಾಮಯ್ಯಗೆ ಪಗಡೆಯಾಟವಾಗಿದೆ

● ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಟೀಕೆ
● ಯಾವುದೇ ಸಮಯದಲ್ಲಿ ಸಿಎಂ ರಾಜೀನಾಮೆ

ಮೈಸೂರು, ಜ.17(ಬಿಎಲ್‌ಯು)– ಜಾತಿ ಗಣತಿ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಪಗಡೆಯಾಟ ಎಂದು ಭಾವಿಸಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಟೀಕಿಸಿದ್ದಾರೆ. ಮೈಸೂರಿನ ಚಾಮುಂಡಿ ಬೆಟ್ಟದ ಪಾದದ ಬಳಿಯ ಸುತ್ತೂರು ಶಾಖಾ ಮಠದಲ್ಲಿ ಇಂದು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಆಶೀರ್ವಾದ ಪಡೆದ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಜಾತಿ ಗಣತಿ ವರದಿಯನ್ನು ಸಿದ್ದರಾಮಯ್ಯ ರಾಜಕೀಯ ದಾಳ ಹಾಗೂ ಅಸ್ತ್ರವಾಗಿ ಬಳಸಿಕೊಂಡಿದ್ದಾರೆ ಎಂದು ಆರೋಪಿಸಿದರು.

ತಮ್ಮ ಕುರ್ಚಿ ಅಲ್ಲಾಡುವ ಸಂದರ್ಭದಲ್ಲಿ ಸಿದ್ದರಾಮಯ್ಯಗೆ ಜಾತಿ ಗಣತಿ ವರದಿ ನೆನಪಿಗೆ ಬರುತ್ತದೆ. ಈ ವರದಿಯನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಂಡಿದ್ದಾರೆ. ವರದಿ ಅವೈಜ್ಞಾನಿಕವಾದ ಕಾರಣ ಲಿಂಗಾಯಿತ ಹಾಗೂ ಒಕ್ಕಲಿಗ ಸಮುದಾಯ ವಿರೋಧ ಮಾಡುತ್ತಿದೆ ಎಂದರು. ಸಿದ್ದರಾಮಯ್ಯ ಯಾವುದೇ ಕಾರಣಕ್ಕೂ 2ನೇ ಅವಧಿಯಲ್ಲಿ ಪೂರ್ಣಾವಧಿ ಮುಖ್ಯಮಂತ್ರಿ ಆಗಲು ಸಾಧ್ಯವಿಲ್ಲ. ಯಾವುದೇ ಕ್ಷಣದಲ್ಲಾದರೂ ರಾಜೀನಾಮೆ ಕೊಡುವ ಪರಿಸ್ಥಿತಿ ಬರಬಹುದು. ಸಿದ್ದರಾಮಯ್ಯ ಚಾಣಾಕ್ಷತನ ಹೊಂದಿದ್ದರೂ, ಡಿ.ಕೆ.ಶಿವಕುಮಾರ್ ರಾಜಕೀಯ ದಾಳ ಉರುಳಿಸುತ್ತಿದ್ದಾರೆ. ಇದಕ್ಕೆ ಪ್ರತಿಯಾಗಿ ಸಿದ್ದರಾಮಯ್ಯ ಡಿನ್ನರ್ ಮೀಟಿಂಗ್ ನಡೆಸುತ್ತಿದ್ದಾರೆ ಎಂದರು.

ಕಾನೂನು ಸುವ್ಯವಸ್ಥೆ ಕುಸಿದಿದೆ: ಬೀದರ್‌ನಲ್ಲಿ ದರೋಡೆ, ಗುಲ್ಬರ್ಗಾದಲ್ಲಿ ಬಾಲಕಿ ಮೇಲೆ ಅತ್ಯಾಚಾರ, ಚಾಮರಾಜಪೇಟೆಯಲ್ಲಿ ಹಸುವಿನ ಕೆಚ್ಚಲು ಕೊಯ್ದಿರುವುದು ಸೇರಿದಂತೆ ಹಲವು ಕೃತ್ಯಗಳು ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿರುವುದಕ್ಕೆ ಸ್ಪಷ್ಟ ನಿದರ್ಶನ ಎಂದು ವಿಜಯೇಂದ್ರ ಆಪಾದಿಸಿದರು.

ರಾಜ್ಯ ಬಿಜೆಪಿಯಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಎಲ್ಲಾ ಸಮಸ್ಯೆಗಳು ಬಗೆಹರಿದಿದೆ. ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ರಾಜ್ಯಾಧ್ಯಕ್ಷನಾಗಿ ನಾನೇ ಮುಂದುವರೆಯುತ್ತೇನೆ ಎಂದು ಸ್ಪಷ್ಟಪಡಿಸಿದರು. ರಮೇಶ್ ಜಾರಕಿಹೊಳಿ ಸೇರಿದಂತೆ ಯಾರು ಕೂಡ ಯಡಿಯೂರಪ್ಪ ವಿರುದ್ಧ ಮಾತನಾಡಬಾರದು. ಗ್ರಾಮ ಮಟ್ಟದಿಂದ ಬಿಜೆಪಿಯನ್ನು ಕಟ್ಟಿ ಬೆಳೆಸಿದ ಯಡಿಯೂರಪ್ಪ ವಿರುದ್ಧ ಮಾತನಾಡಿದರೆ ಕಾರ್ಯಕರ್ತರ ಮನಸಿಗೆ ನೋವಾಗುತ್ತದೆ ಎಂದು ವಿಜಯೇಂದ್ರ ಹೇಳಿದರು.

ನಿಸ್ವಾರ್ಥದಿಂದ ಕೆಲಸ ಮಾಡಿದರೆ ಪ್ರಶಂಸೆ, ಪುರಸ್ಕಾರ ಅವಾಗಿಯೇ ಲಭಿಸಲಿವೆ

● ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ ಕಿವಿಮಾತು ● ಗಾಂಧಿ ಸದ್ಭಾವನಾ ಪ್ರಶಸ್ತಿ ಪ್ರದಾನ; ಭಸ್ಮಾಸುರ ಪ್ರಸಂಗ ಮಕ್ಕಳ ನಾಟಕ ಪ್ರದರ್ಶನ



ಮೈಸೂರಿನ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಶುಕ್ರವಾರ ಅದಮ್ಯ ರಂಗಶಾಲೆ ವತಿಯಿಂದ ವಿವಿಧ ಕ್ಷೇತ್ರದ ಸಾಧಕರಿಗೆ ಗಾಂಧಿ ಸದ್ಭಾವನಾ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು, ಜ.17(ಎಸ್‌ಬಿಡಿ)– ನಿಸ್ವಾರ್ಥದಿಂದ ಕೆಲಸ ಮಾಡಿದರೆ ಪ್ರಶಂಸೆ, ಪ್ರಶಸ್ತಿ, ಪುರಸ್ಕಾರಗಳು ಅವಾಗಿಯೇ ಅರಸಿ ಬರುತ್ತವೆ ಎಂದು ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅಭಿಪ್ರಾಯಿಸಿದರು.

ಮೈಸೂರಿನ ಅದಮ್ಯ ರಂಗಶಾಲೆ ವತಿಯಿಂದ ವಿಜಯನಗರದ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಶುಕ್ರವಾರ ನಡೆದ ಗಾಂಧಿ ಸದ್ಭಾವನಾ ಪ್ರಶಸ್ತಿ ಪ್ರದಾನ ಹಾಗೂ ಭಸ್ಮಾಸುರ ಪ್ರಸಂಗ ಮಕ್ಕಳ ನಾಟಕ ಪ್ರದರ್ಶನ ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡಿದರು.

ಯಾವುದೇ ಕ್ಷೇತ್ರವಾದರೂ ಸ್ವಾರ್ಥ ಬಿಟ್ಟು ಕೆಲಸ ನಿರ್ವಹಿಸಿದರೆ ಪ್ರಶಸ್ತಿ, ಪುರಸ್ಕಾರಗಳು ಅರಸಿ ಬರುತ್ತವೆ. ಸರ್ಕಾರಿ ವೈದ್ಯನಾಗಿ ನಂತರ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿರುವ ನನಗೂ ಈ ಅನುಭವವಾಗಿದೆ. ನಿವೃತ್ತಿ ನಂತರವೂ ವಿಧಾನಪರಿಷತ್ ಸದಸ್ಯನಾಗಿ ಸಮಾಜಕ್ಕಾಗಿ ಸೇವೆ ಸಲ್ಲಿಸುವ ಅವಕಾಶ ಸಿಕ್ಕಿದೆ. ಎಲ್ಲರೂ ಒಳ್ಳೆಯದನ್ನೇ ಮಾಡುವುದರ ಜೊತೆಗೆ ಎಲ್ಲರಿಗೂ ಒಳ್ಳೆಯದನ್ನೇ ಬಯಸೋಣ. ಆಗ ಮಾತ್ರ ಮನುಷ್ಯ ಜನ್ಮ ಸಾರ್ಥಕವಾಗುತ್ತದೆ ಎಂದು ಹೇಳಿದರು.

ಸ್ವಾತಂತ್ರ್ಯ ಪೂರ್ವದಲ್ಲಿ ದೇಶದ ಪರಿಸ್ಥಿತಿ ಹೇಗಿತ್ತು ಎಂದು ಸ್ಮರಿಸಿಕೊಳ್ಳಬೇಕು. ವಾಹನ ವ್ಯವಸ್ಥೆ, ಕುಡಿಯುವ ನೀರು ಸೇರಿದಂತೆ ಮೂಲ ಸೌಕರ್ಯಗಳೂ ಇರಲಿಲ್ಲ. ಸಾಂಕ್ರಾಮಿಕ ರೋಗಗಳು ಬಾಧಿಸುತ್ತಿದ್ದವು. ಈಗ ಆರ್ಥಿಕತೆಯಲ್ಲಿ ಭಾರತ ದೇಶ ಐದನೇ ಸ್ಥಾನದಲ್ಲಿದೆ. ಈ ಸಂದರ್ಭದಲ್ಲಿ ಶಾಂತಿದೂತರಾಗಿದ್ದ ಮಹಾತ್ಮ ಗಾಂಧೀಜಿ ಸೇರಿದಂತೆ ಎಲ್ಲಾ ಸ್ವಾತಂತ್ರ್ಯ ಹೋರಾಟಗಾರರನ್ನು ನೆನೆಯಬೇಕು. ಗಾಂಧೀಜಿ ಹೆಸರಿನಲ್ಲಿ ವಿವಿಧ ಕ್ಷೇತ್ರದ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡುತ್ತಿರುವುದು ಸ್ತುತ್ಯಾರ್ಹ ಎಂದು ಪ್ರಶಂಸಿಸಿದರು. ಮೈಸೂರು ವಿಶ್ವವಿದ್ಯಾನಿಲಯ ಪ್ರಸಾರಂಗದ ವಿಶ್ರಾಂತ ನಿರ್ದೇಶಕರಾದ ಹಿರಿಯ ಗಾಂಧಿವಾದಿ ಪ್ರೊ.ಕೆ.ಟಿ.ವೀರಪ್ಪ ಮಾತನಾಡಿ, ಮಹಾತ್ಮ ಗಾಂಧಿ ಹಾಕಿ ಕೊಟ್ಟ ದಾರಿಯಲ್ಲಿ ನಾವೆಲ್ಲಾ ಮುನ್ನಡೆಯೋಣ. ಎಲ್ಲರೊಂದಿಗೆ ಕೂಡಿ ಬಾಳುವ ಸದ್ಭಾವನೆ ಎಲ್ಲೆಡೆ ಪಸರಿಸಲಿ ಎಂದು ಆಶಿಸಿದರು.

ಎಂಟು ಮಂದಿಗೆ ಪ್ರಶಸ್ತಿ ಪ್ರದಾನ: ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು, ವಿಜಯನಗರ ಉಪ ವಿಭಾಗದ ಎಸಿಪಿ ಜಿ.ಎಸ್.ಗಜೇಂದ್ರ ಪ್ರಸಾದ್, ಪತ್ರಕರ್ತ ಮಹೇಶ್ ಎಂ.ಭಗೀರಥ, ಪಿರಿಯಾಪಟ್ಟಣದ ಕಲ್ಪವೃಕ್ಷ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಅಧ್ಯಕ್ಷ ಪಿ.ಪ್ರಶಾಂತ್ ಗೌಡ, ಮಹಾರಾಣಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಪಿ.ಸೋಮಣ್ಣ, ಕೊಳ್ಳೇಗಾಲದ ಶ್ರೀ ವಾಸವಿ ಸಂಯುಕ್ತ ಪದವಿಪೂರ್ವ ಕಾಲೇಜು ಪ್ರಾಂಶುಪಾಲೆ ವಿ.ವಾಸವಾಂಬ ಹಾಗೂ ಮಂಡ್ಯದ ಕನ್ನಿಕಾಶಿಲ್ಪ ನವೋದಯ ತರಬೇತಿ ಕೇಂದ್ರದ ಪ್ರಾಂಶುಪಾಲೆ ಹೆಚ್.ಆರ್.ಕನ್ನಿಕಾ ಅವರಿಗೆ 'ಗಾಂಧಿ ಸದ್ಭಾವನಾ ಪ್ರಶಸ್ತಿ' ಪ್ರದಾನ ಮಾಡಿ, ಅಭಿನಂದಿಸಲಾಯಿತು. ಮತ್ತೋರ್ವ ಪುರಸ್ಕೃತ ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಆಡಳಿತಾಧಿಕಾರಿ ಡಾ.ಎ.ಟಿ.ಶಿವರಾಮ್ ಗೈರಾಗಿದ್ದರು.

ಕಾರ್ಯಕ್ರಮದಲ್ಲಿ ರಾಜ್ಯ ಸರ್ಕಾರಿ ನೌಕರರ ಸಂಘದ ಮಾಜಿ ರಾಜ್ಯಾಧ್ಯಕ್ಷ ಹೆಚ್.ಕೆ.ರಾಮು, ಅದಮ್ಯ ರಂಗಶಾಲೆ ಗೌರವ ಕಾರ್ಯದರ್ಶಿ ಟಿ.ಸತೀಶ್ ಜವರೇಗೌಡ, ಕಾರ್ಯದರ್ಶಿ ಚಂದ್ರು ಮಂಡ್ಯ ಮತ್ತಿತರರು ಉಪಸ್ಥಿತರಿದ್ದರು.

ಮಕ್ಕಳ ನಾಟಕ: ಕಾರ್ಯಕ್ರಮದ ಬಳಿಕ ಅದಮ್ಯ ರಂಗಶಾಲೆಯ ವಾರಾಂತ್ಯ ರಂಗ ತರಬೇತಿ ಶಿಬಿರದ ಮಕ್ಕಳು ಲೋಕನಾಥ ಸೋಗುಂ ಅವರ ನಿರ್ದೇಶನದಲ್ಲಿ 'ಭಸ್ಮಾಸುರ ಪ್ರಸಂಗ' ನಾಟಕ ಪ್ರದರ್ಶಿಸಿದರು.

ಮೊಳೆ ಇಟ್ಟು ವಾಹನ ಪಂಚರ್: ಡೋರ್ ತೆಗೆದು ಇಳಿಯುತ್ತಿದ್ದಂತೆ ಭೀಕರ ಮರ್ಡರ್

ಹಾಸನ, ಜ.17– ಮಾರಕಾಸ್ತ್ರಗಳಿಂದ ಕೊಚ್ಚಿ ವ್ಯಕ್ತಿಯೊಬ್ಬನನ್ನು ಬರ್ಬರವಾಗಿ ಹತ್ಯೆಗೈದ ಘಟನೆ ಚನ್ನರಾಯಪಟ್ಟಣದ ಕುಂಬಾರಹಳ್ಳಿ ಗ್ರಾಮದಲ್ಲಿ ನಡೆದಿದೆ. ಹತ್ಯೆಯಾದ ವ್ಯಕ್ತಿಯನ್ನು ನಂಜುಂಡೇಗೌಡ (44) ಎಂದು ಗುರುತಿಸಲಾಗಿದೆ. ರೈತರಿಂದ ಹಾಲು ಸಂಗ್ರಹ ಮಾಡಿಕೊಂಡು ಡೈರಿಗೆ ಹಾಲು ಹಾಕಲು ಮಹೀಂದ್ರ ಜಿತೋ ವಾಹನದಲ್ಲಿ ನಂಜುಂಡೇಗೌಡ ತೆರಳುತ್ತಿದ್ದರು. ಈ ವೇಳೆ ದುಷ್ಕರ್ಮಿಗಳು ಮರುವನಹಳ್ಳಿ–ಮಡಬ ರಸ್ತೆಯಲ್ಲಿ ಮರದ ಪಟ್ಟಿಗೆ ಮೊಳೆ ಇಟ್ಟು ವಾಹನ ಪಂಚರ್ ಮಾಡಿದ್ದಾರೆ. ವಾಹನ ಪಂಕ್ಚರ್ ಆದ ಕೂಡಲೇ ಕೆಳಗಿಳಿದ ನಂಜುಂಡೇಗೌಡರ ಮೇಲೆ ಮಾರಕಾಸ್ತ್ರಗಳಿಂದ ದಾಳಿ ನಡೆದಿದೆ.

ಮೂರನೇ ಪುಟದಿಂದ

142 ಸ್ಥಿರಾಸ್ತಿಗಳ ಮುಟ್ಟುಗೋಲು

ಹಣ ವರ್ಗಾವಣೆ ಪ್ರಕರಣ ದಾಖಲಿಸಿಕೊಂಡಿದ್ದ ಇಡಿ, ಇಂದು ಹಗರಣ ಸಂಬಂಧ ಪತ್ರಿಕಾ ಪ್ರಕಟಣೆ ಬಿಡುಗಡೆ ಮಾಡಿದೆ. ಸಿದ್ದರಾಮಯ್ಯ ವಿರುದ್ಧದ ಪ್ರಕರಣದ ತನಿಖೆ ವೇಳೆ ಅದನ್ನು ಹೊರತುಪಡಿಸಿ ರಿಯಲ್ ಎಸ್ಟೇಟ್ ಉದ್ಯಮಿಗಳು ಸೇರಿದಂತೆ ಹಲವರ ಹೆಸರಿನಲ್ಲಿ ನಿವೇಶನಗಳನ್ನು ಕಾನೂನು ಬಾಹಿರವಾಗಿ ಮಂಜೂರು ಮಾಡುವುದರ ಮೂಲಕ ಕೋಟ್ಯಾಂತರ ರೂ. ಮೌಲ್ಯದ ಮುಡಾ ಆಸ್ತಿಯನ್ನು ಅಕ್ರಮವಾಗಿ ನೀಡಲಾಗಿದ್ದು, ಅಕ್ರಮ ಹಣ ವರ್ಗಾವಣೆಯಾಗಿರುವುದು ತನಿಖೆ ವೇಳೆ ಕಂಡು ಬಂದಿದೆ ಎಂದು ಇಡಿ ಪ್ರಕಟಣೆ ತಿಳಿಸಿದೆ. ಪಾರ್ವತಿ ಅವರ ಕೆಸರೆ ಗ್ರಾಮದ 3 ಎಕರೆ 16 ಗುಂಟೆ ಜಮೀನನ್ನು ಮುಡಾ 3,23,700 ರೂಗಳಿಗೆ ಸ್ವಾಧೀನ ಪಡಿಸಿಕೊಂಡಿತ್ತು. ಆದರೆ ಅದಕ್ಕೆ ಪರಿಹಾರವಾಗಿ ಅಂದಾಜು 56 ಕೋಟಿ ರೂ.ಮೌಲ್ಯದ 14 ನಿವೇಶನಗಳನ್ನು ಮುಖ್ಯಮಂತ್ರಿಯವರ ಪತ್ನಿ ಬಿ.ಎಂ.ಪಾರ್ವತಿಗೆ ಅಕ್ರಮವಾಗಿ ನೀಡಲಾಗಿದೆ. ಅಕ್ರಮ ನಿವೇಶನ ಹಂಚಿಕೆಯಲ್ಲಿ ಮುಡಾ ಮಾಜಿ ಆಯುಕ್ತ ನಟೇಶ್ ಅವರನ್ನು ಅಸ್ತ್ರವಾಗಿ ಬಳಸಿಕೊಳ್ಳಲಾಗಿದೆ. ಸಿಎಂ ಪತ್ನಿಗೆ ಹಂಚಿಕೆಯಾದ ನಿವೇಶನಗಳನ್ನು ಹೊರತುಪಡಿಸಿ ಹೆಚ್ಚಿನ ಸಂಖ್ಯೆಯ ನಿವೇಶನಗಳನ್ನು ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ಪರಿಹಾರವಾಗಿ ಅಕ್ರಮವಾಗಿ ಮುಡಾ ಹಂಚಿಕೆ ಮಾಡಿದೆ ಎಂಬುದು ಬಹಿರಂಗವಾಗಿದೆ. ಅವರು ಈ ನಿವೇಶನಗಳನ್ನು ಭಾರೀ ಬೆಲೆಗೆ ಮಾರಾಟ ಮಾಡಿದ್ದಾರೆ ಲೆಕ್ಕವಿಲ್ಲದಷ್ಟು ಹಣವನ್ನು ಗಳಿಸಿದ್ದಾರೆ. ಹೀಗೆ ಗಳಿಸಿದ ಲಾಭವನ್ನು ಅಕ್ರಮವಾಗಿ ವರ್ಗಾಯಿಸಲಾಗಿದೆ. ಕಾನೂನು ಪ್ರಕಾರವಾಗಿಯೇ ಮುಡಾ ನಿವೇಶನ ಪಡೆಯಲಾಗಿದೆ ಎಂದು ಮುಡಾ ದಾಖಲಾತಿಗಳಲ್ಲಿ ಉಲ್ಲೇಖಿಸಲಾಗಿದೆ. ಇಡಿ ಅಧಿಕಾರಿಗಳ ದಾಳಿ ವೇಳೆ ಪ್ರಭಾವಿ ವ್ಯಕ್ತಿಗಳು, ರಿಯಲ್ ಎಸ್ಟೇಟ್ ಉದ್ಯಮಿಗಳ ಬೇನಾಮಿ ವ್ಯಕ್ತಿಗಳು ಮತ್ತು ನಕಲಿ ವ್ಯಕ್ತಿ ಹೆಸರಿನಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಿರುವುದು ಪತ್ತೆಯಾಗಿದೆ. ಆಗಿನ ಮುಡಾ ಅಧ್ಯಕ್ಷರು ಮತ್ತು ಮುಡಾ ಆಯುಕ್ತರಿಗೆ ಸ್ಥಿರ ಆಸ್ತಿ, ಮುಡಾ ನಿವೇಶನಗಳು ನಗದು ಇತ್ಯಾದಿಗಳ ರೂಪದಲ್ಲಿ ಅಕ್ರಮವಾಗಿ ಪಾವತಿಸಿದ ಬಗ್ಗೆ ಪುರಾವೆಗಳನ್ನು ವಶಪಡಿಸಿಕೊಳ್ಳಲಾಗಿದೆ. ಹೀಗೆ ಪಡೆದ ಅಕ್ರಮ ಸಂಭಾವನೆಯನ್ನು ಮತ್ತಷ್ಟು ಅಕ್ರಮವಾಗಿ ವರ್ಗಾಯಿಸಲಾಗಿದೆ. ಆದರೆ, ಅದನ್ನು ಕಾನೂನುಬದ್ಧ ಮೂಲಗಳಿಂದ ಪಡೆಯಲಾಗಿದೆ ಎಂದು ತೋರಿಸಲಾಗಿದೆ.

ಮುಡಾದ ಹಿಂದಿನ ಆಯುಕ್ತರಾಗಿದ್ದ ಜಿ.ಟಿ. ದಿನೇಶ್ ಕುಮಾರ್, ಸಂಬಂಧಿಕರ ಹೆಸರಿನಲ್ಲಿ ಆಸ್ತಿ, ಐಷಾರಾಮಿ ವಾಹನಗಳು ಇತ್ಯಾದಿಗಳನ್ನು ಖರೀದಿಸಲು ಸಹಕಾರಿ ಸಂಘದ ಮೂಲಕ ಹಣವನ್ನು ವರ್ಗಾಯಿಸಲಾಗಿದೆ ಎಂದು ತಿಳಿದು ಬಂದಿದೆ. ಹೆಚ್ಚಿನ ತನಿಖೆ ಪ್ರಗತಿಯಲ್ಲಿದೆ ಎಂದು ತಿಳಿಸಲಾಗಿದೆ.

ಮಂಡ್ಯದಲ್ಲಿ ಕೃಷಿ ವಿವಿ ಸ್ಥಾಪನೆ; ಮಾಜಿ ಎಂಎಲ್ಸಿ ಮರಿತಿಬ್ಬೇಗೌಡ ಸ್ವಾಗತ



ಮೈಸೂರು, ಜ.17– ಮಂಡ್ಯದ ವಿಸಿ ಫಾರಂನಲ್ಲಿ ಕೃಷಿ ವಿಶ್ವವಿದ್ಯಾನಿಲಯ ಸ್ಥಾಪನೆಗೆ ಸಚಿವ ಸಂಪುಟ ಅನುಮೋದಿಸಿರುವುದು ಅಭಿನಂದನಾರ್ಹ ಎಂದು ವಿಧಾನಪರಿಷತ್ ಮಾಜಿ ಸದಸ್ಯ ಮರಿತಿಬ್ಬೇಗೌಡ ಹೇಳಿದ್ದಾರೆ.

ಮೈಸೂರು, ಕೊಡಗು, ಚಾಮರಾಜನಗರ ಹಾಗೂ ಹಾಸನ ಜಿಲ್ಲೆಗಳಲ್ಲಿನ ಕೃಷಿ ಕಾಲೇಜು ಹಾಗೂ ಸಂಶೋಧನಾ ಕೇಂದ್ರಗಳ ಒಳಗೊಂಡಂತೆ ಮಂಡ್ಯದ ವಿಸಿ ಫಾರಂನಲ್ಲಿ ಕೃಷಿ ವಿಶ್ವವಿದ್ಯಾನಿಲಯ ಸ್ಥಾಪಿಸಬೇಕೆಂಬ ವಿಷಯ ವಿಧಾನ ಪರಿಷತ್‌ನಲ್ಲಿ ಹಲವು ಬಾರಿ ಚರ್ಚೆಗೆ ಬಂದಿತ್ತು. ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಮಂಡ್ಯ ಜಿಲ್ಲೆಯ ಉಸ್ತುವಾರಿ ಸಚಿವರೂ ಆದ ಕೃಷಿ ಸಚಿವ ಚಲುವರಾಯಸ್ವಾಮಿಯವರ ನೇತೃತ್ವದಲ್ಲಿ ವಿಧಾನಸಭೆ ಹಾಗೂ ವಿಧಾನಪರಿಷತ್ ಸದಸ್ಯರು ಒತ್ತಾಯಿಸಿದ್ದರ ಹಿನ್ನೆಲೆಯಲ್ಲಿ ತಜ್ಞರ ಸಮಿತಿ ವರದಿಯ ಮೇರೆಗೆ ನಿನ್ನೆ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಿರುವುದು ಸಂತೋಷದ ಸಂಗತಿ. ಕೃಷಿ ವಿವಿಯಿಂದ ಈ ಐದು ಜಿಲ್ಲೆಗಳಲ್ಲಿ ವೈಜ್ಞಾನಿಕ ಕೃಷಿ ಚಟುವಟಿಕೆ ಹಾಗೂ ಸಂಶೋಧನೆಗೆ ಸಹಕಾರಿಯಾಗಲಿದೆ. ಈ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತಿ ಡಿ.ಕೆ.ಶಿವಕುಮಾರ್ ಸೇರಿದಂತೆ ಎಲ್ಲಾ ಸಚಿವರಿಗೂ ರೈತರ ಪರವಾಗಿ ಧನ್ಯವಾದ ಸಲ್ಲಿಸುತ್ತೇನೆ ಎಂದು ಮರಿತಿಬ್ಬೇಗೌಡರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಖೋ ಖೋ ವಿಶ್ವಕಪ್ 2025: ಸೆಮಿಫೈನಲ್ ಪ್ರವೇಶಿಸಿದ ಭಾರತ ಮಹಿಳಾ ತಂಡ





ನವದೆಹಲಿ, ಜ.17– ಇಲ್ಲಿನ ಇಂದಿರಾ ಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ 2025ರ ಖೋ ಖೋ ವಿಶ್ವಕಪ್ ಟೂರ್ನಿಯಲ್ಲಿ ಭಾರತ ಮಹಿಳಾ ತಂಡವು ಬಾಂಗ್ಲಾದೇಶ ವಿರುದ್ಧ 109–16 ಅಂಕಗಳ ಅಂತರದಿಂದ ಭರ್ಜರಿ ಜಯ ಸಾಧಿಸಿ ಸೆಮಿಫೈನಲ್ ಪ್ರವೇಶಿಸಿದೆ.

ನಾಯಕಿ ಪ್ರಿಯಾಂಕಾ ಇಂಗಳೆ ನೇತೃತ್ವದ ತಂಡವು ಎರಡನೇ ಅವಧಿಯಲ್ಲಿ ಐದು ನಿಮಿಷಗಳ ಕಾಲ ನಡೆದ ಆಕರ್ಷಕ ಡ್ರೀಮ್ ರನ್ ಸೇರಿದಂತೆ ಎಲ್ಲಾ ನಾಲ್ಕು ಅವಧಿಗಳಲ್ಲಿ ತಮ್ಮ ಪ್ರಾಬಲ್ಯವನ್ನು ಪ್ರದರ್ಶಿಸಿತು. ಇದರೊಂದಿಗೆ ಆತಿಥೇಯ ತಂಡವು 100ಕ್ಕೂ ಅಧಿಕ ಅಂಕಗಳನ್ನು ಗಳಿಸುವ ಗಮನಾರ್ಹ ಪ್ರದರ್ಶನವನ್ನು ಮುಂದುವರಿಸಿದೆ. ಇದು ಪಂದ್ಯಾವಳಿಯಲ್ಲಿ ಅಂಕಗಳ ಶತಕದ ಗಡಿಯನ್ನು ದಾಟಿದ ಸತತ ಐದನೇ ಪಂದ್ಯವಾಗಿದೆ.

ಈ ಗೆಲುವಿನೊಂದಿಗೆ ಜ.18ರ ಶನಿವಾರ ನಡೆಯಲಿರುವ ಸೆಮಿಫೈನಲ್ ಪಂದ್ಯಕ್ಕೆ ಭಾರತ ವೇದಿಕೆ ಸಿದ್ಧಪಡಿಸಿಕೊಂಡಿದೆ.ಬಾಂಗ್ಲಾದೇಶ ವಿರುದ್ಧದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ನಸ್ರೀನ್ ಶೇಖ್ ಮತ್ತು ಪ್ರಿಯಾಂಕಾ ಇಂಗಳೆ ಅವರ ಅನುಭವದ ನೆರವಿನಿಂದ ಭಾರತ ತಂಡ ಅತ್ಯುತ್ತಮ ಪ್ರದರ್ಶನ ತೋರಿತು. ತಮ್ಮ ಸರದಿಯ ಆರಂಭದಿಂದಲೂ ಡ್ರೀಮ್ ರನ್ ಮೂಲಕ ಅಂಕಗಳನ್ನು ಗಳಿಸಿದ್ದ ರಿಂದ ಅವರು 2ನೇ ಅವಧಿಯಲ್ಲೂ ಬಾಂಗ್ಲಾ ದೇಶಿಗಳನ್ನು ನೆಲೆಗೊಳ್ಳಲು ಬಿಡಲಿಲ್ಲ.

ಪುರುಷರ ವಿಭಾಗದ ಕ್ವಾರ್ಟರ್ ಫೈನಲ್ ಫಲಿತಾಂಶ: ಪುರುಷರ ವಿಭಾಗದಲ್ಲಿ ಇರಾನ್ ತಂಡವು ಕೀನ್ಯಾ ವಿರುದ್ಧ 86–18 ಅಂಕಗಳ ಅಂತರದಲ್ಲಿ ಜಯ ಸಾಧಿಸಿತು. ನಿರ್ಣಾಯಕ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ 58–38 ಅಂಕಗಳಿಂದ ಇಂಗ್ಲೆಂಡ್ ತಂಡವನ್ನು ಸೋಲಿಸಿ ಸೆಮಿಫೈನಲ್ ಸ್ಥಾನವನ್ನು ಭದ್ರಪಡಿಸಿಕೊಂಡಿತು. ಬಾಂಗ್ಲಾದೇಶ ವಿರುದ್ಧ 67–18 ಅಂಕಗಳ ಭರ್ಜರಿ ಜಯ ದಾಖಲಿಸಿದ ನೇಪಾಳ ಸೆಮಿಫೈನಲ್ ಪ್ರವೇಶಿಸಿತು.

ಜಲ್ಲಿಕಟ್ಟು, ಮಂಜುವಿರಟ್ಟು ಸ್ಪರ್ಧೆ: ಏಳು ಮಂದಿ ಸಾವು

ಚೆನ್ನೈ, ಜ.17– ತಮಿಳುನಾಡಿನಲ್ಲಿ ಕಾಣುಂ ಪೊಂಗಲ್ ದಿನದಂದು ನಡೆದ ಜಲ್ಲಿಕಟ್ಟು ಮತ್ತು ಮಂಜುವಿರಟ್ಟು ಸ್ಪರ್ಧೆಗಳಲ್ಲಿ ಪ್ರೇಕ್ಷಕರು ಮತ್ತು ಗೂಳಿ ಮಾಲೀಕ ಸೇರಿದಂತೆ ಏಳು ಮಂದಿ ಮೃತಪಟ್ಟಿದ್ದಾರೆ. ಪ್ರತ್ಯೇಕ ಘಟನೆಗಳಲ್ಲಿ ಎರಡು ಹೋರಿಗಳೂ ಸಾವಿಗೀಡಾಗಿವೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ. ತಮಿಳುನಾಡಿನ ಎರಡು ಸ್ಥಳಗಳಲ್ಲಿ ನಡೆದ ಮಂಜುವಿರಟ್ಟು ಎಂಬ ಸಾಂಪ್ರದಾಯಿಕ ಗೂಳಿ ಪಳಗಿಸುವ ಆಟದ ವೇಳೆ ಎರಡು ಹೋರಿಗಳು ಸಾವಿಗೀಡಾಗಿವೆ. ಪುದುಕ್ಕೊಟ್ಟೈನಲ್ಲಿ ನಡೆದ ಸ್ಪರ್ಧೆಯ ವೇಳೆ ಗೂಳಿಯೊಂದು ಮೃತಪಟ್ಟಿದ್ದರೆ, ಶಿವಗಂಗೆಯ ಸಿರವಯಲ್‌ನಲ್ಲಿ ನಡೆದ ಮತ್ತೊಂದು ಘಟನೆಯಲ್ಲಿ ಗೂಳಿ ಮಾಲೀಕ ಹಾಗೂ ಆತನ ಗೂಳಿ ಪ್ರಾಣ ಕಳೆದುಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ದೇವಕೋಟೆಯ ಸುಬ್ಬಯ್ಯ ಎಂಬುವವರನ್ನು ಗೂಳಿ ತುಳಿದಿದ್ದು, ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆ ಮೃತಪಟ್ಟಿದ್ದಾರೆ. ಮಂಜುವಿರಟ್ಟು ಸ್ಪರ್ಧೆ ವೀಕ್ಷಿಸುತ್ತಿದ್ದ 55 ವರ್ಷದ ಪಿ.ಪೆರಿಯಸಾಮಿ ಎಂಬ ವ್ಯಕ್ತಿಗೆ ಕೆರಳಿದ ಗೂಳಿಯೊಂದು ದಾಳಿ ಮಾಡಿದ್ದರಿಂದ ಗಾಯಗೊಂಡಿದ್ದಾರೆ. ಮಧುರೈ ಸಮೀಪದ ಅಲಂಗನಲ್ಲೂರ್ ಎಂಬ ಗ್ರಾಮದಲ್ಲಿ ಈ ಘಟನೆ ನಡೆದಿದೆ. ಕನಿಷ್ಠ 70 ಜನರು ಗಾಯಗೊಂಡಿದ್ದಾರೆ. ಚಿಕಿತ್ಸೆಗೆ ಸ್ಪಂದಿಸದೆ ಮಧುರೈನ ರಾಜಾಜಿ ಸರ್ಕಾರಿ ಆಸ್ಪತ್ರೆಯಲ್ಲಿ ಪೆರಿಯಸಾಮಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಬದಲಾವಣೆ ಪ್ರಶ್ನೆಯೇ ಇಲ್ಲ

● ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಸ್ಪಷ್ಟನೆ ● ಯಾರೂ ಗೌಪ್ಯ ಸಭೆ ನಡೆಸಬೇಡಿ, ಅನಿವಾರ್ಯವಾದರೆ ಪಕ್ಷದ ಕಚೇರಿಯಲ್ಲೇ ನಡೆಸಿ ● ಬಹಿರಂಗ ಹೇಳಿಕೆ ಸಂಬಂಧ ಸತೀಶ್ ಜಾರಕಿ ಹೊಳಿಗೆ ನೋಟಿಸ್ ನೀಡಿಲ್ಲ

ಬೆಂಗಳೂರು, ಜ.17(ಕೆಎಂಶಿ)– ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಸ್ಥಾನದಿಂದ ಡಿ.ಕೆ.ಶಿವಕುಮಾರ್ ಬದಲಾವಣೆ ಪ್ರಶ್ನೆಯೇ ಇಲ್ಲ ಎಂದು ಪಕ್ಷದ ರಾಜ್ಯ ಉಸ್ತುವಾರಿ ಹೊಣೆ ಹೊತ್ತಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಸ್ಪಷ್ಟಪಡಿಸಿದ್ದಾರೆ.

ಪಕ್ಷ ಮತ್ತು ಸರ್ಕಾರಕ್ಕೆ ಸಂಬಂಧಿಸಿದಂತೆ ಯಾವುದೇ ಗೌಪ್ಯ ಸಭೆ ಅಥವಾ ಔತಣಕೂಟಗಳನ್ನು ಸಚಿವರು ಮತ್ತು ಮುಖಂಡರು ಇನ್ನು ಮುಂದೆ ನಡೆಸಬಾರದು ಎಂದು ತಾಕೀತು ಮಾಡಿದ್ದಾರೆ.

ನೀವು ಯಾವುದೇ ಸಭೆಗಳನ್ನು ಮಾಡುವುದಾದರೆ, ಅದನ್ನು ಪಕ್ಷದ ಕಚೇರಿಯಲ್ಲೇ ಮಾಡಿ, ಪ್ರತ್ಯೇಕ ಸಭೆಗಳನ್ನು ಮಾಡುವುದರಿಂದ ತಪ್ಪು ಸಂದೇಶಗಳು ಹೋಗುತ್ತವೆ.

ಶಿವಕುಮಾರ್ ಅವರನ್ನು ಅಧ್ಯಕ್ಷ ಸ್ಥಾನದಿಂದ ಸದ್ಯಕ್ಕೆ ಬದಲಾಯಿಸುವ ಪ್ರಸ್ತಾವ ವರಿಷ್ಠರ ಮುಂದಿಲ್ಲ. ಅಧ್ಯಕ್ಷರ ಬದಲಾವಣೆ ಕುರಿತು ಹೇಳಿಕೆಗಳನ್ನು ನೀಡಿದ ಸಚಿವ ಸತೀಶ್ ಜಾರಕಿಹೊಳಿ ಸೇರಿದಂತೆ ಯಾರಿಗೂ ನೋಟಿಸ್ ನೀಡಿಲ್ಲ ಎಂದು ಸ್ಪಷ್ಟಪಡಿಸಿದರು. ಎಲ್ಲರೂ ಪಕ್ಷದ ನಿಯಮಗಳಿಗೆ ಕಟಿಬದ್ಧರಾಗಿರುತ್ತಾರೆ. ನಮ್ಮ ಪಕ್ಷದಲ್ಲಿ ಹೊರಗಿನವರು ಅನಗತ್ಯ ಗೊಂದಲ ಸೃಷ್ಟಿಸುವ ಪ್ರಯತ್ನ ನಡೆಸಿದ್ದಾರೆ ಎಂದು ದೂರಿದರು.


ಸುರ್ಜೇವಾಲ

ನಮಗೆ ಮುಂದೆ ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ಎದುರಾಗಲಿವೆ. ಅವುಗಳನ್ನು ಸಿಎಂ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಶಿವಕುಮಾರ್ ಸೇರಿದಂತೆ ಇತರ ಮುಖಂಡರ ನಾಯಕತ್ವದಲ್ಲೇ ನಡೆಸುತ್ತೇವೆ ಎನ್ನುವ ಮೂಲಕ ಮುಖ್ಯಮಂತ್ರಿ ಬಣಕ್ಕೆ ಸೇರಿದ ಸಚಿವರುಗಳಿಗೆ ಸುರ್ಜೇವಾಲ ಸ್ಪಷ್ಟ ಸಂದೇಶ ನೀಡಿದರು.


ಸುರ್ಜೇವಾಲ ಹೇಳಿಕೆ ಬೆನ್ನಲ್ಲೇ ಶಿವಕುಮಾರ್ ಸುದ್ದಿಗಾರರೊಂದಿಗೆ ಮಾತನಾಡಿ, ನಾನು ಯಾವುದೇ ಹುದ್ದೆಗೆ ಅಂಟಿಕೊಂಡು ಕೂತಿಲ್ಲ. ಪಕ್ಷ ಏನು ಹೇಳುತ್ತದೋ ಅದನ್ನು ಮಾಡಿಕೊಂಡಿದ್ದೇನೆ ಎಂದಿದ್ದಾರೆ.

ಶಿವಕುಮಾರ್ ಅವರನ್ನು ಅಧ್ಯಕ್ಷ ಸ್ಥಾನದಿಂದ ಇಳಿಸಬೇಕೆಂದು ಸಿದ್ದರಾಮಯ್ಯ ಬಣಕ್ಕೆ ಸೇರಿದ ಸಚಿವ ರಾದ ಡಾ.ಜಿ.ಪರಮೇಶ್ವರ್, ಡಾ.ಎಚ್.ಸಿ. ಮಹದೇವಪ್ಪ, ಸತೀಶ್ ಜಾರಕಿಹೊಳಿ, ಕೆ.ಎನ್.ರಾಜಣ್ಣ ಅವರುಗಳು ಮುಖ್ಯಮಂತ್ರಿ ಹಾಗೂ ವರಿಷ್ಠರ ಮೇಲೆ ಒತ್ತಡ ಹೇರಿದ್ದರು. ಅಷ್ಟೇ ಅಲ್ಲದೆ, ಬಹಿರಂಗ ಹೇಳಿಕೆ ನೀಡಿ ಎಐಸಿಸಿ ನಾಯಕರ ಕೆಂಗಣ್ಣಿಗೂ ಗುರಿಯಾಗಿದ್ದರು. ಸುರ್ಜೇವಾಲ ಅವರು, ಶಿವಕುಮಾರ್ ಅವರನ್ನು ಸಮರ್ಥಿಸಿಕೊಳ್ಳುತ್ತಿದ್ದಂತೆ ಮಹದೇವಪ್ಪ, ಪರಮೇಶ್ವರ್ ಅವರ ಮನೆಗೆ ತೆರಳಿ ಒಂದು ಗಂಟೆಗೂ ಹೆಚ್ಚು ಕಾಲ ಗೌಪ್ಯ ಮಾತುಕತೆ ನಡೆಸಿದರು. ಈ ಬಗ್ಗೆ ಉಭಯ ನಾಯಕರು ಮಾಧ್ಯಮಕ್ಕೆ ಏನನ್ನೂ ತಿಳಿಸಲಿಲ್ಲ. ಮಾತುಕತೆಯ ವಿವರವೂ ಲಭ್ಯವಾಗಿಲ್ಲ.

ಎಲ್ಲರೂ ಬಾಯಿ ಮುಚ್ಚಿಕೊಂಡು ಇರಬೇಕು...

ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ದನಿ ಎತ್ತಿದವರಿಗೆ ಖರ್ಗೆ ವಾರ್ನಿಂಗ್

ಬೆಂಗಳೂರು, ಜ.17–ರಾಜ್ಯ ಕಾಂಗ್ರೆಸ್‌ನಲ್ಲಿ ಬಣ ರಾಜಕೀಯ ದಿನೇ ದಿನೆ ಹೆಚ್ಚಾಗುತ್ತಿದೆ. ಈ ನಡುವೆ ಕೆಪಿಸಿಸಿ ಅಧ್ಯಕ್ಷರನ್ನು ಬದಲಾವಣೆ ಮಾಡಬೇಕೆಂದು ಸತೀಶ್ ಜಾರಕಿಹೊಳಿ, ಕೆಎನ್ ರಾಜಣ್ಣ ಒತ್ತಾಯಿಸುತ್ತಿದ್ದಾರೆ. ಡಾ.ಜಿ ಪರಮೇಶ್ವರ್ ಕೂಡ ಇದೇ ಧಾಟಿಯಲ್ಲಿ ಮಾತನಾಡಿದ್ದಾರೆ. ಸದ್ಯ ನಾಯಕತ್ವ ಬದಲಾವಣೆಯ ಜಟಾಪಟಿ ಜೋರಾಗುತ್ತಿದ್ದಂತೆ ಎಚ್ಚೆತ್ತುಕೊಂಡಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಯಾರಿಗೆ ಏನು ಮಾಡಬೇಕು ಎಂಬುದು ಹೈಕಮಾಂಡ್‌ಗೆ ಗೊತ್ತಿದೆ. ಎಲ್ಲರೂ ಬಾಯಿ ಮುಚ್ಚಿಕೊಂಡು ಇರುವಂತೆ ಸೂಚನೆ ನೀಡಿದ್ದಾರೆ.



ರಾಜ್ಯ ಕಾಂಗ್ರೆಸ್‌ನಲ್ಲಿ ಗುಂಪುಗಾರಿಕೆ, ಡಿನ್ನರ್ ಮೀಟಿಂಗ್ ಹಾಗೂ ಕೆಪಿಸಿಸಿ ಅಧ್ಯಕ್ಷರ ಬದಲಾವಣೆಗೆ ಬಹಿರಂಗ ಆಗ್ರಹ ಕೇಳಿ ಬರುತ್ತಿರುವುದರಿಂದ ಬೇಸತ್ತಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಎಲ್ಲರೂ ಬಾಯಿ ಮುಚ್ಚಿಕೊಂಡು ಇರಬೇಕು ಎಂದು ರಾಜ್ಯದ ನಾಯಕರಿಗೆ ಖಡಕ್ ಎಚ್ಚರಿಕೆ ನೀಡಿದ್ದಾರೆ. ಹೈಕಮಾಂಡ್ ಅದರ ಪ್ರಕಾರ ನಡೆಯೋದಿಲ್ಲ ಅಲ್ವಾ, ಎಲ್ಲರೂ ಬಾಯಿ ಮುಚ್ಚಿಕೊಂಡು ಕೆಲಸ ಮಾಡಿ, ಯಾವಾಗ ಏನು ನಿರ್ಣಯ ತೆಗೆದುಕೊಳ್ಳಬೇಕು ಅದು ನಮಗೆ ಬಿಟ್ಟಿದ್ದು. ಇದೆಲ್ಲ ಮಾತಾಡುವುದು ಪ್ರಯೋಜನ ಆಗುವುದಿಲ್ಲ. ಇದೆಲ್ಲ ನೋಡಿಕೊಳ್ಳಲು ಹೈಕಮಾಂಡ್ ಇದೆ, ನಾವೆಲ್ಲ ಇದ್ದೇವೆ. ನಾವು ನಿರ್ಣಯ ತೆಗೆದುಕೊಳ್ಳುತ್ತೇವೆ ಎಂದರು. ಆಗ ಈಗ ಅಲ್ಲ, ಹೈಕಮಾಂಡ್ ಯಾವಾಗ ನಿರ್ಣಯ ತೆಗೆದುಕೊಳ್ಳಬೇಕು ಆಗ ತೆಗೆದುಕೊಳ್ಳುತ್ತದೆ. ಈ ಬೆಳವಣಿಗೆಯಿಂದ ಪಕ್ಷಕ್ಕೆ ದೊಡ್ಡ ಹಾನಿಯಾಗುತ್ತದೆ. ದಯವಿಟ್ಟು ರಾಜ್ಯದಲ್ಲಿ ಕಾಂಟ್ರವರ್ಸಿ ನಡೆಯಬಾರದು ಎಂದು ಖರ್ಗೆ ಖಡಕ್ ಎಚ್ಚರಿಕೆ ನೀಡಿದರು.ಆಗ ಸಿಎಂ ಚೇಂಜ್ ಆಗ್ತಾರೆ, ಈಗ ಡಿಸಿಎಂ ಚೇಂಜ್ ಆಗ್ತಾರೆ ಅದೆಲ್ಲ ಹೇಳಬೇಡಿ. ನಾನಿದ್ದೇನೆ, ರಾಹುಲ್ ಗಾಂಧಿ ಇದ್ದಾರೆ. ಯಾವಾಗ ಏನು ಮಾಡಬೇಕು ಅಂತ ನಮಗೆ ಟಾರ್ಗೆಟ್ ಇರುತ್ತದೆ. ಅದನ್ನು ನೋಡಿಕೊಂಡು ನಾವೇ ನಿರ್ಣಯ ಮಾಡ್ತೇವೆ ಎಂದು ಮಲ್ಲಿಕಾರ್ಜುನ ಖರ್ಗೆ ಖಡಕ್ ವಾರ್ನಿಂಗ್ ನೀಡಿದರು.

ಅಪೂರ್ಣಗೊಂಡಿರುವ ಅಂಬೇಡ್ಕರ್ ಭವನ ಕಾಮಗಾರಿ ಪೂರ್ಣಕ್ಕೆ ಆಗ್ರಹಿಸಿ ಎಎಪಿ ಪ್ರತಿಭಟನೆ

ಮೈಸೂರು, ಜ.17–ಮೈಸೂರಿನ ದಿವಾನ್ಸ್ ರಸ್ತೆ ಬಳಿ ಬಹಳ ವರ್ಷಗಳಿಂದ ಅರ್ಧಕ್ಕೆ ನಿಂತಿರುವ ಅಂಬೇಡ್ಕರ್ ಭವನದ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಆಗ್ರಹಿಸಿ ಮೈಸೂರು ಜಿಲ್ಲಾ ಆಮ್ ಆದ್ಮಿ ಪಕ್ಷ (ಎಎಪಿ)ವು ಜ.19ರಂದು ಮೈಸೂರಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಲು ನಿರ್ಧರಿಸಿದೆ. ನಗರದ ಖಾಸಗಿ ಹೋಟೆಲ್‌ನಲ್ಲಿ ಜಿಲ್ಲಾ ಆಮ್ ಆದ್ಮಿ ಪಕ್ಷದ ಅಧ್ಯಕ್ಷ ರಂಗಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆದ ಕೋರ್ ಕಮಿಟಿ ಸಭೆಯಲ್ಲಿ ಈ ಕುರಿತು ಚರ್ಚಿಸಲಾಯಿತು. ಬಹು ವರ್ಷಗಳಿಂದ ಅಂಬೇಡ್ಕರ್ ಭವನ ಕಾಮಗಾರಿ ಅಪೂರ್ಣಗೊಂಡಿರುವ ಕುರಿತು ತೀವ್ರ ಆಕ್ಷೇಪ ವ್ಯಕ್ತವಾಯಿತು. ಅಂದು ಬೆಳಗ್ಗೆ 10 ಗಂಟೆಗೆ ರಂಗಯ್ಯ ಅವರ ನೇತೃತ್ವದಲ್ಲಿ ಪುರಭವನದ ಮುಂಭಾಗವಿರುವ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಪ್ರತಿಭಟನಾ ಮೆರವಣಿಗೆ ಆರಂಭಿಸಲಾಗುವುದು ಎಂದು ಮೈಸೂರು ನಗರ ಎಎಪಿ ಅಧ್ಯಕ್ಷ ಸೋಮಶೇಖರ್ ತಿಳಿಸಿದ್ದಾರೆ. ಮೆರವಣಿಗೆಯು ಸಯ್ಯಾಜಿ ರಾವ್ ರಸ್ತೆ, ಚಿಕ್ಕ ಗಡಿಯಾರ ರಸ್ತೆ, ದೇವರಾಜ ಅರಸು ರಸ್ತೆ ಮೂಲಕ ದಿವಾನ್ಸ್ ರಸ್ತೆವರೆಗೆ ಸಾಗಿ ಅಪೂರ್ಣಗೊಂಡಿರುವ ಅಂಬೇಡ್ಕರ್ ಭವನದ ಮುಂದೆ ಕೆಲ ಕಾಲ ಪ್ರತಿಭಟನೆ ನಡೆಸಿ, ಸರ್ಕಾರದ ಗಮನ ಸೆಳೆಯುವ ಮೂಲಕ ಅಂಬೇಡ್ಕರ್ ಭವನದ ಕಾಮಗಾರಿ ಪೂರ್ಣಗೊಳಿಸುವಂತೆ ಆಗ್ರಹಿಸುವುದಾಗಿ ಅವರು ತಿಳಿಸಿದ್ದಾರೆ.


ಮಂಗಳೂರಿನ ಬ್ಯಾಂಕ್‌ನಲ್ಲಿ ಹಾಡಹಗಲೇ 10 ಕೋಟಿಗೂ ಹೆಚ್ಚು ಚಿನ್ನ, ನಗದು ದೋಚಿ ಕಾರಲ್ಲಿ ತಂಡ ಪರಾರಿ

ಮಂಗಳೂರು, ಜ.17– ಉಳ್ಳಾಲ ತಾಲೂಕಿನ ಕೆಸಿ ರೋಡ್‌ನಲ್ಲಿರುವ ಕೋಟೆಕಾರು ವ್ಯವಸಾಯ ಸೇವಾ ಸಹಕಾರ ಸಂಘದ ಶಾಖೆಗೆ ದರೋಡೆಕೋರರು ನುಗ್ಗಿ ಹಾಡಹಗಲೇ ಭಾರೀ ದರೋಡೆ ನಡೆಸಿರುವ ಘಟನೆ ಶುಕ್ರವಾರ ನಡೆದಿದೆ. ಬೀದರ್ ಬಳಿಕ ನಡೆದಿರುವ ಈ ದರೋಡೆ ಪ್ರಕರಣ ಇಡೀ ರಾಜ್ಯವನ್ನೇ ಬೆಚ್ಚಿ ಬೀಳಿಸಿದೆ.

ಶುಕ್ರವಾರ ಬೆಳಿಗ್ಗೆ 11.30ರಿಂದ ಮಧ್ಯಾಹ್ನ 12.30ರ ನಡುವೆ ಶಾಖೆಗೆ ನುಗ್ಗಿದ ಐವರು ಮುಸುಕುಧಾರಿಗಳು ಒಳಗಿದ್ದ ಐವರು ಸಿಬ್ಬಂದಿಗೆ ಬಂದೂಕು, ತಲವಾರು ತೋರಿಸಿ ಚಿನ್ನಾಭರಣ, ನಗದನ್ನು ದರೋಡೆಗೈದು ಮಂಗಳೂರಿನ ಕಡೆಗೆ ಕಾರಿನಲ್ಲಿ ಪರಾರಿಯಾಗಿದ್ದಾರೆ.

ಪ್ರಾಥಮಿಕ ಅಂದಾಜುಗಳ ಪ್ರಕಾರ ದರೋಡೆಕೋರರು 10 ಕೋಟಿಗೂ ಅಧಿಕ ಮೌಲ್ಯದ ಚಿನ್ನಾಭರಣ, 5 ಲಕ್ಷ ರೂ. ನಗದನ್ನು ಲೂಟಿ ಮಾಡಿದ್ದಾರೆ. ಇವರೆಲ್ಲ ಕಪ್ಪು ಬಣ್ಣದ ಫಿಯೆಟ್ ಕಾರಿನಲ್ಲಿ ಬ್ಯಾಂಕ್ ದರೋಡೆಗೆ ಬಂದಿದ್ದರು. ಬ್ಯಾಂಕ್‌ನಲ್ಲಿ ಇದ್ದ ಎಲ್ಲಾ ಚಿನ್ನ ಹಾಗೂ ನಗದನ್ನು ಪಡೆದು ಸ್ಥಳದಿಂದ ಪರಾರಿಯಾಗಿದ್ದಾರೆ. ದರೋಡೆ ಕೃತ್ಯದಿಂದ ಬ್ಯಾಂಕ್‌ನಲ್ಲಿ ಫೈಲ್‌ಗಳು, ಪೇಪರ್‌ಗಳೆಲ್ಲ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಕೆ.ಸಿ.ರೋಡ್ ಜಂಕ್ಷನ್‌ನಲ್ಲಿ ವಾಣಿಜ್ಯ ಕಟ್ಟಡದ ಮೊದಲ ಮಹಡಿಯಲ್ಲಿ ಈ ಬ್ಯಾಂಕ್ ಕಾರ್ಯಾಚರಿಸುತ್ತಿದೆ. ಘಟನೆ ಬಗ್ಗೆ ಮಾಹಿತಿ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಧಾವಿಸಿದ ಎಸಿಪಿ ಧನ್ಯ ನಾಯಕ್ ನೇತೃತ್ವದ ಪೊಲೀಸರ ತಂಡ ಸ್ಥಳ ಪರಿಶೀಲನೆ ನಡೆಸಿ ತನಿಖೆಯನ್ನು ಆರಂಭಿಸಿದೆ. ಎಲ್ಲಾ ಪೊಲೀಸ್ ಠಾಣೆಗಳಿಗೂ ಮಾಹಿತಿ ನೀಡಿದ್ದು, ಲೂಟಿಕೋರರಿಗಾಗಿ ಬಲೆ ಬೀಸಲಾಗಿದೆ. ಗುರುವಾರ ಬೀದರ್‌ನಲ್ಲಿ ಎಟಿಎಂಗೆ ಹಣ ತುಂಬುವಾಗ ಗನ್ ಶೂಟ್ ಮಾಡಿ ತಂಡವೊಂದು ಹಣದ ಬಾಕ್ಸ್‌ನೊಂದಿಗೆ ಪರಾರಿಯಾಗಿತ್ತು. ಇದಾದ ಒಂದು ದಿನದ ತರುವಾಯ ಇಂಥಹದ್ದೇ ಘಟನೆ ಉಳ್ಳಾಲದ ಕೋಟೆಕಾರಿನಲ್ಲಿ ನಡೆದಿದೆ.





ಪೊಲೀಸ್ ಅಧಿಕಾರಿಗಳ ಜೊತೆ ಸಿದ್ದರಾಮಯ್ಯ ತುರ್ತು ಸಭೆ: ಕೋಟೆ ಕಾರು ಉಲ್ಲಾಳದ ಸಹಕಾರಿ ಬ್ಯಾಂಕ್ ದರೋಡೆ ಪ್ರಕರಣದ ಹಿನ್ನೆಲೆಯಲ್ಲಿ ಮಂಗಳೂರಿನಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳ ಜೊತೆ ಸಿಎಂ ಸಿದ್ದರಾಮಯ್ಯ ತುರ್ತು ಸಭೆ ನಡೆಸಿದ್ದು, ಶೀಘ್ರ ಆರೋಪಿಗಳ ಪತ್ತೆಗೆ ಸೂಚನೆ ನೀಡಿದ್ದಾರೆ. ಮಂಗಳೂರಿನಲ್ಲೇ ಇರುವ ಮುಖ್ಯಮಂತ್ರಿಗಳು ವೈದ್ಯಕೀಯ ಶಿಕ್ಷಣ ಇಲಾಖೆಯ ಕಾರ್ಯಕ್ರಮ ಮುಗಿಯುತ್ತಿದ್ದಂತೆ ಪಶ್ಚಿಮ ರೇಂಜ್‌ನ ಐಜಿಪಿ ಅಮಿತ್, ಪೊಲೀಸ್ ಆಯುಕ್ತ ಸಿಂಗ್, ಅನುಪಮ್ ಅಗರವಾಲ್, ಎಸ್ಪಿ ಯತೀಶ್, ಡಿವೈಎಸ್‌ಪಿ ಸೇರಿ ಹಿರಿಯ ಅಧಿಕಾರಿಗಳ ಜೊತೆ ಸಭೆ ನಡೆಸಿದರು. ಘಟನೆಯ ಕುರಿತಂತೆ ಸಮಗ್ರ ಮಾಹಿತಿ ಪಡೆದ ಸಿಎಂ, ನೀವೆಲ್ಲಾ ಇದ್ದು ಯಾಕೆ ಹೀಗಾಯ್ತು? ಆರೋಪಿಗಳು ಸಲೀಸಾಗಿ ತಪ್ಪಿಸಿಕೊಂಡು ಹೋಗಿದ್ದು ಹೇಗೆ? ಎಷ್ಟು ಟೋಲ್‌ಗಳನ್ನು ದಾಟಿ ಹೋಗಿದ್ದಾರೆ. ನೀವು ಟೋಲ್‌ಗಳನ್ನು ಏಕೆ ಟೈಟ್ ಮಾಡಲಿಲ್ಲ ಎಂದು ಗರಂ ಆಗಿ ಪ್ರಶ್ನಿಸಿದರು. ದರೋಡೆ ವೇಳೆ ಸಹಕಾರಿ ಬ್ಯಾಂಕ್‌ನಲ್ಲಿ ಭದ್ರತಾ ಸಿಬ್ಬಂದಿ ಇರಲಿಲ್ಲ. ಐದಾರು ಬ್ಯಾಂಕ್ ಸಿಬ್ಬಂದಿ ಮಾತ್ರ ಇದ್ದರು. ಆರೋಪಿಗಳು ಕನ್ನಡ ಮತ್ತು ಹಿಂದಿಯಲ್ಲಿ ಮಾತಾಡಿರುವುದು ದಾಖಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ಮುಖ್ಯಮಂತ್ರಿಗಳಿಗೆ ಈ ವೇಳೆ ಮಾಹಿತಿ ನೀಡಿದರು. ಎಲ್ಲಾ ಟೋಲ್‌ಗಳಲ್ಲೂ ಬಿಗಿ ತಪಾಸಣೆಯನ್ನು ನಡೆಸಬೇಕು. ನಾಲ್ಕು ಜಿಲ್ಲೆಗಳ ವ್ಯಾಪ್ತಿಯಲ್ಲಿ ನಾಕಾಬಂಧಿ ಹಾಕಿ ಆದಷ್ಟು ಬೇಗ ಆರೋಪಿಗಳನ್ನು ಬಂಧಿಸಿ, ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿಗಳು ಸೂಚನೆ ನೀಡಿದರು.

ಬಿಪಿಎಲ್ ಪಡಿತರ ಕುಟುಂಬ ಸದಸ್ಯರಿಗೆ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ

● ಎಪಿಎಲ್ ಪಡಿತರದಾರರಿಗೂ ರಿಯಾಯಿತಿ ದರದ ಆರೋಗ್ಯ ಸೇವೆ ● ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶ

ಬೆಂಗಳೂರು, ಜ.17(ಕೆಎಂಶಿ)– ಬಿಪಿಎಲ್ ಪಡಿತರದಾರರ ಕುಟುಂಬದ ಸದಸ್ಯರಿಗೆ ಇನ್ನು ಮುಂದೆ ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ ಉಚಿತ ಆರೋಗ್ಯ ಸೇವೆ ಕಲ್ಪಿಸುವಂತೆ ಆದೇಶ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಪಡಿತರ ಚೀಟಿ ಇದ್ದವರಿಗೆ ಎಲ್ಲಾ ರೀತಿಯ ಆರೋಗ್ಯ ಸೇವೆಯನ್ನು ಉಚಿತವಾಗಿ ನೀಡಬೇಕೆನ್ನುವ ಸೂಚನೆಯನ್ನು ಈಗಾಗಲೇ ಹೊರಡಿಸಲಾಗಿದೆ. ಎಪಿಎಲ್ ಪಡಿತರದಾರರಿಗೂ ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ ರಿಯಾಯಿತಿ ದರದಲ್ಲಿ ಆರೋಗ್ಯ ಸೇವೆ ಕಲ್ಪಿಸುವಂತೆ ಸೂಚಿಸಲಾಗಿದೆ. ಅವರ ಕುಟುಂಬದ ಆರ್ಥಿಕ ಸಾಮರ್ಥ್ಯ ಗಮನದಲ್ಲಿಟ್ಟುಕೊಂಡು ದರ ನಿಗದಿ ಮಾಡಬೇಕು ಎಂದರು.



ಬಡವರಿಗೂ ದೊಡ್ಡ ಕಾಯಿಲೆಗಳು ಬರುತ್ತವೆ. ಕಿಡ್ನಿ ಕಸಿ ಚಿಕಿತ್ಸೆಗಾಗಿ ಐದು ಸಾವಿರ ರೋಗಿಗಳು ಸರದಿಯಲ್ಲಿದ್ದಾರೆ. ದಾನಿಗಳು ದೊರೆತರೆ ನಿತ್ಯ ಕಿಡ್ನಿ ಕಸಿ ಮಾಡುವ ನುರಿತ ವೈದ್ಯರ ತಂಡ ನಮ್ಮಲ್ಲಿದೆ ಎಂದರು.

ಜಿಲ್ಲೆಗೊಂದು ಸರ್ಕಾರಿ ವೈದ್ಯಕೀಯ ಕಾಲೇಜು ಪ್ರಾರಂಭಿಸಬೇಕೆಂಬುದು ನಮ್ಮ ಗುರಿ. ಖಾಸಗಿ ವೈದ್ಯಕೀಯ ಆಸ್ಪತ್ರೆಗಳಿದ್ದರೂ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ಹಂತ ಹಂತವಾಗಿ ಎಲ್ಲೆಡೆ ತೆರೆಯಲಾಗುವುದು. ಖಾಸಗಿ ಆಸ್ಪತ್ರೆಗಳ ಮಾದರಿಯಲ್ಲಿ ಶುಚಿತ್ವ, ನಿರ್ವಹಣೆ ಕಾಪಾಡುವ ಜೊತೆಗೆ ಗುಣಮಟ್ಟದ ಚಿಕಿತ್ಸಾ ಸೌಲಭ್ಯ ಸರ್ಕಾರಿ ಆಸ್ಪತ್ರೆಗಳಲ್ಲೂ ಸಿಗುವಂತಾಗಬೇಕು.

ಶ್ರೀಮಂತರು, ನಮ್ಮಂತಹ ರಾಜಕಾರಣಿಗಳು ಸರ್ಕಾರಿ ಆಸ್ಪತ್ರೆಗೆ ಬರುವಂತಾಗಬೇಕೆಂಬ ನಿಟ್ಟಿನಲ್ಲಿ ಕಾರ್ಯಕ್ರಮ ರೂಪಿಸಿ ಎಂದು ಸೂಚಿಸಿರುವುದಾಗಿ ರಾಜೀವ್ ಗಾಂಧಿ ಆರೋಗ್ಯ ವಿವಿಯ ಪ್ರಾದೇಶಿಕ ಕಚೇರಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡುತ್ತಾ ತಿಳಿಸಿದರು. ಸಮಾಜದ ಎಲ್ಲ ವರ್ಗಕ್ಕೂ ಗುಣಮಟ್ಟದ ವೈದ್ಯಕೀಯ ಸೇವೆ ದೊರಕಿಸುವ ದಿಕ್ಕಿನಲ್ಲಿ ಸರ್ಕಾರ ಕಾರ್ಯಕ್ರಮಗಳನ್ನು ರೂಪಿಸುತ್ತಿದೆ. ರಾಜೀವ್ ಗಾಂಧಿ ವಿಶ್ವವಿದ್ಯಾಲಯ, ಏಷ್ಯಾದ ಅತ್ಯಂತ ದೊಡ್ಡ ಆರೋಗ್ಯ ವಿವಿಯಾಗಿದ್ದು, ಮೂರೂವರೆ ಲಕ್ಷ ವೈದ್ಯ ವಿದ್ಯಾರ್ಥಿಗಳು ಗುಣಮಟ್ಟದ ಶಿಕ್ಷಣ ಪಡೆಯುತ್ತಿದ್ದಾರೆ.

ಆರೋಗ್ಯ ಸೇವೆ ಜನರಿಗೆ ಸರಳವಾಗಿ ಸಿಗುವಲ್ಲಿ ಸಂಶೋಧನೆಗಳನ್ನು ಹೆಚ್ಚೆಚ್ಚು ನಡೆಸಬೇಕು, ದೇಶದ ಅತ್ಯುತ್ತಮ ಆರೋಗ್ಯ ಸೇವೆ ಬಡವರಿಗೂ ಸುಲಭವಾಗಿ ಸಿಗುವಂತೆ ಮಾಡಬೇಕು ಎಂದು ಕರೆ ನೀಡಿದರು.

ವೈದ್ಯಕೀಯ ಡಿಪ್ಲೊಮಾ ಮತ್ತು ಇತರೆ ಕೋರ್ಸ್‌ಗಳ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಕೌಶಲ್ಯ ತರಬೇತಿ ನೀಡಲಾಗುತ್ತಿದೆ, ವೈದ್ಯ ವಿಜ್ಞಾನ ಪದವೀಧರರೂ ಯುವನಿಧಿಗೆ ಅರ್ಹತೆ ಗಳಿಸಿದ್ದಾರೆ.

'ನಟನ'ದಲ್ಲಿ 'ನೀನಾನಾದ್ರೆ ನಾನೀನೇನಾ' ನಾಟಕ ಪ್ರದರ್ಶನ

ಮೈಸೂರು, ಜ. 17– ಮೈಸೂರಿನ ಮತ್ತು ಸುತ್ತಮುತ್ತಲಿನ ಸದಭಿರುಚಿಯ, ಸಹೃದಯ ರಂಗಾಸಕ್ತರಿಗಾಗಿ ನಟನವು ವಾರಾಂತ್ಯ ರಂಗ ಪ್ರದರ್ಶನಗಳನ್ನು ನಡೆಸುತ್ತಿದ್ದು, ಅದರ ಅಂಗವಾಗಿ ಜ. 19 ರಂದು ಮಧ್ಯಾಹ್ನ 3ಕ್ಕೆ ಹಾಗೂ ಸಂಜೆ 6.30ಕ್ಕೆ ರಾಮಕೃಷ್ಣ ನಗರದಲ್ಲಿರುವ ನಟನ ರಂಗಶಾಲೆಯಲ್ಲಿ, ವಾಸ್ಪ್ ಥಿಯೇಟರ್ ಬೆಂಗಳೂರು ಅಭಿನಯಿಸುವ ಹಾಸ್ಯ ನಾಟಕ 'ನೀನಾನಾದ್ರೆ ನಾನೀನೇನಾ' ಪ್ರದರ್ಶನಗೊಳ್ಳಲಿದೆ. ನಾಟಕದ ರಚನೆ ಎಸ್.ಸುರೇಂದ್ರನಾಥ್ ಹಾಗೂ ನಿರ್ದೇಶನ ವಿನಯ್ ಶಾಸ್ತ್ರಿ ಅವರದ್ದು. ಮಾಹಿತಿಗೆ 7259537777, 9480468327, 9845595505 ಸಂಪರ್ಕಿಸಬಹುದು.


ಚಾಮುಂಡಿಬೆಟ್ಟದ 'ಪ್ರಸಾದ'ಕ್ಕೆ ಹೊಸ ಡಿಪಿಆರ್

ಕೇಂದ್ರ ಪ್ರವಾಸೋದ್ಯಮ ಇಲಾಖೆ ಅನುಮೋದಿಸಿದರೆ ಯೋಜನೆ ಜಾರಿ

ಮೈಸೂರು, ಜ.17–ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಸ್ಥಾನ ಹಾಗೂ ಸುತ್ತಮುತ್ತಲಿನ ಪ್ರದೇಶವನ್ನು ಕೇಂದ್ರದ 'ಪ್ರಸಾದ್' ಯೋಜನೆಯಡಿ ಅಭಿವೃದ್ಧಿಪಡಿಸಲು ಪರಿಷ್ಕೃತ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಲ್ಲಿಸಲಾಗಿದೆ.

ರಾಜ್ಯ ಪ್ರವಾಸೋದ್ಯಮ ಇಲಾಖೆಯಿಂದ ಕೇಂದ್ರ ಪ್ರವಾಸೋದ್ಯಮ ಇಲಾಖೆಗೆ ಡಿಪಿಆರ್ ಸಲ್ಲಿಕೆಯಾಗಿದ್ದು, ಅನುಮೋದನೆ ದೊರೆಯುತ್ತಿದ್ದಂತೆಯೇ ರಾಜ್ಯ ಸರ್ಕಾರಕ್ಕೆ ಅನುದಾನ ಬಿಡುಗಡೆಯಾಗುವ ನಿರೀಕ್ಷೆ ಇದೆ.

ಈ ನಡುವೆ, ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಸಂಬಂಧಿಸಿದ ಒಡೆತನ, ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ರಚನೆಯ ವಿಷಯದಲ್ಲಿ ಸರ್ಕಾರ ಹಾಗೂ ಮೈಸೂರು ರಾಜಮನೆತನದವರ ನಡುವೆ ಉಂಟಾಗಿರುವ ವ್ಯಾಜ್ಯವು 'ಪ್ರಸಾದ್' ಯೋಜನೆ ಅನುಷ್ಠಾನಕ್ಕೆ ಅಡ್ಡಿಯಾಗಿದೆ. ಮೈಸೂರು ರಾಜವಂಶಸ್ಥರೂ ಆದ ಹಾಲಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಯೋಜನೆಗೆ ಸಮ್ಮತಿ ನೀಡದಿರುವುದು ಅಧಿಕಾರಿಗಳ ತಲೆನೋವಿಗೂ ಕಾರಣವಾಗಿದೆ. ಪರಿಣಾಮ, ಬಹಳ ವರ್ಷಗಳಿಂದಲೂ ಚರ್ಚೆಯಾಗುತ್ತಿರುವ ಯೋಜನೆಯ ಕಾಮಗಾರಿ ಯಾವಾಗ ಆರಂಭವಾಗುತ್ತದೆ ಎನ್ನುವುದು ಇನ್ನೂ ಸ್ಪಷ್ಟವಾಗಿಲ್ಲ. ಈ ನಡುವೆ, ಕೇಂದ್ರದ ಸೂಚನೆಯಂತೆ ಅಧಿಕಾರಿಗಳು ಡಿಪಿಆರ್ ಸಲ್ಲಿಸಿದ್ದಾರೆ.



ಪರಿಷ್ಕೃತ ಡಿಪಿಆರ್‌ನಲ್ಲಿ ಏನಿದೆ: ಕೇಂದ್ರ ಪ್ರವಾಸೋದ್ಯಮ ಇಲಾಖೆಯಿಂದ ಕೈಗೊಳ್ಳಲಾಗಿರುವ 'ಪ್ರಸಾದ್' (ಪಿಲಿಗ್ರಿಮೇಜ್ ರಿಜುವೆನೇಷನ್ ಅಂಡ್ ಸ್ಪಿರಿಚುಯಲ್ ಆಗ್‌ಮೆಂಟೇಷನ್ ಡ್ರೈವ್) ಯೋಜನೆಯಡಿ 45.71 ಕೋಟಿ ಅನುದಾನ ದೊರೆಯಲಿದೆ ಎಂದು ತಿಳಿಸಲಾಗಿದೆ. ಈ ಕಾರಣದಿಂದ ಕ್ರಿಯಾಯೋಜನೆ ಸಿದ್ಧಪಡಿಸಲಾಗಿದ್ದು, ಸಂಬಂಧಿಸಿದ ಕಾಮಗಾರಿಗಳನ್ನು ಅಂತಿಮಗೊಳಿಸಲಾಗಿದೆ. ಬೆಟ್ಟಕ್ಕೆ ಬರುವ ಭಕ್ತರು ಅಥವಾ ಪ್ರವಾಸಿಗರಿಗೆ ಸೌಕರ್ಯಗಳನ್ನು ಒದಗಿಸುವ ಉದ್ದೇಶ ಹೊಂದಲಾಗಿದೆ.

ಯೋಜನೆ ಉದ್ದೇಶ: ಪ್ರಸಿದ್ಧ ಯಾತ್ರಾ ಸ್ಥಳ, ಧಾರ್ಮಿಕ ಕ್ಷೇತ್ರ ಮತ್ತು ಪ್ರವಾಸಿ ತಾಣಗಳನ್ನು ಯೋಜನಾಬದ್ಧ, ಸುಸ್ಥಿರ ಹಾಗೂ ಸಮಗ್ರ ರೀತಿಯಲ್ಲಿ ಅಭಿವೃದ್ಧಿಪಡಿಸುವುದು ಈ ಯೋಜನೆಯ ಉದ್ದೇಶವಾಗಿದೆ. ಬೆಟ್ಟದಲ್ಲಿ ಒಟ್ಟು 6 ಸ್ಥಳಗಳ ಅಭಿವೃದ್ಧಿಗೆ ಉದ್ದೇಶಿಸಲಾಗಿದೆ.

> "ರಾಜ್ಯ ಪ್ರವಾಸೋದ್ಯಮ ಇಲಾಖೆಯ ಮೂಲಕ ಪ್ರಸಾದ್ ಯೋಜನೆಯ ಅಂತಿಮ ಡಿಪಿಆರ್ ಕೇಂದ್ರಕ್ಕೆ ಸಲ್ಲಿಕೆಯಾಗಿದೆ. ಅನುಮೋದನೆ ಬಳಿಕ ಅನುದಾನ ಬಿಡುಗಡೆಯಾದರೆ ಟೆಂಡರ್ ಪ್ರಕ್ರಿಯೆ ನಡೆಯಲಿದೆ. –ಎಂ.ಕೆ.ಸವಿತಾ, ಜಂಟಿ ನಿರ್ದೇಶಕಿ ಪ್ರವಾಸೋದ್ಯಮ ಇಲಾಖೆ

ಚಾಮುಂಡೇಶ್ವರಿ ದೇವಸ್ಥಾನದ ಆವರಣದಲ್ಲಿ ಭಕ್ತರಿಗೆ ಸೌಲಭ್ಯಗಳು, ಮಹಿಷಾಸುರ ಪ್ರತಿಮೆ ಸುತ್ತ ಆಕರ್ಷಕ ಪ್ಲಾಜಾ, ದೇವಿಕೆರೆ, ನಂದಿ ಪ್ರತಿಮೆ, ಚಾಮುಂಡಿಬೆಟ್ಟದ ಪಾದ ಹಾಗೂ ವೀಕ್ಷಣಾ ಪ್ರದೇಶ (ವ್ಯೂ ಪಾಯಿಂಟ್) ಗಳಲ್ಲಿನ ಅಭಿವೃದ್ಧಿಗೆ ಪ್ರತ್ಯೇಕ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು. ಭಕ್ತರ ಸರದಿ ಸಾಲು, ದೇಗುಲದ ಮುಂಭಾಗದ ಪ್ರಾಂಗಣ, ಶೌಚಾಲಯಗಳ ಪರಿಸ್ಥಿತಿ ಸುಧಾರಿಸಲಿದೆ ಎಂದು ಯೋಜನಾ ವರದಿಯಲ್ಲಿ ತಿಳಿಸಲಾಗಿದೆ.

ಡಿಪಿಆರ್ ಪ್ರಕಾರ ಮಹಿಷಾಸುರ ಪ್ರತಿಮೆ ಸುತ್ತಲಿನ ಪ್ಲಾಜಾದಲ್ಲಿ ಕಾರಂಜಿ ನಿರ್ಮಾಣ ವಿದ್ಯುದ್ದೀಪಾಲಂಕಾರ. ಪೊಲೀಸ್ ಬೂತ್ ಮಾಹಿತಿ ಕೇಂದ್ರ ಕಂಟ್ರೋಲ್ ರೂಂ ಹಾಗೂ ಭಕ್ತರಿಗಾಗಿ ಆಸನ ವ್ಯವಸ್ಥೆ, ಕುಡಿಯುವ ನೀರಿನ ಘಟಕ, ಕಲ್ಲಿನ ಪ್ರವೇಶ ದ್ವಾರ, ನಾಮಫಲಕಗಳ ಅಳವಡಿಕೆ. ದೇವಿಕೆರೆಯಲ್ಲಿ ಕಲ್ಲಿನ ಮಂಟಪ, ಪ್ರವೇಶ ದ್ವಾರ, ಉದ್ಯಾನ ಅಭಿವೃದ್ಧಿ, ಮೆಟ್ಟಿಲುಗಳ ನವೀಕರಣ ಹಾಗೂ ಶೌಚಾಲಯ ನಿರ್ಮಾಣಕ್ಕೆ ಯೋಜಿಸಲಾಗಿದೆ. ನಂದಿ ಪ್ರತಿಮೆ ಬಳಿ ಸರದಿ ಸಾಲಿನ ವ್ಯವಸ್ಥೆ, ಕುಡಿಯುವ ನೀರು ಹಾಗೂ ಆಸನಗಳ ವ್ಯವಸ್ಥೆ, ನೆಲಹಾಸು ಅಭಿವೃದ್ಧಿ ಮೂಲಕ ಸೌಂದರ್ಯೀಕರಣ ಮಾಡಲಾಗುವುದು.

ಇದರ ಜೊತೆಗೆ ಪಾದದಲ್ಲಿರುವ ಮೆಟ್ಟಿಲುಗಳ ಬದಿಯಲ್ಲಿ ಕಂಬಿಗಳ ಅಳವಡಿಕೆ ನೀರಿನ ಕೊಳವೆಗಳ ಅಳವಡಿಕೆ ಜೊತೆಗೆ ಸುತ್ತಲಿನ ಪ್ರದೇಶದ ಅಭಿವೃದ್ಧಿ. ಅಲ್ಲಲ್ಲಿ ಭದ್ರತೆ ಹೆಚ್ಚಿಸುವ ಉದ್ದೇಶದಿಂದ ಸಿ.ಸಿ ಟಿವಿ ಕ್ಯಾಮೆರಾಗಳ ಅಳವಡಿಕೆ ಮೆಟ್ಟಿಲುಗಳನ್ನು ಹತ್ತಿಕೊಂಡು ಹೋಗಿ ದೇವಿಯ ದರ್ಶನ ಪಡೆಯಲು ಭಕ್ತರಿಗೆ ಅವಕಾಶವಿದ್ದು, ವಿಶ್ರಾಂತಿ ಪಡೆಯಲು ಅಲ್ಲಲ್ಲಿ ಆಸನಗಳ ನಿರ್ಮಾಣ, ಎರಡೂ ಬದಿಗಳಲ್ಲಿ ರೇಲಿಂಗ್‌ಗಳ ನಿರ್ಮಾಣ, ಮಳೆಯಿಂದ ರಕ್ಷಣೆ ಪಡೆಯಲು ತಂಗುದಾಣಗಳ ನಿರ್ಮಿಸಲಾಗುತ್ತದೆ. ಕುಡಿಯುವ ನೀರಿನ ವ್ಯವಸ್ಥೆ ಮೆಟ್ಟಿಲುಗಳಲ್ಲಿ ಅಲ್ಲಲ್ಲಿ ಮಾಹಿತಿ ಫಲಕಗಳನ್ನು ಹಾಕಲಾಗುತ್ತದೆ. ದೇವಸ್ಥಾನದಿಂದ ಪ್ರವೇಶ ದ್ವಾರದವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣಕ್ಕೂ ಯೋಜಿಸಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಮೂತ್ರಪಿಂಡ (ಕಿಡ್ನಿ) ಕಾಯಿಲೆ, ಸಂಧಿವಾತ, ಮಂಡಿ ನೋವು, ಕೀಲು ನೋವು ಮತ್ತು ಆರೋಗ್ಯಾಯುಷ್ಯ ಆರೋಗ್ಯ ವರ್ಧಕ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ಗಂಟೆಗೆ.

■ **ದಿ ಆಕ್ಸ್‌ಫರ್ಡ್ ಸ್ಕೂಲ್:** ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ದಿ ಆಕ್ಸ್‌ಫರ್ಡ್ ಸ್ಕೂಲ್, ಮೊಗರಹಳ್ಳಿ, ಬೆಳಗ್ಗೆ 9 ರಿಂದ.

■ **ಫೀನಿಕ್ಸ್ ಇಂಟರ್‌ನ್ಯಾಷನಲ್ ಅಕಾಡೆಮಿ:** ಮೈಸೂರು ಅರಮನೆ ಆಸ್ಥಾನ ಕಲಾವಿದರಾಗಿದ್ದ ಖ್ಯಾತ ವರ್ಣಚಿತ್ರಕಾರ ದಿವಂಗತ ಎಸ್.ಆರ್. ಅಯ್ಯಂಗಾರ್ ಮತ್ತು ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿ ಸಹಾಯಕ ಸಂಶೋಧಕರಾಗಿದ್ದ ದಿವಂಗತ ಎಚ್.ಎಸ್.ಫಾಟಕ್ ಅವರ ಅಪ್ರತಿಮ ಕಲಾಕೃತಿಗಳ ಪ್ರದರ್ಶನ, ಉದ್ಘಾಟನೆ:ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ರಾಮ್‌ಸನ್ಸ್ ಕಲಾ ಪ್ರತಿಷ್ಠಾನದ ಕಾರ್ಯದರ್ಶಿ ಆರ್.ಜಿ. ಸಿಂಗ್, ಸ್ಥಳ: ಫೀನಿಕ್ಸ್ ಇಂಟರ್‌ನ್ಯಾಷನಲ್ ಅಕಾಡೆಮಿ, ಕೆ.ಆರ್.ಎಸ್. ರಸ್ತೆ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ:** 105ನೇ ವಾರ್ಷಿಕ ಘಟಿಕೋತ್ಸವ, ಅಧ್ಯಕ್ಷತೆ: ರಾಜ್ಯಪಾಲರು ಹಾಗೂ ಕುಲಾಧಿಪತಿಗಳಾದ ಥಾವರ್‌ಚಂದ್ ಗೆಹ್ಲೋಟ್, ಘಟಿಕೋತ್ಸವ ಭಾಷಣ: ನವದೆಹಲಿ ಆಲ್ ಇಂಡಿಯಾ ಇನ್ಸ್‌ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್‌ನ ಬಯೋಫಿಸಿಕ್ಸ್ ವಿಭಾಗದ ಜೈವಿಕ ತಂತ್ರಜ್ಞಾನ ಸಂಶೋಧನಾ ಪ್ರಾಧ್ಯಾಪಕ ಡಾ.ಟಿ.ಪಿ.ಸಿಂಗ್, ಉಪಸ್ಥಿತರು: ಉನ್ನತ ಶಿಕ್ಷಣ ಸಚಿವರು ಹಾಗೂ ಮೈಸೂರು ವಿವಿ ಸಮ ಕುಲಾಧಿಪತಿ ಡಾ. ಎಂ.ಸಿ. ಸುಧಾಕರ್, ಸ್ಥಳ: ವಿಶ್ವವಿದ್ಯಾನಿಲಯ ಕ್ರಾಫರ್ಡ್ ಭವನ, ಬೆಳಗ್ಗೆ 11ಕ್ಕೆ.

■ **ಅಖಿಲ ಕರ್ನಾಟಕ ಒಕ್ಕಲಿಗರ ಸಂಘ:** ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಗಳ 80ನೇ ಜಯಂತ್ಯೋತ್ಸವ ಕಾರ್ಯಕ್ರಮ, ಸಾನ್ನಿಧ್ಯ: ಪ್ರೊ.ಭಾಷ್ಯಂ ಸ್ವಾಮೀಜಿ, ಪುಷ್ಪಾರ್ಚನೆ: ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮುಖ್ಯ ಅತಿಥಿಗಳು: ಶಾಸಕ ಹರೀಶ್‌ಗೌಡ, ಯಶಸ್ವಿ ಸೋಮಶೇಖರ್, ಸಿ.ಜಿ. ಗಂಗಾಧರ್, ಡಾ.ಹೆಚ್.ಸಿ. ಕೃಷ್ಣಕುಮಾರ್, ಡಾ.ಸಿ.ವೈ.ಶಿವಲಿಂಗೇಗೌಡ, ಡಾ. ಎಂ.ಬಿ.ಮಂಜೇಗೌಡ, ಸಿ.ರಮೇಶ್, ಕೆ.ವಿ.ಶ್ರೀಧರ್, ಮರಿಸ್ವಾಮಿ, ಸ್ಥಳ: ಅಗ್ರಹಾರ ವೃತ್ತ, ಬೆಳಗ್ಗೆ 11.30ಕ್ಕೆ.

■ **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್:** ಬ್ರೈಡಲ್ ಜ್ಯೂವೆಲ್ಲರಿ ಶೋ, ಸ್ಥಳ: ಮೈಸೂರು ಶೋ ರೂಮ್, ಬಿ.ಎನ್. ರಸ್ತೆ, ಮಧ್ಯಾಹ್ನ 12ಕ್ಕೆ.

■ **ಅಂತಾರಾಷ್ಟ್ರೀಯ ಲಿಂಗಾಯತ್ ಯೂತ್ ಫೋರಂ:** ವೀರಶೈವ ಲಿಂಗಾಯತ ಗ್ಲೋಬಲ್ ಬಿಸಿನೆಸ್ ಕಾನ್‌ಕ್ಲೇವ್–2025, ಬೆಳಗ್ಗೆ 10.30 ರಿಂದ 2ನೇ ದಿನದ ಸೆಮಿನಾರ್, ಹೆಲ್ತ್ ಸಮಿತ್–ವೈದ್ಯಕೀಯ ನಾಯಕತ್ವ, ಅಧ್ಯಕ್ಷತೆ: ಎಂ.ಎಸ್.ರಾಮಯ್ಯ ಮೆಮೋರಿಯಲ್ ಆಸ್ಪತ್ರೆ ಅಧ್ಯಕ್ಷ ಡಾ. ನಾಗೇಂದ್ರಸ್ವಾಮಿ, ಮುಖ್ಯ ಅತಿಥಿಗಳು: ಜೆಎಸ್‌ಎಸ್ ಕುಲಪತಿ ಡಾ. ಬಸವನಗೌಡಪ್ಪ ಮುಖ್ಯ ಅತಿಥಿಗಳು: ಫೋರ್ಟಿಸ್ ಗ್ರೂಪ್ ಆಫ್ ಹಾಸ್ಪಿಟಲ್ಸ್ ಛೇರ್ಮನ್ ಡಾ. ವಿವೇಕ್ ಜವಳಿ, ಮುಖ್ಯ ಅತಿಥಿಗಳು: ಬೀದರ್ ಜಿಲ್ಲಾ ಪಂಚಾಯತ್ ಸಿಇಓ ಡಾ.ಗಿರೀಶ್ ದಿಲೀಪ್ ಬದೋಳೆ, ಕೆಪಿಎಸ್‌ಸಿ ಸದಸ್ಯ ಡಾ.ಎಚ್.ಎಸ್. ನರೇಂದ್ರ; ಮಧ್ಯಾಹ್ನ 2.30 ರಿಂದ ಸಂಜೆ 4 ರವರೆಗೆ ಪ್ಯಾನಲಿಸ್ಟ್‌ಗಳು: ಡಿಆರ್‌ಸಿ ಸಿನಿಮಾಸ್ ಮ್ಯಾನೇಜಿಂಗ್ ಪಾರ್ಟನರ್ ಶ್ರೀಮತಿ ವೈಶಾಲಿ ಹನುಮಂತ್, ಆಕೃತಿ ಇಕೋ ಫ್ರೆಂಡ್ಲಿ ಎಂಟರ್‌ಪ್ರೈಸಸ್ ಮಾಲೀಕರಾದ ಶ್ರೀಮತಿ ವರ್ಷಾ ಶ್ರೀಕಂಠಸ್ವಾಮಿ, ಎಸ್‌ಎನ್‌ಟಿ ಗ್ರೂಪ್ಸ್ ಮಾಲೀಕ ಶ್ರೀ ತೀರ್ಥ ಎಸ್. ಸ್ವಾಮಿ, ಸಂಜೆ 4 ರಿಂದ ವಿಆರ್‌ಎಲ್ ವ್ಯವಸ್ಥಾಪಕ ನಿರ್ದೇಶಕ ಡಾ. ಆನಂದ್ ಸಂಕೇಶ್ವರ್ ಅವರಿಂದ ಕ್ರಾಂತಿಕಾರಿ ಭವಿಷ್ಯ : ಆನಂದ್ ಸಂಕೇಶ್ವರ್ ಅವರ ದೃಷ್ಟಿ ಕುರಿತು ಉಪನ್ಯಾಸ, ಸಂಜೆ 7 ರಿಂದ ಖ್ಯಾತ ಹಿನ್ನೆಲೆ ಗಾಯಕರಾದ ರಾಜೇಶ್ ಕೃಷ್ಣನ್, ಶ್ರೀಮತಿ ಅರ್ಚನಾ ಉಡುಪ ಅವರಿಂದ ಸಂಗೀತ ರಸಸಂಜೆ, ಮುಖ್ಯ ಅತಿಥಿಗಳು: ಶಾಸಕರಾದ ಟಿ.ಎಸ್.ಶ್ರೀವತ್ಸ, ಕೆ.ಹರೀಶ್‌ಗೌಡ ಸ್ಥಳ: ಮಹಾರಾಜ ಕಾಲೇಜು ಮೈದಾನ.

■ **ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ:** 7, 8, 9ನೇ ವಾರ್ಷಿಕ ಘಟಿಕೋತ್ಸವ ಸಮಾರಂಭ, ಘಟಿಕೋತ್ಸವದ ಅಧ್ಯಕ್ಷತೆ: ರಾಜ್ಯಪಾಲರು ಹಾಗೂ ಕುಲಾಧಿಪತಿಗಳಾದ ಥಾವರ್‌ಚಂದ್ ಗೆಹ್ಲೋಟ್, ಮುಖ್ಯ ಅತಿಥಿಗಳು: ಉನ್ನತ ಶಿಕ್ಷಣ ಸಚಿವರು ಹಾಗೂ ಮೈಸೂರು ವಿವಿ ಸಮ ಕುಲಾಧಿಪತಿ ಡಾ.ಎಂ.ಸಿ.ಸುಧಾಕರ್, ಘಟಿಕೋತ್ಸವ ಭಾಷಣ: ನವದೆಹಲಿ ಕೇಂದ್ರೀಯ ಸಂಸ್ಕೃತ ವಿವಿ ಕುಲಪತಿ ಪ್ರೊ. ಶ್ರೀನಿವಾಸ ವರಖೇಡಿ, ಉಪಸ್ಥಿತರು: ಸಂಗೀತ ವಿವಿ ಕುಲಪತಿ ಪ್ರೊ. ನಾಗೇಶ್ ವಿ. ಬೆಟ್ಟಕೋಟೆ, ಕುಲಸಚಿವರಾದ ಪ್ರೊ ಎಂ.ಜಿ. ಮಂಜುನಾಥ್, ಶ್ರೀಮತಿ ಕೆ.ಎಸ್. ರೇಖಾ, ಸ್ಥಳ: ಸಂಗೀತ ವಿವಿ ಆವರಣ, ಮಧ್ಯಾಹ್ನ 3ಕ್ಕೆ.


■ **ಸುರುಚಿ ರಂಗಮನೆ:** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ, ಕಥೆ ಹೇಳುವವರು: ತೀರ್ಥಹಳ್ಳಿಯ ಸೇವಾ ಭಾರತಿ ಶಾಲೆಯ ನಿವೃತ್ತ ಮುಖ್ಯೋಪಾಧ್ಯಾಯ ಜಿ. ಮುಕುಂದ್ ಮಾಸ್ಟರ್, ಸ್ಥಳ: ಕಲಾ ಸುರುಚಿ, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ.

■ **ಗೋಪಾಲಸ್ವಾಮಿ ಶಿಶುವಿಹಾರ ಸಂಸ್ಥೆಗಳು:** ಶಾಲಾ ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು: ಕವಿ ಡಾ.ಜಯಪ್ಪ ಹೊನ್ನಾಳಿ, ಅಧ್ಯಕ್ಷತೆ: ಶಿಶುವಿಹಾರ ಅಧ್ಯಕ್ಷ ಡಾ.ಎ.ಎಸ್. ಚಂದ್ರಶೇಖರ್, ಸ್ಥಳ: ಡಾ.ಎಂ.ವಿ. ಗೋಪಾಲಸ್ವಾಮಿ ರಂಗಮಂದಿರ, ಸಂಜೆ 5ಕ್ಕೆ.

ಇಂದಿನ ಪಂಚಾಂಗ

18.01.2025 ಶನಿವಾರ, ಮಳೆ ನಕ್ಷತ್ರ: ಉತ್ತರಾಷಾಢ 11.01.2025 ರಿಂದ 23.01.2025 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಪುಬ್ಬ, ರಾಹುಕಾಲ: ಬೆಳಗ್ಗೆ 9ರಿಂದ 10.30ರವರೆಗೆ

ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ



■ **ವನರಂಗ:** ತಲ್ಕಿ–ಟ್ರುಥ್ ಡ್ರೀಮ್ ವಯಾ ಬೆಂಗಳೂರು (ಕನ್ನಡ), ತಂಡ: ಪಯಣ ರಂಗ ತಂಡ, ಬೆಂಗಳೂರು, ನಿರ್ದೇಶನ: ಶ್ರೀಜಿತ್ ಸುಂದರಂ, ಸಂಜೆ 7ಕ್ಕೆ.

■ **ಭೂಮಿಗೀತ:** ದಶಾನನ ಸ್ವಪ್ನಸಿದ್ಧಿ (ಕನ್ನಡ), ತಂಡ : ಭಳೀರೇ ವಿಚಿತ್ರಮ್, ಸಾಗರ, ರಚನೆ: ಕುವೆಂಪು, ನಿರ್ದೇಶನ: ಮಂಜು ಕೊಡಗು, ಸಂಜೆ 6.30ಕ್ಕೆ.

■ **ಕಿರುರಂಗ ಮಂದಿರ:** ಸಂಜೆ7ಕ್ಕೆ ತಮಾಷಾ (ಮಲಯಾಳಂ), ತಂಡ: ಕ್ಯಾಲಿಕಟ್ ಯೂನಿವರ್ಸಿಟಿ ಲಿಟಲ್ ಥಿಯೇಟರ್ ತ್ರಿಶೂರ್, ಕೇರಳ, ರಚನೆ : ಸಾದತ್ ಹಸನ್ ಮಾಂಟೊ, ನಿರ್ದೇಶನ: ಡಾ. ನೀಲಂ ಮಾನ್‌ಸಿಂಗ್ ಚೌಧರಿ; ಸಂಜೆ 7ಕ್ಕೆ; ವರ್ಣಚಿತ್ರಕಲಾ ಪ್ರದರ್ಶನ, ಅಭಿರಾಮಿ ಕೊಟ್ಟಾಯಂ, ಕೇರಳ; ಶಿಲ್ಪಕಲಾ ಪ್ರದರ್ಶನ, ಸ್ಮೃದುಲ್ ಇ, ಕಣ್ಣೂರು ಕೇರಳ; ಛಾಯಾಚಿತ್ರ ಪ್ರದರ್ಶನ, ನವೀನ್ ಕುಮಾರ್, ಪುತ್ತೂರು; ರಂಗಾಯಣ ನಾಟಕಗಳ ಭಿತ್ತಿಚಿತ್ರಗಳ ಪ್ರದರ್ಶನ.

■ **ರಂಗಾಯಣ ಆವರಣ:** ಮೈಸೂರು ಸ್ವರಪಾನ ತಂಡದಿಂದ ರಂಗಗೀತೆಗಳು, ಸಂಜೆ 5 ರಿಂದ.

■ **ಬಹುರೂಪಿ ಚಲನಚಿತ್ರೋತ್ಸವ:** ಬೆಳಗ್ಗೆ 10 ರಿಂದ ದ ಬಾಯ್ ದ ಮೋಲ್, ದ ಫಾಕ್ಸ್ ಅಂಡ್ ದ ಹಾರ್ಸ್; ಪ್ಯಾಡಿಂಗ್ಟನ್ ಇನ್ ಪೆರು, ನಿರ್ದೇಶನ: ಡಗಲ್ ವಿಲ್ಸನ್; ಮಧ್ಯಾಹ್ನ 12 ರಿಂದ ಕವಿ, ನಿರ್ದೇಶನ: ಗ್ರೆಗ್ ಹೆಲ್ವಿ; ರ್‍ಯಾಗ್ ಡಾಲ್, ನಿರ್ದೇಶನ: ಲಿಯಾನ್ ಲೀ; ಮಧ್ಯಾಹ್ನ 2ರಿಂದ ಸ್ಪಿರಿಟ್: ಸ್ಟಾಲಿಯನ್ ಆಫ್ ದ ಸಿಮರಾನ್, ನಿರ್ದೇಶನ : ಕೆಲ್ಲಿ ಆಸ್ಬರಿ.

■ **ಕಿಂದರಿ ಜೋಗಿ ಆವರಣ:** ಸುಗ್ಗಿ ಕುಣಿತ ಮತ್ತು ಹುತ್ತರಿ ಕೋಲು, ತಂಡ: ಅಭಿನಯ ಕಲಾ ಮಿಲನ ಚಾರಿಟಬಲ್ ಟ್ರಸ್ಟ್, ಭಾಗಮಂಡಲ, ಸಂಜೆ 5.30ಕ್ಕೆ.

■ **ಕರ್ನಾಟಕ ಕಲಾ ಮಂದಿರ:** ಮಕ್ಕಳ ಬಹುರೂಪಿ ನಾಟಕೋತ್ಸವ, ಕಾಬುಲಿವಾಲಾ ಕಾಲಿಂಗ್ (ಇಂಗ್ಲೀಷ್), ತಂಡ: ಬೆಂಗಳೂರು ಲಿಟಲ್ ಥಿಯೇಟರ್ ಫೌಂಡೇಷನ್, ಬೆಂಗಳೂರು, ರಚನೆ: ವಿಜಯ ಪದಕಿ, ನಿರ್ದೇಶನ: ಮುರ್ತುಜ ಖೆಟ್ಟಿ, ವಿಜಯಪದಕಿ, ಸಂಜೆ 7.30ಕ್ಕೆ.

■ **ಬಿ.ವಿ.ಕಾರಂತ ರಂಗಚಾವಡಿ:** ಬೆಳಗ್ಗೆ 10ಕ್ಕೆ ಸಾಮಾಜಿಕ ನ್ಯಾಯ–ಚಳವಳಿಗಳು ಮತ್ತು ರಂಗಭೂಮಿ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ, ಆಶಯ ನುಡಿ: ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಉದ್ಘಾಟನೆ: ಲೇಖಕಿ ಎ. ರೇವತಿ, ಮುಖ್ಯ ಅತಿಥಿಗಳು: ಹಿರಿಯ ಸಾಹಿತಿ ಶ್ರೀಮತಿ ಬಾನು ಮುಸ್ತಾಕ್, ಅಧ್ಯಕ್ಷತೆ: ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌಧರಿ, ಬೆಳಗ್ಗೆ 11.30 ರಿಂದ ವಿವಿಧ ಗೋಷ್ಠಿಗಳು.

ನಿಧನ



ಶೀಲಾ ಎನ್.

ಮೈಸೂರು, ಜ.17–ಮೈಸೂರು ಸರಸ್ವತಿಪುರಂ ನಿವಾಸಿ ಶೀಲಾ ಎನ್. (73) ಜ.15ರಂದು ನಿಧನರಾದರು. ಮೃತರು ಲೇಟ್ ನರಸಿಂಹಮೂರ್ತಿ ಅವರು ಪುತ್ರಿ. ಮೃತರು ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಜ.19ರಂದು ಭಾನುವಾರ ಬೆಳಗ್ಗೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಹರಿಶ್ಚಂದ್ರ ಘಾಟ್‌ನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸರ್ಕಾರ ಉಚಿತವಾಗಿ ಹಣ ಕೊಡುವುದು ಒಳ್ಳೆಯದಲ್ಲ...

• ಇನ್ಫೋಸಿಸ್ ಸಂಸ್ಥಾಪಕ ನಾರಾಯಣ ಮೂರ್ತಿ ಅಭಿಪ್ರಾಯ • ಸರ್ಕಾರ ಉದ್ಯಮಿಗಳನ್ನು ಉತ್ತೇಜಿಸಬೇಕು • ಮಕ್ಕಳಿಗೆ ಸವಾಲು ಎದುರಿಸುವ ಶಕ್ತಿ ನೀಡಬೇಕು • ಜಾಗತಿಕ ಮಾರುಕಟ್ಟೆಯಲ್ಲಿ ಸ್ಪರ್ಧೆ ಎದುರಿಸಬೇಕು • ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನ ಅಳವಡಿಸಿಕೊಳ್ಳಬೇಕು



ಮೈಸೂರಿನ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಶುಕ್ರವಾರ ಭೇರುಂಡ ಫೌಂಡೇಶನ್ ಆಯೋಜಿಸಿದ್ದ ಮೈಸೂರು ಉದ್ಯಮಿಗಳ ವೇದಿಕೆ ಉದ್ಘಾಟನಾ ಸಮಾರಂಭದಲ್ಲಿ (ಎಡದಿಂದ) ಯದುವೀರ್ ಪತ್ನಿ ತ್ರಿಷಿಕಾ ಕುಮಾರಿ, ಸಂಸದ ಯದುವೀರ್, ಇನ್ಫೋಸಿಸ್ ಪ್ರತಿಷ್ಠಾನದ ಮುಖ್ಯಸ್ಥೆ ಡಾ.ಸುಧಾಮೂರ್ತಿ, ಇನ್ಫೋಸಿಸ್ ಸಂಸ್ಥಾಪಕ ಎನ್.ಆರ್.ನಾರಾಯಣ ಮೂರ್ತಿ ಭಾಗವಹಿಸಿದ್ದರು.

ಮೈಸೂರು, ಜ.17(ಬಿಎಲ್‌ಯು)– ಸರ್ಕಾರ, ಉಚಿತವಾಗಿ ಹಣ ಕೊಡುವುದು ಒಳ್ಳೆಯದಲ್ಲ. ಪ್ರತಿಯೊಂದು ಮಗುವಿಗೆ ಗುಣಮಟ್ಟದ ಶಿಕ್ಷಣ ನೀಡಿ, ಸಮಾಜಕ್ಕೆ ಮೂಲಭೂತ ಸೌಕರ್ಯ ಕಲ್ಪಿಸಿ, ಸ್ವಯಂ ಉದ್ಯೋಗ ಸೃಷ್ಟಿಸುವ ಉದ್ಯಮಿಗಳಿಗೆ ಉತ್ತೇಜನ ನೀಡುವುದು ಒಳ್ಳೆಯದು ಎಂದು ವಿಶ್ವದ ಮಾಹಿತಿ ತಂತ್ರಜ್ಞಾನ ದಿಗ್ಗಜ, ಇನ್ಫೋಸಿಸ್ ಸಂಸ್ಥಾಪಕ ಎನ್.ಆರ್.ನಾರಾಯಣ ಮೂರ್ತಿ ಅಭಿಪ್ರಾಯಪಟ್ಟರು.

ಮೈಸೂರಿನ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಇಂದು ಭೇರುಂಡ ಫೌಂಡೇಶನ್ ಆಯೋಜಿಸಿದ್ದ ಮೈಸೂರು ಉದ್ಯಮಿಗಳ ವೇದಿಕೆ ಉದ್ಘಾಟಿಸಿ ಮಾತನಾಡಿದ ಅವರು, ಉದ್ಯೋಗ ಸೃಷ್ಟಿಸುವ ಉದ್ಯಮಿಗಳನ್ನು ಉತ್ತೇಜಿಸಬೇಕು. ಇದರಿಂದ ಉದ್ಯಮ ಬೆಳವಣಿಗೆ ಹೊಂದಿ ದೇಶದಲ್ಲಿ ಉದ್ಯೋಗವಕಾಶ ಹೆಚ್ಚಾಗುತ್ತದೆ ಎಂದು ಹೇಳುವ ಮೂಲಕ ಉಚಿತ ಹಣ ಹಾಗೂ ಉಚಿತ ಯೋಜನೆ ನೀಡುತ್ತಿರುವ ಸರ್ಕಾರದ ಕ್ರಮವನ್ನು ಪರೋಕ್ಷವಾಗಿ ಟೀಕಿಸಿದರು.

ಶಾಲಾ–ಕಾಲೇಜುಗಳಲ್ಲಿ ಮಕ್ಕಳ ಹಾಗೆ ತೇರ್ಗಡೆಗೊಳಿಸುವುದು ಭಾರತದ ಶಿಕ್ಷಣ ವ್ಯವಸ್ಥೆಯಾಗಿದೆ ಎಂದು ಬೇಸರಿಸಿದ ಅವರು, ಆದರೆ, ಸಂಕಷ್ಟದಲ್ಲಿ ಸವಾಲುಗಳನ್ನು ಸಮರ್ಥವಾಗಿ ಎದುರಿಸುವ, ಸಮಸ್ಯೆ ಪರಿಹಾರ ಮಾಡುವ ಮಾರ್ಗೋಪಾಯ ಹಾಗೂ ನಾವಿನ್ಯತೆಯ ಆಲೋಚನೆಗಳನ್ನು ಮಕ್ಕಳಿಗೆ ಹೇಳಿ ಕೊಡುತ್ತಿಲ್ಲ ಎಂದರು.

ಉದ್ಯಮಿಗಳು ಭಾರತದ ಮಾರುಕಟ್ಟೆಗೆ ಮಾತ್ರ ಸೀಮಿತವಾಗಿ ಇರಬಾರದು. ತಾವು ತಯಾರು ಮಾಡುವ ವಸ್ತುಗಳು ಜಾಗತಿಕ ಮಾರುಕಟ್ಟೆಯಲ್ಲಿ ಸ್ಪರ್ಧೆ ಎದುರಿಸುವಂತಿರಬೇಕು. ಈ ಮೂಲಕ ಮಾರುಕಟ್ಟೆ ವಿಸ್ತರಣೆ ಮಾಡಬೇಕು. ಗುಣಮಟ್ಟದ ವಸ್ತುಗಳನ್ನು ಕಡಿಮೆ ಬೆಲೆಯಲ್ಲಿ ಮಾರಾಟ ಮಾಡಿ ಲಾಭ ಗಳಿಸಿದಾಗ ಮಾತ್ರ ಯಶಸ್ವಿ ಉದ್ಯಮಿಯಾಗಿ ರೂಪುಗೊಳ್ಳಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಚೈನಾ, ಜಪಾನ್, ಜರ್ಮನಿ ಸೇರಿದಂತೆ ಕೆಲವು ದೇಶಗಳು ವಿಶ್ವ ದರ್ಜೆಯ ಉತ್ಪನ್ನಗಳನ್ನು ತಯಾರಿಸಿ ಜಾಗತಿಕ ಮಾರುಕಟ್ಟೆಯಲ್ಲಿ ಸ್ಪರ್ಧೆ ಎದುರಿಸುತ್ತವೆ. ಹಾಗೆಯೇ ಭಾರತದ ಉದ್ಯಮಿಗಳು ಸಮರ್ಥವಾಗಿ ಈ ಸ್ಪರ್ಧೆ ಎದುರಿಸುವ ಶಕ್ತಿ ಹೊಂದಬೇಕು ಎಂದು ಸಲಹೆ ನೀಡಿದರು.

ಭಾರತ ಕೃಷಿ ಆಧಾರಿತ ದೇಶವಾಗಿದ್ದು, ನೂತನ ತಂತ್ರಜ್ಞಾನದ ಮೂಲಕ ಬೆಳೆಯಲ್ಲಿ ಹೆಚ್ಚು ಇಳುವರಿ ಪಡೆಯಬೇಕು. ಕಡಿಮೆ ಮಳೆ ಪ್ರದೇಶದಲ್ಲಿ ಇಸ್ರೇಲ್ ಹೆಚ್ಚು ಇಳುವರಿ ಪಡೆಯುತ್ತಿದೆ. ಇದೇ ರೀತಿ ಭಾರತ ಕೂಡ ನೂತನ ತಂತ್ರಜ್ಞಾನ ಅನುಸರಿಸಿ ಹೆಚ್ಚು ಇಳುವರಿ ಪಡೆಯಬೇಕು ಎಂದು ನಾರಾಯಣ ಮೂರ್ತಿ ಹೇಳಿದರು.

ಭಾರತೀಯರು ಜಾಗತಿಕವಾಗಿ ಸ್ಪರ್ಧೆ ಎದುರಿಸಲು ಹೊಸ ಆಲೋಚನೆ, ನೂತನ ತಂತ್ರಜ್ಞಾನ ಹಾಗೂ ಕಲಿಕೆಯತ್ತ ಗಮನ ನೀಡಬೇಕು. ಹೀಗಾದಾಗ ದೇಶ ಅಭಿವೃದ್ಧಿಯಲ್ಲಿ ದಾಪುಗಾಲು ಹಾಕಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಈ ವೇಳೆ ಮಾತನಾಡಿದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಭಾರತದ ಬೇರೆ ನಗರಗಳಿಗೆ ಹೋಲಿಕೆ ಮಾಡಿದರೆ ಮೈಸೂರು ಅಭಿವೃದ್ಧಿಯಾಗಿದೆ. ಆದರೂ ಸಾಮಾಜಿಕವಾಗಿ ಎದುರಾಗುವ ಕೆಲವು ಸಮಸ್ಯೆಗಳನ್ನು ಪರಿಹಾರ ಮಾಡಬೇಕು ಎಂದು ಹೇಳಿದರು.

ನಗರ ಬೆಳವಣಿಗೆ ಸಾಧಿಸಿದಂತೆ ಉದ್ಯಮಗಳು ಬೆಳೆದು ಉದ್ಯೋಗಾವಕಾಶ ದೊರಕಬೇಕು. ಇದರಿಂದ ದೇಶ ಕೂಡ ಅಭಿವೃದ್ಧಿಯತ್ತ ಸಾಗುತ್ತದೆ ಎಂದು ಯದುವೀರ್ ಅಭಿಪ್ರಾಯಪಟ್ಟರು. ಯದುವೀರ್ ಪತ್ನಿ ತ್ರಿಷಿಕಾ ಕುಮಾರಿ, ಉದ್ಯಮಿಗಳಾದ ಪವನ್ ರಂಗ, ಸ್ಯಾವ್ ಚೆರಿಯನ್, ಸುಧನ್ವ ಸೇರಿದಂತೆ ಹಲವು ಉದ್ಯಮಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ನಾರಾಯಣಮೂರ್ತಿ ಇನ್ಫೋಸಿಸ್ ಟೆರರ್; ಕಾರ್ಪೋರೇಟ್ ಗಾಂಧಿ!

ಎನ್.ಆರ್.ನಾರಾಯಣಮೂರ್ತಿ ಅವರು ಇನ್ಫೋಸಿಸ್‌ನಲ್ಲಿ ಟೆರರ್, ಹಾಗೆಯೇ ಕಾರ್ಪೋರೇಟ್ ವಲಯದಲ್ಲಿ ಗಾಂಧಿ ಎಂದು ಇನ್ಫೋಸಿಸ್ ಪ್ರತಿಷ್ಠಾನದ ಮುಖ್ಯಸ್ಥೆ ಡಾ.ಸುಧಾಮೂರ್ತಿ ಬಣ್ಣಿಸಿದರು.

ನಾರಾಯಣಮೂರ್ತಿ ಅವರು ಇನ್ಫೋಸಿಸ್‌ನಲ್ಲಿ ಬಹಳಷ್ಟು ಸವಾಲುಗಳನ್ನು ಸಮರ್ಥವಾಗಿ ಎದುರಿಸಿದ್ದಾರೆ. ಇನ್ಫೋಸಿಸ್ ಯಶಸ್ವಿ ಉದ್ಯಮವಾಗಿ ರೂಪುಗೊಳ್ಳಲು ದಕ್ಷ ಹಾಗೂ ದಿಟ್ಟತನದಿಂದ ಕೆಲಸ ನಿರ್ವಹಿಸಿದ್ದಾರೆ. ಇದರಿಂದ ನಾರಾಯಣ ಮೂರ್ತಿ ಅವರನ್ನು ಇನ್ಫೋಸಿಸ್‌ನಲ್ಲಿ ಟೆರರ್ ಎಂದು ಕರೆಯಲಾಗುತ್ತಿದೆ.

ಕಾರ್ಪೋರೇಟ್ ವಲಯದಲ್ಲಿ ನಾರಾಯಣ ಮೂರ್ತಿ ಬಹಳ ಸರಳ ಸ್ವಭಾವದ ವ್ಯಕ್ತಿಯಾಗಿದ್ದಾರೆ. ತಾಳ್ಮೆ, ಸರಳತೆ, ಮೃದು ಸ್ವಭಾವದ ವ್ಯಕ್ತಿತ್ವ ನೋಡಿ ನಾರಾಯಣ ಮೂರ್ತಿ ಅವರನ್ನು ಕಾರ್ಪೋರೇಟ್ ಗಾಂಧಿ ಎಂದೂ ಕರೆಯುತ್ತಾರೆ ಎಂದು ಡಾ.ಸುಧಾಮೂರ್ತಿ ತಿಳಿಸಿದರು. ಒಬ್ಬ ಉದ್ಯಮಿ ಯಶಸ್ಸಿನ ಹಾದಿಯಲ್ಲಿ ಸಾಗಲು ಕುಟುಂಬದ ಸಹಕಾರ ಬಹಳ ಮುಖ್ಯ. ಉದ್ಯಮದ ಆರಂಭದ ಸಮಯದಲ್ಲಿ ಕುಟುಂಬದ ಜೊತೆ ಹೆಚ್ಚು ಬೆರೆಯಲು ಸಾಧ್ಯವಿರುವುದಿಲ್ಲ. ಒಂದು ಹಂತದಲ್ಲಿ ಸೋಲಾದಾಗ ಧೈರ್ಯ ತುಂಬುವ ಕೆಲಸ ಮಾಡಬೇಕು. ಈ ಹಿನ್ನೆಲೆಯಲ್ಲಿ ಕುಟುಂಬಸ್ಥರು ಉದ್ಯಮಿಯ ಬೆನ್ನೆಲುಬಾಗಿ ನಿಲ್ಲಬೇಕು ಎಂದು ಸಲಹೆ ನೀಡಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ವನಂಗಾನ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಗೇಮ್ ಚೇಂಜರ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಫತೇ(ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಭೂ ಮಂತರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುಐ (ಕ)	4 ಪ್ರದರ್ಶನಗಳು
ರಾಜಕಮಲ್	
ಡಾಕು ಮಹಾರಾಜ್ (ತೆ)	4 ಪ್ರದರ್ಶನಗಳು
ಸಂಗಂ	
ಮ್ಯಾಕ್ಸ್(ಕ)	4 ಪ್ರದರ್ಶನಗಳು
ಲಿಡೋ	
ಭೂ ಮಂತರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಮಾರ್ಕೊ (ಹಿ)	4 ಪ್ರದರ್ಶನಗಳು
ಪ್ರಭಾ	
ಮದಗಜ ರಾಜ (ತ)	5 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಆಫ್ಟರ್ ದಿ ಬ್ರೇಕಪ್ (ಕ): ಬೆ.9.40ಕ್ಕೆ, ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಮ.12.10ಕ್ಕೆ, ಸಂ.5.20ಕ್ಕೆ, ರಾ.7.45ಕ್ಕೆ, ಯುಐ (2024) (ಕ): ಮ.2.35ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 2	ಸೋನಿಕ್ ದಿ ಹೆಡ್ಜಾಗ್ 3(ಇಂ): ಬೆ.11.25ಕ್ಕೆ, ಸಂ.4.30ಕ್ಕೆ, ದೇಶಕ್ಕಾರನ್ (ಮ): ಮ.1.55ಕ್ಕೆ, ಮಾರ್ಕೊ (ಹಿಂ): ರಾ.7ಕ್ಕೆ, ಮಾರ್ಕೊ (ಮ): ರಾ.10.10ಕ್ಕೆ.
ಸ್ಕ್ರೀನ್ 3	ಹರಿದಾಸರ ದಿನಚರಿ (ಕ): ಬೆ.10.30ಕ್ಕೆ, ಕ್ರಾವೆನ್ ದಿ ಹಂಟರ್ (ಇಂ): ಮ.1.40ಕ್ಕೆ, ಸಂ.4.30ಕ್ಕೆ, ಎ ಲೆಜೆಂಡ್ (ಇಂ): ರಾ.7.20ಕ್ಕೆ, ಐಡೆಂಟಿಟಿ (ಮ): ರಾ.10.05ಕ್ಕೆ.
ಸ್ಕ್ರೀನ್ 4	ಮ್ಯಾಕ್ಸ್ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7.05ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪುಷ್ಪಾ 2 (ಕ): ಮ.1ಕ್ಕೆ, ಸ್ವೇಚ್ಛಾ (ಕ): ಸಂ.4.40ಕ್ಕೆ, ಯುಐ (ಕ): ಸಂ.6.55ಕ್ಕೆ, ದೇಶಕ್ಕಾರನ್ (ಮ): ರಾ.9.25ಕ್ಕೆ.
ಸ್ಕ್ರೀನ್ 2	ಮ್ಯಾಕ್ಸ್ (ಕ): ಮ.1.10ಕ್ಕೆ, ಮ.3.50ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಬೆ.11.25ಕ್ಕೆ, ಯುಐ (ಕ): ಮ.1.45ಕ್ಕೆ, ಮ್ಯಾಕ್ಸ್ (ಕ): ಸಂ.6.25ಕ್ಕೆ.
ಸ್ಕ್ರೀನ್ 4	ಮ್ಯಾಕ್ಸ್ (ಕ): ಬೆ.11ಕ್ಕೆ, ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಮ.1.45ಕ್ಕೆ, ಸಂ.6.55ಕ್ಕೆ, ಕ್ರಾವೆನ್ ದಿ ಹಂಟರ್ (ಇಂ): ಸಂ.4.25ಕ್ಕೆ, ರಾ.9.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

189 ಕ್ಷೇತ್ರಗಳ ಶಾಸಕರಿಗೆ ತಲಾ 10 ಕೋಟಿ ಅನುದಾನ ಬಿಡುಗಡೆ ಮಾಡಿದ ಮುಖ್ಯಮಂತ್ರಿ



ಬೆಂಗಳೂರು, ಜ.17– ಹೆಚ್ಚುವರಿ ಅನುದಾನಕ್ಕೆ ಬೇಡಿಕೆ ಇಡುತ್ತಿದ್ದ ಶಾಸಕರನ್ನು ಸಮಾಧಾನಪಡಿಸಲು ಮುಂದಾದ ಮುಖ್ಯಮಂತ್ರಿ ಸಿದ್ದರಾಮಯ್ಯ ಗ್ರಾಮೀಣ ಭಾಗದ ವಿಧಾನಸಭಾ ಕ್ಷೇತ್ರಗಳಿಗೆ ತಲಾ 10 ಕೋಟಿ ರೂ. ಬಿಡುಗಡೆ ಮಾಡಿದ್ದಾರೆ. 2024–25ನೇ ಸಾಲಿನಲ್ಲಿ ರಾಜ್ಯದಲ್ಲಿ ಸುರಿದ ಮಳೆ ಮತ್ತು ಪ್ರವಾಹದಿಂದಾಗಿ ಹಾನಿಗೊಳಗಾದ ಗ್ರಾಮೀಣ ರಸ್ತೆ, ಸೇತುವೆ ಮತ್ತು ಚರಂಡಿ ಕಾಮಗಾರಿಗಳನ್ನು ಕೈಗೊಳ್ಳಲು ರಾಜ್ಯದ ಗ್ರಾಮೀಣ ವಿಧಾನಸಭಾ ಕ್ಷೇತ್ರಗಳಿಗೆ ಸರ್ಕಾರದಿಂದ ತಲಾ 10 ಕೋಟಿ ರೂ. ಹಣ ಬಿಡುಗಡೆ ಮಾಡಲಾಗಿದೆ.

ಗ್ರಾಮೀಣ ಭಾಗದ 189 ವಿಧಾನಸಭಾ ಕ್ಷೇತ್ರಗಳಲ್ಲಿ ರಸ್ತೆಗಳು ತೀವ್ರ ಹಾನಿಯಾಗಿರುವ ಹಿನ್ನೆಲೆಯಲ್ಲಿ ಗ್ರಾಮೀಣ ರಸ್ತೆಗಳ ಸುಧಾರಣೆಗಾಗಿ ರಾಜ್ಯದ 189 ಗ್ರಾಮೀಣ ವಿಧಾನಸಭಾ ಕ್ಷೇತ್ರಗಳಿಗೆ ತಲಾ 10 ಕೋಟಿಗಳಂತೆ ಒಟ್ಟು 1,890 ಕೋಟಿ ರೂ. ಅನುದಾನ ಬಿಡುಗಡೆ ಮಾಡಲಾಗಿದೆ. ಮಳೆ ಹಾನಿಗೆ ಒಳಗಾದ ರಸ್ತೆ ಸೇತುವೆ ಮತ್ತು ಚರಂಡಿ ಕಾಮಗಾರಿ ಕೈಗೊಳ್ಳಲು ಹಣ ಬಿಡುಗಡೆ ಮಾಡಲಾಗಿದ್ದು, ನಿಗದಿತ ಕಾಮಗಾರಿಗಳಿಗಷ್ಟೇ ಬಳಸುವಂತೆ ಸೂಚನೆ ಸಹ ನೀಡಲಾಗಿದೆ.

ಕ್ರೀಡೆ, ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಪಾಲ್ಗೊಂಡು ಸ್ಫೂರ್ತಿ ಪಡೆದ ಸಮಾಜ ಕಲ್ಯಾಣ ಇಲಾಖೆ ಸಿಬ್ಬಂದಿ



ಸಮಾಜ ಕಲ್ಯಾಣ ಇಲಾಖೆಯ ನೌಕರರಿಗೆ ಮೈಸೂರು ವಿಶ್ವವಿದ್ಯಾನಿಲಯದ ಸ್ಪೋರ್ಟ್ಸ್ ಪೆವಿಲಿಯನ್ ಮೈದಾನದಲ್ಲಿ ಆಯೋಜಿಸಿದ್ದ ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆಯನ್ನು ಪ್ರಾದೇಶಿಕ ಆಯುಕ್ತ ಡಿ.ಎಸ್.ರಮೇಶ್ ಉದ್ಘಾಟಿಸಿದರು.

ಮೈಸೂರು,ಜ.17(ಎಂಟಿವೈ)– ಸದಾ ಕೆಲಸ ಕಾರ್ಯದಲ್ಲಿ ಮಗ್ನರಾಗಿರುತ್ತಿದ್ದ ಸಮಾಜ ಕಲ್ಯಾಣ ಇಲಾಖೆಯ ನೌಕರರು ಶುಕ್ರವಾರ ವಿವಿಧ ಕ್ರೀಡೆ ಹಾಗೂ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಪಾಲ್ಗೊಂಡು ರಿಲ್ಯಾಕ್ಸ್‌ನಲ್ಲಿದ್ದರು.

ಮೈಸೂರು ವಿಶ್ವವಿದ್ಯಾನಿಲಯದ ಸ್ಪೋರ್ಟ್ಸ್ ಪೆವಿಲಿಯನ್ ಮೈದಾನದಲ್ಲಿ ಸಮಾಜ ಕಲ್ಯಾಣ ಇಲಾಖೆಯ ನೌಕರರಿಗೆ ಆಯೋಜಿಸಲಾಗಿದ್ದ ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಇಲಾಖೆಯ ಸಿಬ್ಬಂದಿ ಪಾಲ್ಗೊಂಡು ಕ್ರೀಡಾಸ್ಫೂರ್ತಿ ಮೆರೆದರು. ಅಲ್ಲದೆ, ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಪಾಲ್ಗೊಂಡು ಭರಪೂರ ರಂಜನೆ ಪಡೆದರು.

ಸಂತೋಷದಿಂದ ಇರಿ: ಕ್ರೀಡಾಕೂಟಕ್ಕೆ ಪ್ರಾದೇಶಿಕ ಆಯುಕ್ತ ಡಿ.ಎಸ್.ರಮೇಶ್ ಚಾಲನೆ ನೀಡಿ ಮಾತನಾಡಿ, ಕ್ರೀಡೆಯಲ್ಲಿ ಪಾಲ್ಗೊಳ್ಳುವುದರಿಂದ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯ ಹೆಚ್ಚಾಗುವುದರೊಂದಿಗೆ ಆರೋಗ್ಯ ಕಾಪಾಡಿಕೊಳ್ಳಬಹುದು. ಕ್ರೀಡೆಯಲ್ಲಿ ತೊಡಗಿಸಿಕೊಂಡಾಗ ನಮ್ಮನ್ನೇ ನಾವು ಮರೆಯುವಷ್ಟು ಉತ್ಸಾಹ, ಸಂತೋಷ ಉಂಟಾಗುತ್ತದೆ. ಕ್ರೀಡೆಗಳಲ್ಲಿ ಪ್ರತಿಯೊಬ್ಬ ಅಧಿಕಾರಿಗಳು, ನೌಕರರು ಭಾಗವಹಿಸಬೇಕು. ಹೀಗೆ ಭಾಗವಹಿಸುವುದರಿಂದ ಸ್ನೇಹ ಸಂಬಂಧಗಳು ಗಟ್ಟಿಯಾಗುತ್ತವೆ ಎಂದು ಅಭಿಪ್ರಾಯಪಟ್ಟರು.

ಜಿಪಂ ಸಿಇಓ ಕೆ.ಎಂ. ಗಾಯತ್ರಿ ಮಾತನಾಡಿ, ಕಚೇರಿ ಕೆಲಸ ನಿರ್ವಹಿಸುವುದು ನಮ್ಮ ದೈನಂದಿನ ಕರ್ತವ್ಯವಾಗಿದ್ದರೂ ದೈಹಿಕ ಮತ್ತು ಮಾನಸಿಕ ಸದೃಢತೆಯನ್ನು ಕಾಪಾಡಿಕೊಳ್ಳಲು ಕ್ರೀಡೆಗಳಲ್ಲಿ ಪಾಲ್ಗೊಳ್ಳಬೇಕು. ಇದರಿಂದ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳಬಹುದಾಗಿದೆ ಇಂತಹ ಕ್ರೀಡಾ ಚಟುವಟಿಕೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಹೆಚ್ಚಾಗಿ ಆಯೋಜಿಸಬೇಕು ಎಂದು ಸಲಹೆ ನೀಡಿದರು.

ಈ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳುವ ಎಲ್ಲಾ ಸಿಬ್ಬಂದಿ ವರ್ಗ, ಅಧಿಕಾರಿಗಳಿಗೆ ಯಾವುದೇ ಪದನಾಮ ಬರುವುದಿಲ್ಲ. ಎಲ್ಲರೂ ಒಂದೇ ಮೈದಾನದಲ್ಲಿ ನಾನಾ ಕ್ರೀಡಾ ಚಟುವಟಿಕೆಯಲ್ಲಿ ಕ್ರೀಡಾ ಮನೋಭಾವದಿಂದ ತೊಡಗಿಸಿಕೊಳ್ಳಬೇಕು. ಇದರಿಂದ ಒಬ್ಬರಿಂದ ಒಬ್ಬರಿಗೆ ಸೌಹಾರ್ದಯುತವಾದ ವಾತಾವರಣ ಸೃಷ್ಟಿಯಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ರಂಗೇಗೌಡ, ಮುನಿರಾಜು ಎನ್., ಸಹಾಯಕ ನಿರ್ದೇಶಕ ಜನಾರ್ಧನ್, ಸುಲೋಚನಾ, ವೆಂಕಟರಾಜು, ಅಂತರರಾಷ್ಟ್ರೀಯ ಕ್ರೀಡಾಪಟು ಡಾ.ಗಣಪತಿ ಜಕಾತಿ, ನಿಲಯಪಾಲಕರುಗಳು, ಕಚೇರಿ ಸಿಬ್ಬಂದಿ, ಮೈಸೂರು ವಿಭಾಗದ ಎಂಟು ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶಕರು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಪಾಕ್ ಮಾಜಿ ಪ್ರಧಾನಿ ಇಮ್ರಾನ್ ಖಾನ್‌ಗೆ 14 ವರ್ಷ, ಪತ್ನಿ ಬುಶ್ರಾಗೆ 7 ವರ್ಷ ಜೈಲು



ಇಸ್ಲಾಮಾಬಾದ್, ಜ.17– 190 ಮಿಲಿಯನ್ ಪೌಂಡ್‌ಗಳ ಅಲ್ ಖಾದಿರ್ ಟ್ರಸ್ಟ್ ಭ್ರಷ್ಟಾಚಾರ ಪ್ರಕರಣದಲ್ಲಿ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಮತ್ತು ಅವರ ಪತ್ನಿ ಬುಶ್ರಾ ಬೀಬಿ ಅವರು ತಪ್ಪಿತಸ್ಥರೆಂದು ಶುಕ್ರವಾರ ತೀರ್ಪು ನೀಡಿರುವ ಪಾಕಿಸ್ತಾನದ ನ್ಯಾಯಾಲಯ, ಇಬ್ಬರಿಗೆ ಕ್ರಮವಾಗಿ 14 ವರ್ಷ ಮತ್ತು ಏಳು ವರ್ಷಗಳ ಜೈಲು ಶಿಕ್ಷೆಯನ್ನು ವಿಧಿಸಿದೆ.

ಭ್ರಷ್ಟಾಚಾರ ನಿಗ್ರಹ ನ್ಯಾಯಾಲಯದ ನ್ಯಾಯಾಧೀಶ ನಾಸಿರ್ ಜಾವೇದ್ ರಾಣಾ ಅವರು ಇಂದು ತೀರ್ಪನ್ನು ಪ್ರಕಟಿಸಿದ್ದಾರೆ. ಈ ಹಿಂದೆ ವಿವಿಧ ಕಾರಣಗಳಿಂದಾಗಿ ಮೂರು ಬಾರಿ ತೀರ್ಪನ್ನು ಮುಂದೂಡಲಾಗಿತ್ತು. ಆದಿಲಾ ಜೈಲಿನಲ್ಲಿ ಸ್ಥಾಪಿಸಲಾದ ತಾತ್ಕಾಲಿಕ ನ್ಯಾಯಾಲಯದಲ್ಲಿ ತೀರ್ಪು ಪ್ರಕಟಿಸಲಾಗಿದೆ.

ದೇಶದ ಖಜಾನೆಗೆ 190 ಮಿಲಿಯನ್ ಪೌಂಡ್‌ಗಳಷ್ಟು ನಷ್ಟ ಉಂಟು ಮಾಡಿದ್ದಾರೆ ಎಂದು ಆರೋಪಿಸಿ ನ್ಯಾಷನಲ್ ಅಕೌಂಟೆಬಿಲಿಟಿ ಬ್ಯೂರೋ 2023ರ ಡಿಸೆಂಬರ್‌ನಲ್ಲಿ 72 ವರ್ಷದ ಇಮ್ರಾನ್ ಖಾನ್, 50 ವರ್ಷದ ಬುಶ್ರಾ ಬೀಬಿ ಮತ್ತು ಇತರ ಆರು ಜನರ ವಿರುದ್ಧ ಪ್ರಕರಣ ದಾಖಲಿಸಿತ್ತು.

ಈ ಪ್ರಕರಣದಲ್ಲಿ ಆರೋಪಿಗಳಾಗಿರುವ ಉದ್ಯಮಿ ಸೇರಿದಂತೆ ಇತರು ದೇಶದಿಂದ ಪರಾರಿಯಾಗಿರುವ ಕಾರಣದಿಂದಾಗಿ ಇಮ್ರಾನ್ ಖಾನ್ ಮತ್ತು ಬೀಬಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗಿದೆ.

ಬಹುರೂಪಿಯಲ್ಲಿ ಶಾಂತಿ, ಸಹಬಾಳ್ವೆ ಸಂದೇಶ ಸಾರಿದ ನಾಟಕಗಳು



ಕಲಾವಿದೆ ಕೀರ್ತನ ಅವರಿಂದ ಪೂಜಾ ಕುಣಿತ



ಭೂಮಿಗೀತದಲ್ಲಿ 'ಮುರ್ದಾ ಘರ್' ಹಿಂದಿ ನಾಟಕ ಪ್ರದರ್ಶನಗೊಂಡಿತು.

ಮೈಸೂರು, ಜ.17(ಎಂಕೆ)– ಶಾಂತಿ, ಸಾಮರಸ್ಯ, ಸಹಬಾಳ್ವೆಯಲ್ಲಿ ಏಕತೆ ಅಡಗಿದೆ ಎಂಬ ಸತ್ಯ ಸಂಗತಿಯೊಡನೆ ಬರಗಾಲದಿಂದಾದ ಅಲ್ಲೋಲ್ಲ–ಕಲ್ಲೋಲದ ನಡುವೆ ಅಸ್ತಿತ್ವಕ್ಕಾಗಿ ನಡೆಸುವ ಹೋರಾಟ ಬಹುರೂಪಿಯಲ್ಲಿ ಅನಾವರಣಗೊಂಡಿತು..!

ಮೈಸೂರು ರಂಗಾಯಣದ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದಲ್ಲಿ ಶುಕ್ರವಾರ ಪ್ರದರ್ಶನಗೊಂಡ ನಾಟಕಗಳು ವಿಶ್ವದಲ್ಲಿ ಶಾಂತಿ ನೆಲೆಸಬೇಕು. ನೋ ವಾರ್ ಎಂಬ ಘೋಷವಾಕ್ಯದೊಂದಿಗೆ ಬದುಕಿನ ಅಸ್ತಿತ್ವವನ್ನು ವ್ಯಾಖ್ಯಾನಿಸಿದವು.

ಭೂಮಿಗೀತ ವೇದಿಕೆಯಲ್ಲಿ ಇವಾನ್ ಖಾನ್ ನಿರ್ದೇಶನದ 'ಮುರ್ದಾ ಘರ್' ಹಿಂದಿ ನಾಟಕ ಪ್ರದರ್ಶನಗೊಂಡಿತು. ಯುದ್ಧಗಳು ನಮ್ಮನ್ನು ನಾಶ ಮಾಡುತ್ತವೆ. ವೈವಿಧ್ಯತೆ ಮತ್ತು ಸಹಬಾಳ್ವೆಯಲ್ಲಿ ಏಕತೆ ಇದೆ ಎಂಬುದನ್ನು ಹೆಣದ ರಾಶಿಯ ದೃಶ್ಯಗಳ ಮೂಲಕ ಮಧ್ಯಪ್ರದೇಶದ ಅಂಕೂರ್ ರಂಗಮಂಚ್ ಸಮಿತಿ ಕಲಾವಿದರು ಅಚ್ಚುಕಟ್ಟಾಗಿ ಪ್ರಸ್ತುತಪಡಿಸಿದರು.

ಕಿರುರಂಗಮಂದಿರದಲ್ಲಿ ತುಂಡು ಕಾಗದ ಅಥವಾ ಗುರುತಿನ ಚೀಟಿ ಮನುಷ್ಯ ಅಸ್ತಿತ್ವವನ್ನು ಹೇಳಬಲ್ಲದೆ ಎಂಬುದರ ಅನ್ವೇಷಣೆಯನ್ನು ಶಕೀಲ್ ಅಹ್ಮದ್ ನಿರ್ದೇಶನ 'ಅನಾಮಿಕನ ಸಾವು' ನಾಟಕದ ಮೂಲಕ ಪ್ರಸ್ತುತಪಡಿಸಲಾಯಿತು. ವಿಜಯಪುರದ ಸ್ಪಿನ್ನಿಂಗ್ ಟ್ರೀ ಥಿಯೇಟರ್‌ನ ಕಲಾವಿದರು ತಮ್ಮ ಅಭಿನಯದ ಮೂಲಕ ಗುರುತಿನ ಅಡಿಪಾಯವನ್ನೇ ಪ್ರಶ್ನಿಸುವಂತೆ ಮಾಡಿದರು.

ಹಾಗೆಯೇ ವನರಂಗದಲ್ಲಿ ಪ್ರದರ್ಶನಗೊಂಡ ಅರುಣ್‌ಲಾಲ್ ನಿರ್ದೇಶನದ 'ಮತ್ತಾಯ 22:39' ನಾಟಕ, ಬರಗಾಲದಿಂದಾದ ಅಲ್ಲೋಲ–ಕಲ್ಲೋಲ್ಲದ ನಡುವೆ ಬದುಕುಳಿದ ಇಬ್ಬರು ಸ್ನೇಹಿತರು ಬದುಕು ನಡೆಸಲು ನಡೆಸುವ ಹೋರಾಟ, ಅಸ್ತಿತ್ವ ಉಳಿಸಿಕೊಳ್ಳಲು ನಡೆಸುವ ಕಸರತ್ತನ್ನು ಹಾಸ್ಯದ ಹೊನಲಿನಲ್ಲಿ ಪ್ರಸ್ತುಪಡಿಸಲಾಯಿತು.

ಮಕ್ಕಳ ಬಹುರೂಪಿ: ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದ ಮಕ್ಕಳ ಬಹುರೂಪಿ ಅಂಗವಾಗಿ ಕಲಾಮಂದಿರದಲ್ಲಿ ಶ್ರವಣ್ ಹೆಗ್ಗೋಡು ರಚನೆ ಮತ್ತು ನಿರ್ದೇಶನದಲ್ಲಿ ಮಂಗಳೂರಿನ ಕಲಾಭಿ ತಂಡ ಕಲಾವಿದರಿಂದ 'ಎ ಫ್ರೆಂಡ್ ಬಿಯಾಂಡ್ ದ ಫೆನ್ಸ್' ನಾಟಕ ಪ್ರದರ್ಶನಗೊಂಡಿತು. ಎಂಟು ವರ್ಷದ ಇಬ್ಬರು ಮಕ್ಕಳ ಹಾಗೂ ಜಂಬೋ ಎಂಬ ಪುಟ್ಟ ಆನೆ ಮರಿ ನಡುವಿನ ಗಾಢವಾದ ಸ್ನೇಹ, ಯುದ್ಧದ ಹತ್ಯಾಕಾಂಡ ಸಂದರ್ಭದಲ್ಲಿ ಬಂಧನಕ್ಕೊಳಪಡುವ ಚಿತ್ರಣವನ್ನು ಮನಕಲಕುವಂತೆ ಅಭಿನಯಿಸಿದ ಕಲಾವಿದರು ಮುಗ್ಧ ಮಕ್ಕಳಿಗೆ ಯುದ್ಧಗಳಿಂದಾಗುವ ಅನಾಹುತಗಳ ಬಗ್ಗೆ ತಿಳಿಸಿಕೊಟ್ಟರು.

ಪೂಜಾ ಕುಣಿತ ವೈಭವ...!

ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದ ಜಾನಪದ ಉತ್ಸವ ವೇದಿಕೆಯಲ್ಲಿ ಪೂಜಾ ಕುಣಿತದ ವೈಭವ ಸೃಷ್ಟಿಯಾಯಿತು. ಜಾನಪದ ಪ್ರಕಾರಗಳಲ್ಲಿ ಒಂದಾದ ಪೂಜಾ ಕುಣಿದ ಪ್ರದರ್ಶನ ನೀಡಿದ ಕೀರ್ತನರಾಜ್ ಮತ್ತು ತಂಡದ ಕಲಾವಿದರು ರಂಗಾಯಣದ ಆವರಣದಲ್ಲಿ ತಮಟೆ ಸದ್ದು ಮಾರ್ದನಿಸುವಂತೆ ಮಾಡಿದರು. ತಲೆಯ ಮೇಲೆ ಅಲಂಕೃತ ದೇವರ ಮೂರ್ತಿಯನ್ನು ಹೊತ್ತು ಹೆಜ್ಜೆಹಾಕಿದ ಕಲಾವಿದೆ ಕೀರ್ತನ, ಸಾಹಸ ನೃತ್ಯದ ಮೂಲಕ ನೆರೆದಿದ್ದವರನ್ನು ನಿಬ್ಬೆರಗಾಗಿಸಿದರು. ಇದಕ್ಕೂ ಮುನ್ನ ಮುಸ್ಲಿಂ ಸಮುದಾಯದ ಕಲಾವಿದರು ದಫ್ ನೃತ್ಯ ಸಹಬಾಳ್ವೆ ಸಾರಿದರು.


ಅಧ್ಯಕ್ಷರು, ಕಲ್ಪವೃಕ್ಷ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ರಿ), ಪಿರಿಯಾಪಟ್ಟಣ
ನಲ್ಮೆಯ ಒಡನಾಡಿ, ಜನಸೇವಕ ಮೈಸೂರು ನಗರ ಪಾಲಿಕೆ ಮಾಜಿ ಸದಸ್ಯರಾದ
ಶ್ರೀ ಪಿ. ಪ್ರಶಾಂತ್‌ಗೌಡ
ಅವರಿಗೆ ಜನ್ಮದಿನದ ಶುಭಾಶಯಗಳು
ಇವರಿಗೆ ತಾಯಿ ಮಸಣಿಕಮ್ಮ ದೇವಿ ಆರೋಗ್ಯ, ಆಯುಷ್ಯ ಹಾಗೂ ಹೆಚ್ಚಿನ ಅಧಿಕಾರ ನೀಡಿ ಹರಸಲಿ ಎಂದು ಕೋರುತ್ತೇವೆ.
ಕೃಷ್ಣೇಗೌಡ ಕೆ.ಎಚ್. ಉಪಾಧ್ಯಕ್ಷರು
ಪ್ರಕಾಶ್ ಬಿ.ಎ. ನಿರ್ದೇಶಕರು
ದೇವರಾಜ್ ನಿರ್ದೇಶಕರು
ದಿನೇಶ್ ಎಚ್.ಆರ್. ನಿರ್ದೇಶಕರು
ಸುರೇಶ್ ಕೆ.ಎಲ್. ನಿರ್ದೇಶಕರು
ಶಬಾಜ್ ಡಿ.ಆರ್. ನಿರ್ದೇಶಕರು
ದಿನೇಶ್‌ಕುಮಾರ್ ಎ.ಪಿ. ನಿರ್ದೇಶಕರು
ನಟೇಶ್ ಕೆ.ಎನ್. ನಿರ್ದೇಶಕರು
ಎಚ್.ಎಸ್. ಹರೀಶ್ ನಿರ್ದೇಶಕರು
ಬಿ.ಪಿ. ರಾಜೇಶ್ ನಿರ್ದೇಶಕರು
ಕೆ.ಆರ್. ಕೆಂಪಣ್ಣ ನಿರ್ದೇಶಕರು
ಎಚ್.ಕೆ.ವಿಜಯ್‌ಕುಮಾರ್ ನಿರ್ದೇಶಕರು
ಶ್ರುತಿ ಮಂಜುನಾಥ್ ನಿರ್ದೇಶಕರು
ಮಹೇಶ್ವರಿ ನಿರ್ದೇಶಕರು
ಬಿ.ಪಿ. ರಾಜೇಶ್ ಕಾರ್ಯದರ್ಶಿ
ಚಿತ್ರ ಆರ್. ಸಿಬ್ಬಂದಿ
ಆಶಾ ಎಚ್.ಎಂ. ಸಿಬ್ಬಂದಿ
ಕುಮಾರಿ ಸಹಾಯಕರು
ಮಹದೇವ್ ಪಿ.ವಿ. ಪಿಗ್ಮಿ
ಮನು ಎಚ್.ಆರ್. ಪಿಗ್ಮಿ
ಪ್ರಿಯದರ್ಶಿನಿ ಪಿಗ್ಮಿ
ಶುಭಕೋರುವವರು:
ಕಲ್ಪವೃಕ್ಷ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ರಿ),
ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗ, ಪಿರಿಯಾಪಟ್ಟಣ
@bhi design: 97407 97701


ಸಮಾಜ ಸೇವಕರು ಹಾಗೂ ಪಿರಿಯಾಪಟ್ಟಣ ತಾಲ್ಲೂಕು ಒಕ್ಕಲಿಗರ ಸಂಘದ ಗೌರವಾಧ್ಯಕ್ಷರಾದ
ಶ್ರೀ ಪಿ. ಪ್ರಶಾಂತ್‌ಗೌಡ
ಅವರಿಗೆ ಜನ್ಮದಿನದ ಶುಭಾಶಯಗಳು
ತಾಯಿ ಶ್ರೀ ಮಸಣಿಕಮ್ಮ ಇವರಿಗೆ ಆಯಸ್ಸು, ಆರೋಗ್ಯ, ಅಧಿಕಾರ ನೀಡಿ ಹರಸಲಿಯೆಂದು ಕೊರುತ್ತೇವೆ.
ಆನಂದ್‌ಕುಮಾರ್ ಬಿ.ಎಸ್. ಅಧ್ಯಕ್ಷರು
ಸಂದೀಪ ಕೆ.ಡಿ. ಕಾನೂನು ಸಲಹೆಗಾರರು
ಚಂದ್ರ ಹೆಚ್.ಎ. ಉಪಾಧ್ಯಕ್ಷರು
ಜಗದೀಶ್‌ಗೌಡ ವಿ. ಉಪಾಧ್ಯಕ್ಷರು
ಕೆ.ಬಿ.ಮೋಹನ ಕಾರ್ಯದರ್ಶಿ
ಮನು ಬಿ.ಆರ್. ಖಜಾಂಚಿ
ಚೇತನ್ ಕೆ.ಎನ್. ಸಹ ಕಾರ್ಯದರ್ಶಿ
ಮಧು ಸಹ ಕಾರ್ಯದರ್ಶಿ
ಗಣೇಶ್ ಕೆ.ಪಿ. ಸಂಘಟನಾ ಕಾರ್ಯದರ್ಶಿ
ಪದ್ಮನಾಭ ಬಿ.ಎಸ್. ಸಂಘಟನಾ ಕಾರ್ಯದರ್ಶಿ
ಅನಿಲ್‌ಕುಮಾರ್ ಹೆಚ್.ಸಿ. ಸಂಘಟನಾ ಕಾರ್ಯದರ್ಶಿ
ರಾಜೇಶ್ ಹೆಚ್.ಜಿ. ಜಂಟಿ ಕಾರ್ಯದರ್ಶಿ
ಕುಮಾರ್ ಎಂ.ಆರ್. ಜಂಟಿ ಕಾರ್ಯದರ್ಶಿ
ಕುಮಾರ ಎಸ್.ಪಿ. ನಿರ್ದೇಶಕರು
ಪ್ರವೀಣ್ ಕೆ.ಆರ್. ನಿರ್ದೇಶಕರು
ಅರುಣಕುಮಾರ ಬಿ.ಎಸ್. ನಿರ್ದೇಶಕರು
ಕಿರಣ್‌ಕುಮಾರ್ ಕೆ.ಸಿ. ನಿರ್ದೇಶಕರು
ರವಿ ಎಸ್.ಆರ್. ನಿರ್ದೇಶಕರು
ಮಧು ಸಿ.ಆರ್. ನಿರ್ದೇಶಕರು
ಬಿ.ಜೆ. ಭಾಸ್ಕರ ನಿರ್ದೇಶಕರು
ಶುಭಕೋರುವವರು
ಪಿರಿಯಾಪಟ್ಟಣ ತಾಲ್ಲೂಕು ಒಕ್ಕಲಿಗರ ಸಂಘ (ರಿ)
@bhi design: 97407 97701


ನಲ್ಮೆಯ ಒಡನಾಡಿ, ಜನಸೇವಕ ಮೈಸೂರು ನಗರ ಪಾಲಿಕೆ ಮಾಜಿ ಸದಸ್ಯರಾದ
ಶ್ರೀ ಪಿ. ಪ್ರಶಾಂತ್‌ಗೌಡ
ಅವರಿಗೆ ಜನ್ಮದಿನದ ಶುಭಾಶಯಗಳು
ಶ್ರೀ ವಾಸು ಅಣ್ಣ ರವರ ಆಶೀರ್ವಾದಗಳೊಂದಿಗೆ
ದಿ. ವೈ. ಟಿ. ಲಕ್ಷ್ಮಣ್
ಶ್ರೀ ಟಿ. ಪುಟ್ಟಸ್ವಾಮಿ (ಪುರುಷಿ)
ತಾಯಿ ಚಾಮುಂಡೇಶ್ವರಿಯು ಇವರಿಗೆ ಆಯಸ್ಸು, ಆರೋಗ್ಯ, ಅಧಿಕಾರ ನೀಡಿ ಹರಸಲಿಯೆಂದು ಕೊರುತ್ತೇವೆ.
ಶುಭಕೋರುವವರು:
ಪಿ. ಪ್ರಶಾಂತ್‌ಗೌಡ ಸ್ನೇಹ ಬಳಗ, ಬೆಳ್ಳಿಕಟ್ಟೆ ಮೀಸಲು, ದೇವರಾಜ ಮೊಹಲ್ಲಾ
@bhi design: 97407 97701